ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

"ಅಣ್ಣನ ನೆನಪು ಮತ್ತು ಮಗಳು ಕಂಡ ಕುವೆಂಪು–ಒಂದು ನೋಟ"

ನಿಬಂಧಕಾರರು

ಕೆ.ಬಿ.ವೆಂಕಟೇಶ

ಕನ್ನಡ ಎಂ.ಫಿಲ್

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

ಮಾರ್ಗದರ್ಶಕರು

ಡಾ.ಸಿ.ಪಿ.ಕೃಷ್ಣಕುಮಾರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸ ಗಂಗೋತ್ರಿ

ಮೈಸೂರು.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೨೦೦೭–೦೮

ಕನ್ನಡ ವಿಶ್ವವಿದ್ಯಾನಿಲಯ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ನಿಬಂಧ

"ಅಣ್ಣನ ನೆನಪು ಮತ್ತು ಮಗಳು ಕಂಡ ಕುವೆಂಪು–ಒಂದು ನೋಟ"

ನಿಬಂಧಕಾರರು

ಕೆ.ಬಿ.ವೆಂಕಟೇಶ

ಕನ್ನಡ ಎಂ.ಫಿಲ್

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

ಮಾರ್ಗದರ್ಶಕರು

ಡಾ.ಸಿ.ಪಿ.ಕೃಷ್ಣಕುಮಾರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸ ಗಂಗೋತ್ರಿ

ಮೈಸೂರು.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೨೦೦೭-೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ನಮ್ಮ ಸಂಸ್ಥೆಯ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ, **ಕೆ.ಬಿ.ವೆಂಕಟೇಶ** ಅವರು ನನ್ನ ಮಾರ್ಗದರ್ಶನದಲ್ಲಿ **"ಅಣ್ಣನ ನೆನಪು ಮತ್ತು ಮಗಳು ಕಂಡ ಕುವೆಂಪು-ಒಂದು ನೋಟ"** ಎಂಬ ಶೀರ್ಷಿಕೆಯ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ
ಮೈಸೂರು.

ಸ್ಥಳ: ಮೈಸೂರು
ದಿನಾಂಕ: 29.8.08

ಅಭ್ಯರ್ಥಿಯ ಘೋಷಣಾ ಪತ್ರ

ಡಾ.ಸಿ.ಪಿ.ಕೃಷ್ಣಕುಮಾರ್, ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ **"ಅಣ್ಣನ ನೆನಪು ಮತ್ತು ಮಗಳು ಕಂಡ ಕುವೆಂಪು-ಒಂದು ನೋಟ"** ಎಂಬ ವಿಷಯದ ಬಗ್ಗೆ ನಡೆಸಿದ ಅಧ್ಯಯನ ಫಲವೇ ಈ ನಿಬಂಧ

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ನಿಬಂಧಕಾರರು

ಕನ್ನಡ ಎಂ.ಫಿಲ್

ಸ್ಥಳ: ಮೈಸೂರು
ದಿನಾಂಕ: ೨೯.೦೮.೦೮

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಮಾನಸ ಗಂಗೋತ್ರಿ
ಮೈಸೂರು.

“ಅಣ್ಣನ ನೆನಪು ಮತ್ತು ಮಗಳು ಕಂಡ ಕುವೆಂಪು–ಒಂದು ನೋಟ”

ಪರಿವಿಡಿ

ಅಧ್ಯಾಯ ೧

ಉದ್ದೇಶ ಮತ್ತು ವ್ಯಾಪ್ತಿ

ಸಾಹಿತ್ಯವೆಂಬುದು ಮನುಕುಲದ ವರ. ಮಾನವನ ಆಂತರಂಗಿಕ ತುಮುಲಗಳಿಗೆ, ಭಾವ ಕೋಶದಲ್ಲಿನ ನಾನಾ ವಿಸ್ಮಯಗಳ ಅಭಿವ್ಯಕ್ತಿಗೆ ಮುಕ್ತ ವೇದಿಕೆಯನ್ನು ನೀಡಿದೆ. ಸಾಹಿತ್ಯದಲ್ಲಿ ದೊರೆಕೊಳ್ಳುವಷ್ಟು ಸ್ವತಂತ್ರ ನಿರ್ಣಯಗಳು, ಆರೋಗ್ಯಕರ ವಿವೇಚನೆಗಳು, ನಂಬಲಸಾಧ್ಯವಾದ ಚಿದ್‌ವಲಯದ ವಿಚಿತ್ರಗಳು ಮತ್ತೆಲ್ಲಿಯೂ ದುರ್ಲಭ.

ಮಾನವ ಜೀವನದ ಓರೆಕೋರೆಗಳನ್ನು ಸಾಹಿತ್ಯ ಬಿತ್ತರಗೊಳಿಸುತ್ತದೆ. ಜೀವನವನ್ನು ಹೊರತುಪಡಿಸಿ ಸಾಹಿತ್ಯ ಸೃಷ್ಟಿ ಸಾಧ್ಯವಾಗದ ಪ್ರಕ್ರಿಯೆ. ಇವೆರಡೂ ಒಂದೇ ಕೇಂದ್ರದಿಂದ ಹೊರಟ ಪ್ರಭಾವಿ ಬಾಣಗಳು. ಸಂಕೀರ್ಣ ವಿಶ್ವಜೀವನವನ್ನು ಅರ್ಥಮಾಡಿಕೊಳ್ಳುವುದು ಕಷ್ಟದ ಮಾತು ಅದನ್ನು ಮನೋಭೂಮಿಕೆಯ ಅರಿವಿಗೆ ತರಲು ಕೀಲಿ ಕೈಯಾಗಿ ನಮ್ಮ ನಡುವೆ ನಿಂತಿರುವುದು ಸಾಹಿತ್ಯ ವಲಯ, ಸಾಹಿತ್ಯ ಶಿಲ್ಪಿ. ಈ ಮಾತಿಗೆ ಕುವೆಂಪು ಅವರ ಈ ಮಾತುಗಳು ಸಾಕ್ಷಿಯಾಗಿ ನಿಲ್ಲುತ್ತವೆ.

> "ಬರೆಯುವವರು ಬರೆಯಲಾರದಿರುವ ಸಾವಿರಾರು ಜನರಿಗೆ
> ಪ್ರತಿನಿಧಿಗಳು ಕವಿಗಳೆಂದರೆ ನಾಡಿನ ನಾಡಿಗಳು"

ವಿಶ್ವ ಜೀವನದ ವ್ಯಕ್ತಿತ್ವವನ್ನು ಸಾಹಿತ್ಯದ ಮಿತಿಗಿಳಿಸಿ ಶ್ರೀ ಸಾಮಾನ್ಯನ ಮಟ್ಟಕ್ಕೆ ಸಾಮಾನ್ಯವಾಗಿಸುವ ಅಸಾಮಾನ್ಯ ಕೃತಿಯನ್ನು ನಿರ್ಮಿಸುವ ಕವಿ ವಿಭೂತಿಯ ವ್ಯಕ್ತಿತ್ವ ವಿಶ್ವವನ್ನು ಮೀರಿದ್ದೇ ಆಗಿರುತ್ತದೆ ಎಂಬುದರಲ್ಲಿ ಸಂಶಯಕ್ಕೆ ಎಡೆಯಿಲ್ಲ. ಇಂತಹ ವ್ಯಕ್ತಿತ್ವ ಸಾಹಿತ್ಯ ಕೃಷಿಯಲ್ಲಿ ತೊಡಗುವ ಪ್ರತಿಯೊಬ್ಬನಲ್ಲಿಯೂ ಹಾಸು ಹೊಕ್ಕಾಗಿರುತ್ತದೆ ಎಂದು ನಂಬುವುದು ಮೂರ್ಖತೆಯೇ ಸರಿ! ಏಕೆಂದರೆ – ಒಂದು ಮರದಲ್ಲಿ ಬಿಡುವ ಎಲ್ಲಾ ಹಣ್ಣುಗಳು ಒಂದೇ ರೀತಿಯ ರುಚಿಯನ್ನು ನೀಡಬಲ್ಲವು ಎಂಬುದು ಸುಳ್ಳಾದ ಮಾತು. ಈ ವ್ಯತ್ಯಾಸ ಪ್ರಕೃತಿ ನಿಯಮದ ಅಚ್ಚರಿ. ಅಂತೆಯೇ ಸಾಹಿತ್ಯ ಸೃಷ್ಟಿಯಲ್ಲಿರುವ ಕವಿ ವಿಭೂತಿಗಳ ಆತ್ಮ ಜ್ಞಾನದಲ್ಲಿರುವ ವ್ಯತ್ಯಾಸ; ಇದು ವಿಶ್ವ ಗುರುಗಳ ಮನೋ ವ್ಯತ್ಯಾಸ.

ವಿಶ್ವ ವ್ಯಕ್ತಿತ್ವವನ್ನು ಗರ್ಭೀಕರಿಸಿಕೊಂಡಿರುವ ಗುರುಮಾನ್ಯ, ಕವಿ ವಿಭೂತಿಗಳ ಸಾಲಿನಲ್ಲಿ ಅವಿರೋಧವಾಗಿ ನಿಲ್ಲಬಲ್ಲ ಕವಿಚೇತನ ಕನ್ನಡದ ಚಿದ್‌ಶಕ್ತಿ ಕುವೆಂಪು. ಈ

ಮಹಾತ್ಮರ ವ್ಯಕ್ತಿತ್ವ ಪರಿಚಯವನ್ನು ಬೇರೆಯವರಿಗೆ ಮಾಡಿಕೊಡುವುದು ಅಸಾಧ್ಯ ಎಂದೇ ನಾನು ಭಾವಿಸುತ್ತೇನೆ. ಬದಲಾಗಿ, ಈ ವಿಶ್ವಮಾನವನ ಮಕ್ಕಳ ಮುಖಾಂತರ ಅವರ ವ್ಯಕ್ತಿತ್ವದ ಪರಿಚಯವನ್ನು ನನಗೆ ನಾನೇ ಮಾಡಿಕೊಳ್ಳುವ ಪಾಠದಲ್ಲಿ ಇದು ಬಾಲ ಪ್ರಯತ್ನವಷ್ಟೇ. ಕವಿ ಕುವೆಂಪು ಆಧುನಿಕ ಕನ್ನಡ ಸಾಹಿತ್ಯದ ಧ್ವಜಸ್ತಂಭ. ಸಂಸಾರಿಯಾಗಿದ್ದರೂ ಋಷಿ ಜೀವನವನ್ನು ನಡೆಸಿದ ಉದಯರವಿಯೆಂಬ ವಲ್ಮೀಕದ ವಾಸಿ. ಸಾಹಿತ್ಯದ ಮೂಲಕ ನಾನಾ ಕ್ರಾಂತಿಗಳಿಗೆ ಮುಕ್ತ ಆಹ್ವಾನ ನೀಡಿ, ವೈಜ್ಞಾನಿಕತೆಯ ವೈಚಾರಿಕತೆಯ ನಯವಾದ ಚಾಟಿ ಏಟನ್ನು ನೀಡಿ ಪಂಡಿತರು ಮೊದಲ್ಗೊಂಡು ಅವರೊಲುಮೆಯ ಶ್ರೀ ಸಾಮಾನ್ಯನವರೆಗೆ ಆರೋಗ್ಯಕರ ಚಿಂತನೆಯನ್ನು ಮೂಡಿಸಿದ ವಿಚಾರ ಕ್ರಾಂತಿಯ ಹರಿಕಾರ.

ಕವಿ ಕುವೆಂಪು ಬದುಕಿದ್ದು ಮಹೋನ್ನತ ಬದುಕು ಬಾಹ್ಯಾಡಂಬರವಿಲ್ಲದ ಸಾತ್ವಿಕ ಬದುಕು. ಇವರ ಬದುಕಿನ ವಿವಿಧ ಆಯಾಮಗಳು, ಲೋಕ ಭೂಮಿಕೆಗೆ ಸುಲಭವಾಗಿ ಸೇರದ, ದೊರಕೊಳ್ಳದ ವಿನೂತನ ರಹಸ್ಯಗಳು. ಈ ಹಿನ್ನೆಲೆಯಲ್ಲಿ ಅವರ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಸುಲಭ ಗ್ರಾಹ್ಯಗೊಳಿಸಲು ನಾನು ಆರಿಸಿಕೊಂಡಿರುವ ಮಹಾಕವಿಯ ಮಕ್ಕಳ ಕೃತಿಗಳು ಮಹತ್ವದವು. 'ಅಣ್ಣನ ನೆನಪು' - ಪೂರ್ಣ ಚಂದ್ರ ತೇಜಸ್ವಿ ಅವರು ಕೊಟ್ಟಿರುವ ಕುವೆಂಪು ವ್ಯಕ್ತಿತ್ವದ ಅಧಿಕೃತ ದಾಖಲೆ. 'ಮಗಳು ಕಂಡ ಕುವೆಂಪು' – ಕೃತಿ ಕುವೆಂಪು ಅವರ ಮಗಳು ತಾರಿಣಿ ಅವರು ಬರೆದಿರುವ ಸ್ವಾರಸ್ಯಕರ ಕೃತಿ. ಈ ಕೃತಿಗಳ ಅಧ್ಯಯನದಿಂದ ಕುವೆಂಪು ಅವರ ವ್ಯಕ್ತಿತ್ವವನ್ನು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಅನುಸಂಧಾನ ಮಾಡಿದ ಹರುಷ ನಮ್ಮದಾಗುತ್ತದೆ. ಈ ಎರಡು ಕೃತಿಗಳ ಅಧ್ಯಯನದಿಂದ ಹೊರ ಹೊಮ್ಮಿದ ನನ್ನ ಪ್ರಬಂಧದ ಶೀರ್ಷಿಕೆ "ಅಣ್ಣನ ನೆನಪು ಮತ್ತು ಮಗಳು ಕಂಡ ಕುವೆಂಪು ಒಂದು ನೋಟ" ಎಂದಾಗಿ ಇದು ಕೇವಲ ತೇಲು ನೋಟವಷ್ಟೇ ಎಂಬ ಅರಿವು ನನ್ನಲ್ಲಿದೆ.

ಪ್ರಸ್ತುತ ಪ್ರಬಂಧ ಪ್ರಯತ್ನವು ಮೂರು ಅಧ್ಯಾಯಗಳಲ್ಲಿ ಸಾಗಿ ಪರಿ ಸಮಾಪ್ತಿಯನ್ನು ಪಡೆಯುತ್ತದೆ. ಪ್ರಬಂಧದಲ್ಲಿರುವ ಉಪಶೀರ್ಷಿಕೆಗಳು ಪ್ರಬಂಧಕ್ಕೆ ಮೌಲ್ಯಯುತ ವಿಚಾರಗಳನ್ನು ಒದಗಿಸಿವೆ ಎಂಬದನ್ನು ಅಲ್ಲಗಳೆಯುವಂತಿಲ್ಲ. ಕವಿ ಕುವೆಂಪು ಸಾಂಸಾರಿಕ ಜೀವನದ ಬಂಡಿಯನ್ನು ನಡೆಸಿದ ಸ್ವಾರಸ್ಯಕರ ವಿಚಾರಗಳು, ಸಂಸಾರಿಯಾಗಿ ಹೆಂಡತಿ, ಮಕ್ಕಳು, ಬಂಧುಗಳೊಡನೆ ಅವರ ಮನೋಧೋರಣೆ ಹೇಗಿತ್ತು ಎಂಬುದರ ಸೂಕ್ಷ್ಮ ವಿವೇಚನೆ ಇದರಲ್ಲಿ ದೊರೆಕೊಳ್ಳಬಹುದು. ಈ ಎರಡು ಕೃತಿಗಳ ಅಭಿಪ್ರಾಯವನ್ನು ಪುಷ್ಟೀಕರಿಸಲು ಕುವೆಂಪು ಅವರ ಸಾಧ್ಯವಾದಷ್ಟು ಕೃತಿಗಳ ಮೇಲೆ ಕಣ್ಣಾಡಿಸಿದ್ದೇನೆ. ಅವುಗಳಲ್ಲಿರುವ ವಿಚಾರಗಳನ್ನು ಉದಾಹರಿಸಿದ್ದೇನೆ. ಏಕೆಂದರೆ ಕುವೆಂಪು ಬದುಕಿದ್ದನ್ನೇ ಬರೆದರು. ಬರೆದದ್ದನ್ನೇ ಬದುಕಿದರು.

ಅವರ ಬಗೆಗಿನ ವಿಶಿಷ್ಟ ವಿಚಾರಗಳನ್ನು ಹೊರ ಚೆಲ್ಲುವ ಹಲವು ಸಂದರ್ಶನ ಕೃತಿಗಳನ್ನು ಆಸಕ್ತಿಯಿಂದ ಓದಿದ್ದೇನೆ. ಮುಖ್ಯವಾಗಿ ಸಿ.ಪಿ.ಕೆಯವರು ಬರೆದಿರುವ 'ಕುವೆಂಪು ಸಂದರ್ಶನ' ಕೃತಿಯನ್ನು ಓದುವಾಗ, "ಕಂಡೊಡನೆ ತೆಕ್ಕನೆ ಗೌರವವನ್ನುಕ್ಕಿಸುವ ಗೌರವರ್ಣದ ಹಸನ್ಮುಖದ, ಗುಂಗುರು ತಲೆ ಕೂದಲಿನ ತೇಜೋಮೂರ್ತಿ ಕುವೆಂಪು; ಅವರದು ಧೀರ ಗಂಭೀರ ಮೃತ್ಯುಂಜಯ ಭಂಗಿ ಎನ್ನಬೇಕು". ಎಂಬ ವರ್ಣನೆಯನ್ನು ಮತ್ತು ಕುವೆಂಪು ಅವರ ಕಾದಂಬರಿ 'ಕಾನೂರು ಹೆಗ್ಗಡಿತಿ'ಯಲ್ಲಿ ಬರುವ ಹೂವಯ್ಯನ ವ್ಯಕ್ತಿ ಚಿತ್ರವನ್ನು ಓದುವಾಗ ವೈಯಕ್ತಿಕ ದರ್ಶನ ಭಾಗ್ಯದ ಅಭಾವದ ನೋವು ನನ್ನನ್ನು ಸದಾ ಕಾಡುತ್ತದೆ. ಕವಿ ಬದುಕನ್ನು ನಮ್ಮಿಂದ ಬದುಕಲು ಆಗದಿದ್ದರೂ ಅವರ ಆದರ್ಶ ವ್ಯಕ್ತಿತ್ವದ ಅನುಕರಣೆಯನ್ನು ಸ್ವಲ್ಪ ಮಟ್ಟಿಗಾದರೂ ರೂಢಿಸಿಕೊಂಡರೆ ನಮ್ಮ ಬದುಕು ತನ್ನ ಪರಮ ಗಂತವ್ಯದ ಸಾರ್ಥಕತೆಯನ್ನು ಪಡೆಯುತ್ತದೆ. ಈ ಪ್ರಬಂಧವು ನಿರೀಕ್ಷಿಸಿದ್ದನ್ನೆಲ್ಲ ಬಹುಶಃ ನೀಡದಿರಬಹುದು. ಆದರೆ ಈ ಪ್ರಬಂಧದ ರಚನೆಯ ಹಿನ್ನೆಲೆಯಲ್ಲಿ ನಾನು ತುಂಬ ಅಚ್ಚರಿ ಪಟ್ಟಿದ್ದೇನೆ; ನನ್ನ ಪರಿಮಿತಿಯಲ್ಲಿ ವಿಶ್ವದ ಆನಂದವನ್ನು ಅನುಭವಿಸಿದ್ದೇನೆ. ಮಹಾ ವ್ಯಕ್ತಿತ್ವವನ್ನು ಕಂಡುಕೊಳ್ಳುವ ನನ್ನ ಈ ಚೊಚ್ಚಲ ಪ್ರಯತ್ನದ ಹಾದಿಯಲ್ಲಿ ಅನುಸಂಧಾನ ಮಾಡಿದ ಎಲ್ಲಾ ಕೃತಿಗಳಲ್ಲಿ ತಂಗಿದ್ದೇನೆ; ಅವುಗಳಲ್ಲಿರುವ ಅನಂತದಲ್ಲಿ ಅಣುವಿನಷ್ಟು ನನ್ನಲ್ಲಿರಿಸಿಕೊಂಡಿದ್ದೇನೆ ಎಂಬ ಆತ್ಮವಿಶ್ವಾಸ ನನಗಿದೆ. ಈ ಪ್ರಬಂಧವು ತಕ್ಕಮಟ್ಟಿಗೆ ಸ್ವಂತಿಕೆಯನ್ನು ಉಳಿಸಿಕೊಳ್ಳಬಲ್ಲುದು ಎಂಬುದು ನನ್ನ ಅನಿಸಿಕೆ. ಈ ನನ್ನೆಲ್ಲಾ ಮಾತುಗಳು ಕುವೆಂಪು ಅವರ ಈ ಕವನದ ಆಶೀರ್ವಾದ ಬಲದಿಂದ ಹೊರ ಹೊಮ್ಮಿದವು.

ಮನ್ಮನೋ ಮಂದಿರಕೆ, ಓ,
ಲೋಕ ಗುರುಗಳೆಲ್ಲ ಬನ್ನಿ!
ಬನ್ನಿ, ಬನ್ನಿ, ಬನ್ನಿ!-

ತುಳಿಯೆ ನಿಮ್ಮ ಪದತಲ
ದಲ ದಲ ದಲ ಅರಳ್ವುದೆನ್ನ
ಶಿರಃ ಕಮಲ ಕುಟ್ಮಲ!

ತಮೋತಿಮಿರವಳಿಯಲಲ್ಲಿ
ಪರಂಜ್ಯೋತಿ ಬೆಳಗಲಿ;
ಋತದ ಶಿವದ ಆನಂದದ
ಚಿದ್ ವಿಭೂತಿ ತೊಳಗಲಿ.

ಮನ್ಮನೋ ಮಂದಿರಕೆ, ಓ,
ಲೋಕಗುರುಗಳೆಲ್ಲ ಬನ್ನಿ!
ಬನ್ನಿ, ಬನ್ನಿ, ಬನ್ನಿ!

ಅಧ್ಯಾಯ ೨

'ಅಣ್ಣನ ನೆನಪು' – ಒಂದು ನೋಟ

ಪೂರ್ಣ ಚಂದ್ರ ತೇಜಸ್ವಿಯವರು ಸಮಾಜ ಮುಖಿ ಲೇಖಕರಲ್ಲಿ ಅಗ್ರಗಣ್ಯ ಸ್ಥಾನದ ಲೇಖಕ. ತಂದೆ ಕುವೆಂಪುವಿನ ಭೂಮ ವರ್ತುಲದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳದೆ ಸ್ವಂತ ಅಭಿವ್ಯಕ್ತಿಯ ಮೂಲಕ ಸಾಹಿತ್ಯವನ್ನು ವಿನೂತನ ವಲಯಗಳಲ್ಲಿ ಕಸಿಮಾಡಿ ನಿರೀಕ್ಷಿತ ಫಲವನ್ನುಂಡ ಧೀಮಂತ. ಅವರೇ ಹೇಳಿಕೊಳ್ಳುವಂತೆ ತಮ್ಮ ಸಾಹಿತ್ಯಕ ಬದುಕನ್ನು ಪ್ರಭಾವಿಸಿದ ಮೂರು ವ್ಯಕ್ತಿ ಪ್ರತಿಭೆಗಳೆಂದರೆ – "ಲೋಹಿಯಾರವರ ತತ್ವ ಚಿಂತನೆ, ಕುವೆಂಪುರವರ ಕಲಾ ಸೃಷ್ಟಿ, ಕಾರಂತರ ಜೀವನದೃಷ್ಟಿ ಮತ್ತು ಬದುಕಿನ ಪ್ರಯೋಗ ಶೀಲತೆ"[೧]

ವಿಚಾರ ಮುಖಿಯಾದ ತೇಜಸ್ವಿರವರು ಲೋಹಿಯಾರವರ ತತ್ವಾದರ್ಶಗಳಿಗೆ ಮಾನ್ಯತೆಯನ್ನು ನೀಡಿದ್ದರು. ಅವರ ಅಭಿಪ್ರಾಯದಂತೆ "ಲೋಹಿಯಾರವರ ಆಲೋಚನೆಗಳಿಗೆ ಪ್ರತಿಸ್ಪಂದಿಸದ ಚೇತನ ಭಾರತದ ಯಾವುದಕ್ಕೂ ಸ್ಪಂದಿಸಲಾರದು"[೨] ಎಂಬ ಸತ್ಯ ಲೋಹಿಯಾರವರ ವ್ಯಕ್ತಿತ್ವವನ್ನು ಗ್ರಹಿಸಿದ ಯಾವ ವಿಚಾರಮತಿಗಾದರೂ ಮನವರಿಕೆಯಾಗದೆ ಇರಲಾರದು.

ತೇಜಸ್ವಿಯವರ ಕ್ರಾಂತಿಕಾರಕ ಸ್ವಭಾವ ಕೇವಲ ಸಾಹಿತ್ಯಕಷ್ಟೆ ಮೀಸಲಾಗಿರದೆ ಅವರ ಬದುಕಿಗೂ ಚಾಚಿದ್ದು. ಅವರು ನವೀನ ಪ್ರಯತ್ನಗಳಿಂದ ಗೊಡ್ಡು ಸಂಪ್ರದಾಯಗಳನ್ನು ಮೀರಿದ ವೈಚಾರಿಕಪ್ರಭುತ್ವವಾದಿ.

"ಬದಕ್ ಬೇಕಂದ್ರೆ–ಈ ಲೋಕ್ದಿಂದ
ಬಚಾವ್ ಆಗ್ಬೇಕ್ ತುರ್‍ತ;
ನಮ್ದೇ ಲೋಕವುಟ್ಟಿಸ್ಕೋಬೇಕು".

ಜಿ.ಪಿ.ರಾಜರತ್ನಂ ಅವರ ಈ ಪದಗಳಂತೆ ತೇಜಸ್ವಿ ನೈಜವಾದ ಬದುಕು ಬದುಕಿದರು. ಅವರು ಹಲವು ಸ್ವಾರಸ್ಯಕರ ಕೃತಿಗಳನ್ನು ಕನ್ನಡ ಸಾಹಿತ್ಯ ಕಣಜಕ್ಕೆ ನೀಡಿದ್ದಾರೆ. ಅವುಗಳಲ್ಲಿ 'ಚಿದಂಬರ ರಹಸ್ಯ', 'ಕರ್ವಾಲೊ', 'ಕಿರಗೂರಿನ ಗಯ್ಯಾಳಿಗಳು', 'ನಿಗೂಢ ಮನುಷ್ಯರು',

---

[೧] 'ಅಬಚೂರಿನ ಪೋಸ್ಟಾಫೀಸು' ಕೃತಿಯ ಮುನ್ನುಡಿಯಲ್ಲಿ.

[೨] ಅದೇ ಮುನ್ನುಡಿಯಲ್ಲಿ

'ಅಣ್ಣನ ನೆನಪು', 'ಪರಿಸರದ ಕಥೆಗಳು', 'ಅಲೆಮಾರಿ ಅಂಡಮಾನ್', 'ಅಬಚೂರಿನ ಪೋಸ್ಟಾಫೀಸು' ಇತ್ಯಾದಿ. ಇಲ್ಲಿ ವಿಚಾರ ತೆಕ್ಕೆಗೆ ತೆಗೆದು ಕೊಳ್ಳಬೇಕಾದ ಕೃತಿ ರತ್ನವೆಂದರೆ – 'ಅಣ್ಣನ ನೆನಪು'. ಈ ಕೃತಿಯು ಏಕಕಾಲದಲ್ಲಿಯೇ ತೇಜಸ್ವಿ ಮತ್ತು ಕುವೆಂಪು ಅವರ ವಿಚಾರ ವಿಸ್ಮಯಗಳನ್ನು ತೆರೆದಿಡುತ್ತಾ ಹೋಗುತ್ತದೆ. ಒಂದರ್ಥದಲ್ಲಿ ಇದು ಕುವೆಂಪು ಅವರ ಕೆಲವು ಘಟ್ಟಗಳ ಜೀವನ ಚರಿತ್ರೆಯಾದರೆ; ತೇಜಸ್ವಿಯವರ ಅಪರಿಪೂರ್ಣ ಆತ್ಮಕಥೆಯಾಗುತ್ತದೆ. 'ಅಣ್ಣನ ನೆನಪು' ಕೃತಿಯ ಮುನ್ನುಡಿಯಲ್ಲಿ ತೇಜಸ್ವಿ ಅವರು ಹೇಳುವ ಮಾತುಗಳು ಇಲ್ಲಿಗೆ ಪ್ರಸ್ತುತ. – "ನನ್ನ ಚಿಕ್ಕಂದಿನಿಂದ ನಾನು ಓದು ಮುಗಿಸುವವರೆಗಿನ ನಮ್ಮ ತಂದೆಯ ನೆನಪುಗಳನ್ನು ನನ್ನ ದೈನಂದಿನ ದಿನಚರಿ ಮಾದರಿಯಲ್ಲಿ ಬರೆದಿದ್ದೇನೆ. ಅಣ್ಣನ ವೈವಿಧ್ಯತಮ ವ್ಯಕ್ತಿತ್ವದಿಂದಾಗಿ ಈ ನೆನಪಿನ ಸರಣಿಯಲ್ಲಿ ರಾಜಕೀಯ ಮೀಮಾಂಸೆ, ತತ್ವಚಿಂತನೆ, ಕರ್ನಾಟಕ ಸಂಸ್ಕೃತಿ ಅವಲೋಕನ, ಸಾಹಿತ್ಯ ಮೀಮಾಂಸೆ, ಸಾಮಾಜಿಕ ಜಿಜ್ಞಾಸೆ, ಮುಂತಾದವೆಲ್ಲ ಮಿಳಿತಗೊಂಡಿವೆ. ಆದರೂ ನೆನಪುಗಳು ಸಂಕೀರ್ಣವಾಗದಂತೆ, ಜಟಿಲವಾಗದಂತೆ ಸರಳವಾಗಿ, ಜೀವನದ ಸಹಜ ಲಯದಲ್ಲಿ ರೂಪಿಸಲು ಯತ್ನಿಸಿದ್ದೇನೆ".

ನಾನು ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಿದಂತೆ ಕವಿ ವಿಭೂತಿಯ ವ್ಯಕ್ತಿತ್ವ ವಿಶ್ವ ಜೀವನವನ್ನು ಅನುಸಂಧಾನ ಮಾಡಿದ್ದು; ಸುಲಭವಾಗಿ ಗ್ರಹಿಸಲು, ಅರ್ಥೈಸಲು ನಿಲುಕದ್ದು. ಖಾಸಗಿ ಜೀವನದಲ್ಲಿ ಖಾಸಾ ಸಂಬಂಧಗಳ ಕೆಲವು ಅಂಶಗಳನ್ನು ವಾಸ್ತವ ಸ್ಥಿತಿಯಲ್ಲಿ ಗ್ರಹಿಸಲು ಸಾಧ್ಯ. ಆದರೆ ಅದೇ ಅಂತಿಮವಲ್ಲ. ಅದು ಅವರ ಸಾನ್ನಿಧ್ಯದಿಂದ ದೊರಕಿದ ವ್ಯಕ್ತಿತ್ವದ ಒಂದು ತರಂಗ ಮಾತ್ರ. ಅವರ ಸಂಪೂರ್ಣ ಬದುಕಿನ ಬರವಣಿಗೆ ಮತ್ತು ಸಾಂಗತ್ಯದಿಂದ ದೊರಕಿದ ಅಂಶಗಳಿಂದ ಅವರ ವ್ಯಕ್ತಿತ್ವವನ್ನು ತಿಳಿಯಬಹುದಷ್ಟೇ; ಬಹುಶಃ ಅದು ಸಂಕೀರ್ಣವೆಂದೇ ಹೇಳಬೇಕು. ವಿಶ್ವ ಪ್ರತಿಭೆ ವಿಶ್ವ ಜನಸಮುದಾಯವನ್ನು ಒಂದೊಂದು ತೆರನಾಗಿ ದರ್ಶಿಸುತ್ತದೆ. ಏಕತಾನತೆ ಇಲ್ಲದ ಇಂಥ ಮಹಾ ವ್ಯಕ್ತಿತ್ವಗಳ ವರ್ಚಸ್ಸೇ ಹೀಗೆ. ಕವಿಯಾಗಿ, ಋಷಿಯಾಗಿ, ದಾರ್ಶನಿಕನಾಗಿ, ಕಾದಂಬರಿಕಾರನಾಗಿ, ಗುರುವಾಗಿ, ಬಂಧುವಾಗಿ, ಕಾವ್ಯ ಸ್ಫೂರ್ತಿಯಾಗಿ ಒಬ್ಬೊಬ್ಬರಿಗೂ ಅನನ್ಯವಾಗಿ ಕಾಣಸಿಗುತ್ತಾರೆ ಕುವೆಂಪು.

ತೇಜಸ್ವಿಯವರ ಮಾತಿನಲ್ಲಿಯೇ ಹೇಳುವುದಾದರೆ – "ಕುವೆಂಪು ನಮ್ಮ ಕಾಲದ ಅತಿ ಸಂಕೀರ್ಣ ವ್ಯಕ್ತಿತ್ವದ ಪ್ರತಿಭೆ ಎಂದು ನಿರ್ವಿವಾದವಾಗಿ ಹೇಳಬಹುದು. ಅವರನ್ನು ಕವಿಯಾಗಿ, ಕಾದಂಬರಿಕಾರರನ್ನಾಗಿಯೋ, ತತ್ವಮೀಮಾಂಸಕರನ್ನಾಗಿಯೋ, ವಿಚಾರವಾದಿಯನ್ನಾಗಿಯೋ ಪರಿಗಣಿಸಿದಾಗ, ಅಥವಾ ಬಿಡಿಬಿಡಿಯಾಗಿ ಕಥೆ ಕಾವ್ಯಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗಿ, ಸರಳವಾಗಿ ಕಾಣುವ ವ್ಯಕ್ತಿತ್ವ ಒಟ್ಟಂದದಲ್ಲಿ ನೋಡಿದ ಕೂಡಲೇ ಅತ್ಯಂತ ಸಂಕೀರ್ಣವಾಗಿ

ಕಾಣುತ್ತದೆ. ಒಂದು ಕಡೆ ಇಂಗ್ಲೀಷ್ ಜ್ಞಾನ ಅತಿಮುಖ್ಯವೆಂದು ಶೂದ್ರರನ್ನೆಲ್ಲ ಎಚ್ಚರಿಸುತ್ತಾರೆ. ಕನ್ನಡದ ವಿಷಯಕ್ಕೆ ಬಂದಾಗ ಇಂಗ್ಲೀಷನ್ನು ಪೂತನಿ ಎಂದು ಕಟುವಾಗಿ ಟೀಕಿಸುತ್ತಾರೆ. ಭಾರತೀಯ ಸನಾತನ ಧರ್ಮದ ಅತ್ಯಂತ ಕಟು ವಿಮರ್ಶೆ ಕುವೆಂಪುರವರಲ್ಲಿ ಕಾಣಬಹುದು. ಅಂತೆಯೇ ಉಪನಿಷದ್ ದರ್ಶನಗಳ ಆರಾಧನೆಯನ್ನು ಅವರಲ್ಲಿ ಕಾಣಬಹುದು. ಅವರ ಜೀವನಾದ್ಯಂತ ಎಂದೂ ಯಾವ ದೇವಸ್ಥಾನಕ್ಕೂ ಕಾಲಿಡಲಿಲ್ಲ. ಆದರೆ ಅಷ್ಟೇ ಗಾಢವಾಗಿ ಧ್ಯಾನ, ತಪಸ್ಸು, ಪ್ರಾರ್ಥನೆಗಳನ್ನು ಪ್ರತಿಪಾದಿಸಿದರು. ಆದ್ದರಿಂದಲೇ ಅನೇಕ ವೇಳೆ ಸನಾತನಿಗಳು, ದೈವ ಭಕ್ತರು, ವಿಚಾರವಾದಿಗಳು, ನಾಸ್ತಿಕರು, ಎಲ್ಲರೂ ತಮ್ಮ ಪ್ರತಿಪಾದನೆಯನ್ನು ಕುವೆಂಪುರವರಲ್ಲಿ ಕಾಣುತ್ತಾ ಹೋದರು. ಹಾಗಿದ್ದರೆ ಕುವೆಂಪು ಏನು?"[೧]

ತೇಜಸ್ವಿಯವರು ಏಕ ಕಾಲದಲ್ಲಿ ಈ ಪ್ರಶ್ನೆಯನ್ನು ತಮಗೆ ಮತ್ತು ಓದುಗನಿಗೆ ಹಾಕಿದ್ದಾರೆ. ಓದುಗ ಹೇಳುವ ಉತ್ತರ – ವಿಶ್ವಮಾನವ, ವಿಶ್ವಪ್ರತಿಭೆ, ವಿಶ್ವ ಬಂಧುವೆಂದು, ಮತ್ತೆ ಒಟ್ಟಂದದ ವಿಶ್ಲೇಷಣೆ ಬಯಸಿದರೆ, ಹೇಳಲು ಅತೀತವಾದ ವ್ಯಕ್ತಿತ್ವವೆಂದು, ನಮ್ಮಳತೆ ಮೀರಿದ ಅಲೌಕಿಕ ಮನಸ್ಸೆಂದು ಹೇಳಿಬಿಡಬಹುದು. ತೇಜಸ್ವಿ ಅವರು ವಿಶ್ಲೇಷಣಾತ್ಮಕ ಪ್ರತಿಭೆ ಮತ್ತು ಸಂಶ್ಲೇಷಣಾತ್ಮಕ ಪ್ರತಿಭೆಯ ಮೂಲಕ ಒಟ್ಟಂದದಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿಬಹುದು ಎನ್ನುತ್ತಾರೆ. ಕೊನೆಗೆ ಅವರೇ ಹೇಳುವ ಮಾತುಗಳು ಇನ್ನು ಗಮನಾರ್ಹ. "ಯಾವುದನ್ನು ಎಷ್ಟು ಪರಿಪೂರ್ಣವಾಗಿ ತಿಳಿದಿದ್ದೇವೆಂದು ಅಂದುಕೊಂಡರೂ ಬೇರೊಂದು ದೃಷ್ಟಿಕೋನದಿಂದ ಅದು ಅಪರಿಪೂರ್ಣ ಅರ್ಧ ಸತ್ಯವಾಗಿಯೇ ಉಳಿಯುವುದಿಲ್ಲವೇ? ಆದ್ದರಿಂದಲೇ ನನ್ನ ಅಣ್ಣನ ನೆನಪು ಅವರನ್ನರಿಯುವ ಒಂದು ಬಗೆಯ ಸಂಶ್ಲೇಷಣ ವಿಧಾನವಷ್ಟೇ ಹೊರತು ಮತ್ತಾವ ಹೆಚ್ಚುಗಾರಿಕೆಯೂ ಅಲ್ಲಿಲ್ಲ."[೨]

'ಅಣ್ಣನ ನೆನಪು' – ಕುವೆಂಪು ಅವರನ್ನು ಕುರಿತ ತೇಜಸ್ವಿಯವರ ನೆನಪಿನ ಯಾತ್ರೆ, ಜೊತೆ ಜೊತೆಯಲ್ಲಿ ತಮ್ಮ ಬಾಲ್ಯದಿಂದ ಓದು ಮುಗಿಯುವವರೆಗಿನ ಆತ್ಮ ವೃತ್ತಾಂತ. ಅವರ ಬಾಲ್ಯದ ಅನುಭವಗಳು, ತುಂಟತನಗಳು ಓದುಗನನ್ನು ನಗೆಗಡಲಿನಲ್ಲಿ ತೇಲಿಸುತ್ತವೆ. ಕುವೆಂಪುರವರ ಬಗೆಗಿನ ವಿಚಾರಗಳು ವಿಸ್ಮಯವನ್ನುಂಟು ಮಾಡುತ್ತವೆ. ಮಗನ ನೆನಪಿನ ಬಾಂದಳದಲ್ಲಿ ತಂದೆಯಾಗಿ, ಸಂಸಾರಿಯಾಗಿ, ಬಂಧುವಾಗಿ ಕುವೆಂಪು ವ್ಯಕ್ತಿತ್ವ ಹೊರಹೊಮ್ಮುತ್ತದೆ. ಕೃತಕತೆಗೆ ಎಲ್ಲೂ ಎಡೆ ನೀಡದೆ, ನೈಜ ಘಟನೆಗಳು ಪ್ರಸ್ತುತದಲ್ಲಿ ನಮ್ಮ ಕಣ್ಮುಂದೆ ನಡೆಯುತ್ತಿರುವಂತೆ ತೇಜಸ್ವಿ ಚಿತ್ರಿಸಿದ್ದಾರೆ.

---

[೧] 'ಅಣ್ಣನ ನೆನಪು', ಪುಟ ೨.
[೨] 'ಅಣ್ಣನ ನೆನಪು', ಪುಟ ೩.

ಪೂರ್ಣ ಕೃತಿಯನ್ನು ಅವಲೋಕಿಸಿದ ನಾನು ಪ್ರಬಂಧದ ದೃಷ್ಟಿಯಿಂದ, ಇಡಿಯಾದ ವ್ಯಕ್ತಿತ್ವವನ್ನು ಬಿಡಿಯಾಗಿ ಕಾಣಲೋಸುಗ ಕೆಲವು ಉಪ ಶೀರ್ಷಿಕೆಗಳನ್ನು ತಂದಿದ್ದೇನೆ. ಅಲ್ಲಿ ಕುವೆಂಪು ವ್ಯಕ್ತಿತ್ವದ ವಿಸ್ಮಯಗಳು ಕಾಣಸಿಗುತ್ತವೆ ಎಂಬುದು ನನ್ನ ಭಾವನೆ.

೧–ನಾಜೂಕಿನ ತಿಳಿ ಹೇಳಿಕೆ

'ಅಣ್ಣನ ನೆನಪು' ಕೃತಿ ಕುವೆಂಪು ಅವರ ಸಾಂಸಾರಿಕ ಜೀವನದ ಹಲವು ಮಹತ್ವದ ವಿಚಾರಗಳನ್ನು ದಾಖಲು ಮಾಡುತ್ತದೆ. ಕುವೆಂಪು ಅವರನ್ನು ಯುಗದ ಕವಿಯಾಗಿ, ಜಗದ ಕವಿಯಾಗಿ, ಋಷಿಯಾಗಿ, ರಾಷ್ಟ್ರ ಕವಿಯಾಗಿ ಕಲ್ಪಿಸಿಕೊಂಡ ನಾಡಿನ ಜನತೆ, ಈ ಕೃತಿಯ ರಸಾಸ್ವಾದನೆಯ ಅನಂತರ ಕಲ್ಪಿಸಿಕೊಳ್ಳುವ ವ್ಯಕ್ತಿತ್ವ ಮೊದಲನೆಯವುಗಳಿಗಿಂತ ತೀರಾ ಭಿನ್ನವಾಗಿ ಕಾಣುತ್ತವೆ. ಶ್ರೀ ಸಾಮಾನ್ಯನ ಸಾಮಾನ್ಯ ಬದುಕನ್ನೇ ಕುವೆಂಪು ಅವರು ಬದುಕಿದ್ದು ಎಂಬ ಹೊಸ ಅರಿವು ಮೂಡುತ್ತದೆ. ರಸಾವೇಶದ ಭಾವಕೋಶದ ಅಭಿವ್ಯಕ್ತಿಗೆ ದೊರಕಿದ ಪ್ರಶಂಸೆಗಿಂತ, ಸಾಂಸಾರಿಕ ಜೀವನದ ಸರಳ ಲಯದಲ್ಲಿ ಕುವೆಂಪು ಅವರನ್ನು ಗುರುತಿಸಿಕೊಂಡು ನಮ್ಮ ನಡುವೆಯೇ ಉಳಿಸಿಕೊಳ್ಳುವುದರಲ್ಲಿ ಏನೋ ಆನಂದ, ಅನನ್ಯತೆಯ ಭಾವ 'ಅಣ್ಣನ ನೆನಪು' ಓದಿದ ಓದುಗನಿಗಾಗುತ್ತದೆ.

ಕುವೆಂಪು ತಂದೆಯಾಗಿ ಮಕ್ಕಳಿಗೆ ಹೇಳುವ ತಿಳಿವಳಿಕೆ ಪ್ರತಿಯೊಬ್ಬ ಶ್ರೀ ಸಾಮಾನ್ಯ ತಂದೆಗೆ ಮಾದರಿ. ಮಕ್ಕಳನ್ನು ವಯೋಮಿತಿಗೆ ತಕ್ಕಂತೆ ನಡೆಸಿಕೊಂಡವರು ಕುವೆಂಪು. ಬೆಳೆದ ಮಕ್ಕಳನ್ನು ಸ್ನೇಹಿತರಂತೆ ಕಾಣುವ ಮನೋಧರ್ಮವನ್ನು ಅವರೆಂದೂ ಮೀರಿರಲಿಲ್ಲ. ಅಂತೆಯೆ 'ನುಗ್ಗೆಯನ್ನು ಮುರಿದು ಸಾಕು, ಮಕ್ಕಳನ್ನು ಹೊಡೆದು ಸಾಕು' – ಎನ್ನುವ ಗಾದೆಯಂತೆ ಒಮ್ಮೊಮ್ಮೆ ನಡೆದವರು. – ಈ ತತ್ತ್ವ ತೀರಾ ವಿಕೋಪಕ್ಕೆ ಹೋದ ಸಂದರ್ಭಗಳಿಗೆ ಮಾತ್ರ ಅನ್ವಯಿಸುತ್ತಿದ್ದರು. ಉಳಿದಂತೆ ಮಕ್ಕಳಿಗೆ ನಾಜೂಕಿನ ತಿಳಿಹೇಳಿಕೆಯೇ ಇರುತ್ತಿತ್ತು. ಒಮ್ಮೆ ತೇಜಸ್ವಿ ಅವರು ಬಾಲ್ಯದಲ್ಲಿ ಕನ್ನಡಿ ಮುಂದೆ ನಿಂತು ವಾರೆ ಬೈತಲೆ ತೆಗೆದುಕೊಂಡು ತಮ್ಮ ಅಂದವನ್ನು ನೋಡಿ ಆನಂದಪಡುತ್ತಿರುತ್ತಾರೆ. ಅಷ್ಟರಲ್ಲಿ ಅವರ ತಾಯಿ ಬಂದು –"ಥುತ್! ಸೂಳೇರ ಹಂಗೆ ವಾರೆ ಬೈತಲೆ ತೆಕ್ಕೊಂಡು ತಿರುಗು! ಬಾಳ ಚೆನ್ನಾಗಿರ್ತದೆ". ಎಂದು ಬೈದು ಮತ್ತೆ ಅಪ್ಪನ ಹಾಗೇ ತಲೆ ಬಾಚುತ್ತಾರೆ. ಸೂಳೆ ಎಂಬ ಪದದ ಅರ್ಥವೇ ತಿಳಿಯದ ಆ ಬಾಲ ಮನಸ್ಸು ಮುಂದೊಂದು ದಿನ ವಾರೆ ಬೈತಲೆ ಬಿಟ್ಟುಕೊಂಡಂತೆ ಕಂಡ ತಮ್ಮ ಮನೆಕೆಲಸದ ಬೋರಮ್ಮನನ್ನು ಎದುರುಗೊಳ್ಳುತ್ತದೆ. ತಮ್ಮ ಮನದಾಳದ ಸಂಶಯವನ್ನು ಹೋಗಲಾಡಿಸಲು ಬೋರಮ್ಮನನ್ನು ಪ್ರಶ್ನೆ ಮಾಡಲು ನಿರ್ಧರಿಸಿ, ತಮ್ಮ ಚೈತ್ರನನ್ನು ಕಳುಹಿಸಿ ಕೇಳಿಸುತ್ತಾರೆ. ಅದಕ್ಕೆ ಬೋರಮ್ಮ ಅಳುತ್ತಾ ಒಳಹೋಗಿ ಯಜಮಾನತಿ ಅಮ್ಮನವರಿಗೆ ಹೇಳುತ್ತಾಳೆ. ಕೋಪಗೊಂಡ ಅವರು ಕುವೆಂಪುವಿಗೆ ಹೇಳುತ್ತಾರೆ. ಆಗಿನ ಕುವೆಂಪು ಅವರ ವರ್ತನೆ ಸಂಯಮ ಪೂರಿತವಾದದ್ದು, ಅನುಕರಣೀಯವಾದದ್ದು. –"ಅಣ್ಣ ನಮ್ಮನ್ನು ಕರೆದು

ಬೋರಮ್ಮನನ್ನು "ಸೂಳೆ ಎಂದಿದ್ದು ಮಹಾಪರಾಧ" ಎಂದು ಹೇಳಿ ಇನ್ನು ಮೇಲೆ ಮಾತ್ರ ಯಾವ ಹೆಂಗಸಿಗೂ ಈ ರೀತಿ ಹೇಳಕೂಡದು" ಎಂದು ಹೇಳಿದರು. ನಾನು ತುಂಬ ಚಿಕ್ಕವನಿದ್ದುದರಿಂದಲೋ ಏನೋ ಯಾಕೆ ಆ ರೀತಿ ಹೇಳಿದೆ ಎಂದು ಸ್ಪಷ್ಟಪಡಿಸಲು ಗೊತ್ತಾಗದೆ ಸುಮ್ಮನಿದ್ದೆ. ಅಣ್ಣ ಅಷ್ಟು ಹೇಳಿ ಸುಮ್ಮನಾಗಲಿಲ್ಲ. "ನಾಳೆ ಅವಳು ಕೆಲಸಕ್ಕೆ ಬಂದ ಕೂಡಲೇ ನಾವು ನಿನ್ನೆ ಹಾಗೆ ಹೇಳಿದ್ದು ತಪ್ಪಾಯ್ತು, ಕ್ಷಮಿಸು ಅಂತ ಅವಳ ಹತ್ತಿರ ಕ್ಷಮಾಪಣೆ ಕೇಳಿಕೊಳ್ಳಬೇಕು". ಎಂದು ಹೇಳಿಬಿಟ್ಟರು. ನಾನು ಆಗ ಚೋಟುದ್ದ ಇದ್ದರೂ ಕೆಲಸದವಳ ಹತ್ತಿರ ಹೋಗಿ ಹಾಗೆಲ್ಲ ಕೇಳಿಕೊಳ್ಳುವುದು ಭಯಂಕರ ಅವಮಾನವಾಗಿ ಕಂಡಿತು. ನಾನು ಅಸಮ್ಮತಿ ಸೂಚಿಸುತ್ತ ತಲೆಯಾಡಿಸಿದೆ. ಆದರೆ ಏನೂ ಔದಾರ್ಯ ತೋರುವ ಹಾಗೆ ಕಾಣಲಿಲ್ಲ. "ಕ್ಷಮಾಪಣೆ ಕೇಳುವವರೆಗೂ ನಾನು ನಿಮ್ಮ ಹತ್ತಿರ ಮಾತಾಡುವುದೇ ಇಲ್ಲ" ಎಂದು ಬಿಟ್ಟು ಮೌನವಾದರು".[೧]

ಈ ರೀತಿಯಾಗಿ ಮಕ್ಕಳ ಮನಸ್ಸನ್ನು ಮೃದುಲಯದಲ್ಲಿ ತಿದ್ದುವುದು ಕುವೆಂಪು ಅವರ ಜಾಯಮಾನವಾಗಿತ್ತು. ಬಹುಶಃ ಕುವೆಂಪು ಅವರ ಸ್ಥಾನದಲ್ಲಿ ಮತ್ಯಾರಾದರೂ ಇದ್ದಿದ್ದರೆ ತೇಜಸ್ವಿಯ ಬೆನ್ನ ಮೇಲೆ ಬಾಸುಂಡೆ ಏಣಿಸುತ್ತಿದ್ದರು. ಆದರೆ ಕುವೆಂಪು ಅವರ ಮನಸ್ಸು ಸಾತ್ವಿಕವಾದದ್ದು; ರಾಜಸ, ತಾಮಸ ಗುಣಗಳಿಂದ ಮುಕ್ತವಾದದ್ದು.

ಹೀಗೆಯೆ ಮತ್ತೊಂದು ಪ್ರಸಂಗವನ್ನು ಉದಾಹರಿಸಲೇ ಬೇಕು. ಅದಾವುದೆಂದರೆ – ಕುವೆಂಪು ಅವರು ಪ್ರಸಿದ್ಧಿಗೆ ಬಂದ ದಿನಮಾನಗಳಲ್ಲಿ ಅವರನ್ನು ನೋಡಲು ಬರುತ್ತಿದ್ದ ಜನರು ಅನೇಕ ಅವರಲ್ಲಿ ಭಿಕ್ಷುಕರನೇಕರು ಏನಾದರೂ ಯಾಚಿಸಲು ಬರುತ್ತಿದ್ದರು. ಭಿಕ್ಷುಕರಿಗೆ ಸಹಾಯ ಮಾಡಿದರೆ ಅವರ ಸ್ಥಿತಿಯನ್ನು ಪ್ರೋತ್ಸಾಹಿಸಿದಂತೆ ಎಂದು ಬುದ್ಧಿ ಹೇಳಿದ್ದ ಆಶ್ರಮದ ಸಿದ್ದೇಶ್ವರಾನಂದರನ್ನು ನೆನೆಸಿಕೊಂಡು ಪುಟ್ಟ ಮಕ್ಕಳಾದ ತೇಜಸ್ವಿ, ಚೈತ್ರಾ, ಇಂದುಕಲಾ, ತಾರಿಣಿಯರಿಗೆ ಕುವೆಂಪು ಆ ಬುದ್ಧಿ ಮಾತನ್ನು ಪ್ರಸಾರ ಮಾಡಿದ್ದರು. ಇದರಿಂದ ಉತ್ತೇಜಿತರಾದ ಮಕ್ಕಳು ಮನೆ ಹತ್ತಿರ ಬರುತ್ತಿದ್ದ ಭಿಕ್ಷುಕರನ್ನು "ಮುಂದೆ ಹೋಗಪ್ಪಾ" ಎಂದು ಕೂಗುವ ರೂಢಿ ಮಾಡಿಕೊಂಡರು. ಹೀಗೆ ಒಂದು ದಿನ – ಮಕ್ಕಳು ಮುಂದೆ ಹೋಗಪ್ಪಾ ಎನ್ನುವ ಘಟನೆ ಸ್ವಾರಸ್ಯಕರವಾಗಿದೆ ಅದೆಂದರೆ – "ಒಂದು ಸಾರಿ ಬಿಳಿಯ ಅಡ್ಡ ಪಂಚೆ ಹಾಗು ಬಿಳಿಯ ಅಂಗಿ, ಮೈಮೇಲೆ ನಸುಕಂದು ಧೋತ್ರ ಹೊದ್ದವರೊಬ್ಬರು ನಮ್ಮ ಮನೆ ಬಾಗಿಲು ತೆರೆಯಲು ಸಾಹಸ ಪಡುತ್ತಿದ್ದುದನ್ನು ನೋಡಿದೆವು. ಅವರ ಬಗಲಲ್ಲೊಂದು

---

೧ 'ಅಣ್ಣನ ನೆನಪು', ಪುಟ ೧೩-೧೪

ದೊಡ್ಡ ಜೋಳಿಗೆಯಂಥ ಚೀಲ ಇತ್ತು. ಮನೆಯ ಚಿಕ್ಕ ಗೇಟನ್ನು ಕೊಂಚ ಎತ್ತಿ ಅಗುಳಿ ತೆರೆಯ ಬೇಕಾಗಿದ್ದರಿಂದ ಹೊರಗಿನಿಂದ ತೆಗೆಯುವುದು ಕಷ್ಟ ಇತ್ತು. ಅವರನ್ನು ನೋಡಿದ ಚೈತ್ರ "ಮುಂದೆ ಹೋಗಪ್ಪಾ" ಎಂದು ಕೂಗಿದ. ಆದರೂ ಆ ವ್ಯಕ್ತಿ ತಮ್ಮ ಗೇಟು ತೆಗೆಯುವ ಪ್ರಯತ್ನ ಮುಂದುವರಿಸಿದ್ದನ್ನು ನೋಡಿ ನಾವೆಲ್ಲರೂ ಸಾಮೂಹಿಕವಾಗಿ 'ಮುಂದೆ ಹೋಗಪ್ಪಾ' ಎಂದು ಕಿರುಚಿದೆವು. ಆ ಮೇಲೂ ಅವರು ನಿಂತೇ ಇದ್ದುದನ್ನು ನೋಡಿ ನಾವು ಅಣ್ಣನಿಗೆ ಚಾಡಿ ಹೇಳಲು ಒಳಗೆ ಓಡಿದೆವು. ಬಂದ ವ್ಯಕ್ತಿಯೇನೂ ಭಿಕ್ಷುಕರ ರೀತಿ ಕೊಳಕು ಬಟ್ಟೆಯಲ್ಲಿ ಭಿಕ್ಷಾ ಪಾತ್ರೆ ಹಿಡಿದವರಲ್ಲ. ಆದರೆ ಅನೇಕ ದಾಸಯ್ಯಗಳೂ, ಮಾರಿಭಕ್ತರೂ, ಎಂತೆಂಥವಕ್ಕೊ ಚಂದ ವಸೂಲಿ ಮಾಡಲು ಬರುವವರೂ ಟ್ರಿಮ್ಮಾಗಿಯೇ ಬಟ್ಟೆ ಹಾಕಿಕೊಂಡು ಭಿಕ್ಷಾಟನೆ ಬರುತ್ತಿದ್ದುದರಿಂದ ನಾವು ನಮಗೆ ಗುರುತು ಪರಿಚಯ ಇಲ್ಲದೆ ಮನೆಯೊಳಗೆ ಬರುವವರನ್ನೆಲ್ಲಾ ಮುಂದೆ ಕಳಿಸಬೇಕಾದ ಭಿಕ್ಷದವರೆಂದೇ ತೀರ್ಮಾನಿಸಿ ಕೂಗುತ್ತಿದ್ದೆವು. ಅಣ್ಣನ ಬಳಿ ಹೋಗಿ "ಯಾವನೋ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ" ಎಂದು ಚಾಡಿ ಹೇಳಿದೆವು. ಅಣ್ಣ ಹೊರಬಂದು ನೋಡಿದವರೇ ಅವರ ಗುರುತು ಹಿಡಿದು "ಓಹೋ ಬನ್ನಿ ಬನ್ನಿ" ಎಂದೆನ್ನುತ್ತಾ ಅವರೇ ಸರ ಸರ ಮುಂದುವರಿದು ಗೇಟು ತೆಗೆದು ದಟ್ಟಿ ಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು. ಮುಂದೆ ಹೋಗು ಎಂದು ಹೇಳಿದ ಮನುಷ್ಯನಿಗೆ ಸಿಕ್ಕ ಮರ್ಯಾದೆಯನ್ನು ನೋಡಿ ನಾವು ಅಪ್ರತಿಭರಾಗಿ ನಿಂತಿದ್ದೆವು. ಬಂದಾತ "ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲಾ ಮುಂದೆ ಕಳಿಸಿ ಬಿಡಿ ಎಂದು ಹೇಳಿದ್ದೀರಾ?" ಎಂದು ಕೇಳಿದರು. ಅದಕ್ಕೆ ಅಣ್ಣ ನಮ್ಮ ಕಡೆ ತಿರುಗಿ "ಇವರು ಯಾರು ಗೊತ್ತಾ?" ಎಂದು ಕೇಳಿದರು. ನಮಗೇನು ಗೊತ್ತು. ನಮಗೆ ಗೊತ್ತಿದ್ದರೆ ನಾವ್ಯಾಕೆ ಮುಂದೆ ಹೋಗು ಎಂದು ಹೇಳುತ್ತಿದ್ದೆವು. ನಮ್ಮ ಪಿಳಿಪಿಳಿ ಕಣ್ಣುಗಳನ್ನು ನೋಡಿ "ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲ ಇವರೇ ಅದನ್ನು ಬರೆದವರು"[೯] ಎಂದರು.

ಹೀಗೆ ಹತ್ತು ಹಲವು ಬಾರಿ ಮಕ್ಕಳ ತಪ್ಪಿನ ಹಿಂದೆ ಇರುವ ಮುಗ್ಧತೆಯನ್ನು ಗ್ರಹಿಸಿ ದುಡಕದೆ, ಕೋಪಿಸದೆ, ವಿವೇಕ ಕಳೆದುಕೊಳ್ಳದೆ ಅವರ ತಪ್ಪಿನಲ್ಲಿಯೂ ಹಾಸ್ಯವನ್ನು ಕಂಡು ನಕ್ಕು ಅವರನ್ನು ಸರಿದಾರಿಗೆ ತರುವ ನಾಜೂಕಿನ ಪ್ರಯತ್ನ ಮಾಡುತ್ತಿದ್ದರು. ಕುವೆಂಪು ಅಪ್ಪನಾಗಿ ಅವರ ಕರ್ತವ್ಯವನ್ನು ಎಂದೂ ಮರೆತಿರಲಿಲ್ಲ. ಮಕ್ಕಳ ಚೇಷ್ಟೆಯಲ್ಲಿ ಹೊಸ ವಿಚಾರವನ್ನು ಹುಡುಕಿ ತಮ್ಮ ಚಿಂತನೆಯಲ್ಲಿ ತೊಡಗಿ ಅಂತರ್ಮುಖಿಗಳಾಗುತ್ತಿದ್ದುದುಂಟು. ಕಣ್ಣ ಮುಂದೆ ಆಡುವ ಮಕ್ಕಳಿಗೆ ಅವರ ತಪ್ಪುಗಳ ಬಗೆಗೆ ಹೇಳುವ ತಿಳಿವಳಿಕೆಯೇ ಬೇರೆ.

---

[೯] 'ಅಣ್ಣನ ನೆನಪು', ಪುಟ ೧೬೬.

ಹೆಗಲೆತ್ತರ ಬೆಳೆದ ವಯಸ್ಕ ಮಕ್ಕಳಿಗೆ ಹೇಳುವ ತಿಳಿವಳಿಕೆಯೇ ಬೇರೆ. ಕುವೆಂಪು ಅವರು ಯಾವತ್ತೂ ಮಕ್ಕಳ ಮೇಲೆ ತಮ್ಮ ಅಭಿಪ್ರಾಯವನ್ನು ಬಲವಂತವಾಗಿ ಹೇರಲಿಲ್ಲ ಎಂಬುದು ತೇಜಸ್ವಿಯೇ ಒಪ್ಪಿಕೊಳ್ಳುವ ಸತ್ಯ. ತಮ್ಮ ವಯಸ್ಕ ಮಗನಿಗೆ ಬುದ್ಧಿ ಮಾತು ಹೇಳಿದ ಕೆಲವು ಇನ್ನೂ ವಿಶೇಷ ಸಂದರ್ಭಗಳನ್ನು ಇನ್ನೂ ಇಲ್ಲಿ ನಾವು ಮೆಲುಕು ಹಾಕಲೇಬೇಕು.

ತೇಜಸ್ವಿ ಅವರು ಕಾಲೇಜು ಓದುವ ಸಂದರ್ಭದಲ್ಲಿ ಹಲವು ರಚನಾತ್ಮಕ ಕ್ರಿಯೆಗಳಲ್ಲಿ ತೊಡಗಿ ಕ್ರಾಂತಿಕಾರಿ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರು. ಒಂದು ದಿನ ತಾವು ಮಾಡದ ತಪ್ಪಿಗಾಗಿ ನ್ಯಾಯಾಲಯದಲ್ಲಿ ಎಂಟು ರೂಪಾಯಿ ದಂಡ ಕಟ್ಟುವ ಸಂದರ್ಭ ಬಂದಾಗ ಕುವೆಂಪು ಪ್ರಕರಣದ ಪೂರ್ವಾಪರ ವಿಚಾರಿಸಿ ಹೇಳುವ ತಿಳಿಹೇಳಿಕೆ ಗಮನಾರ್ಹ. –"ಕರೆಕ್ಟ್. ನಾನು ನಿನ್ನ ವಿರುದ್ಧ ವಾದ ಮಾಡ್ತಿರೋದು ನಿಜ. ಆದರೆ ಅದನ್ನು ನೀನೇ ಮಾಡ್ಕೊಳೋದನ್ನ ಕಲಿಬೇಕು. ನೀನು ಎಷ್ಟೆಷ್ಟು ನಿನ್ನ ವಿರುದ್ಧ ಯೋಚನೆ ಮಾಡಿಕೊಳ್ಳೋದನ್ನು ಕಲಿತಿಯೋ ಅಷ್ಟಷ್ಟು ನಿನ್ನ ದೃಷ್ಟಿ 'ಆಬ್ಜಕ್ಟಿವ್" ಆಗುತ್ತೆ. ವಸ್ತುನಿಷ್ಠ ಆಗುತ್ತೆ. ಬರೀ ಈ ಕೋರ್ಟ್ಟಿನ ಕೇಸಿಗೊಂದಕ್ಕೆ ಅಲ್ಲ, ಜೀವನದಲ್ಲೂ ಇದು ತುಂಬಾ ಅಗತ್ಯ. ಕಣ್ಣುಪಟ್ಟೆ ಕಟ್ಟಿದ ಕುದುರೆ ಹಾಗೆ ನಿನ್ನ ಮೂಗಿನ ನೇರಕ್ಕೇ ನೀನು ಯೋಚನೆ ಮಾಡೋದು ಸರಿಯಲ್ಲ. ಸಾಹಿತ್ಯದಲ್ಲೂ ಅಷ್ಟೇ ಒಳ್ಳೆ ಬರಹಗಾರನಿಗೂ ಕೆಟ್ಟ ಬರಹಗಾರನಿಗೂ ಇರೋ ವ್ಯತ್ಯಾಸ ಇಷ್ಟೇ ಒಳ್ಳೇ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳುಕೊಂಡಿರ್‍ತಾನೆ."[೧]

ತೇಜಸ್ವಿ ಅವರು ರಾಮ ಮನೋಹರ ಲೋಹಿಯಾ ಅವರ ಗಾಢ ಪ್ರಭಾವಕ್ಕೆ ಒಳಗಾದವರು. ವೈಚಾರಿಕತೆ ಅವರಲ್ಲಿ ಮತಿಗತವಾಗಿತ್ತು. ಸಮಾಜ ಮುಖಿಯಾದ ಅವರ ಆಲೋಚನೆಗಳು ಸದಾ ಕಿಡಿ ಕಾರುವಂತಹವು. ಒಂದು ಸಂದರ್ಭದಲ್ಲಿ ತೇಜಸ್ವಿ ಅವರು ಆದಿ ಚುಂಚನಗಿರಿ ಮಠಾಧೀಶರು ಬಹಿರಂಗವಾಗಿ ಸನಾತನ ಧರ್ಮವನ್ನು ಶ್ರದ್ಧೆಯಿಂದ ಪರಿಪಾಲಿಸಬೇಕೆಂದಾಗ ಆಕ್ರೋಶಗೊಂಡು ಅವರ ವಿರುದ್ಧ ಒಂದು ಲೇಖನವನ್ನು ಬರೆಯುತ್ತಾರೆ. ಅದು ಭಾಷಾ ದೃಷ್ಟಿಯಿಂದ ಬಹು ಕಟುವಾಗಿದ್ದನ್ನು ಗಮನಿಸಿದ ಕುವೆಂಪು, ಪ್ರಜಾಸತ್ತಾತ್ಮಕ ಸಲಹೆ ನೀಡುವುದು ಸಾತ್ವಿಕವಾದದ್ದು ಎಂದರು. ಆದರೆ ಅವರು ಕೀಳು ದರ್ಜೆಯ ಭಾಷಾ ಬಳಕೆಯನ್ನು ಎಂತಹ ಸಂದರ್ಭದಲ್ಲಿಯೂ ಸಹಿಸುತ್ತಿರಲಿಲ್ಲ. "ನೀನು ಈ ರೀತಿ ವೈಯಕ್ತಿಕ ನಿಂದನೆ ಮಟ್ಟದ ಭಾಷೆಯನ್ನು ಬಳಸಿ ನಿನ್ನ ವಿಚಾರಗಳನ್ನೇ ಕೀಳುಗೈದಿದ್ದೀಯ. ಜೊತೆಗೆ ಈ

---

[೧] 'ಅಣ್ಣನ ನೆನಪು', ಪುಟ ೮೮.

ತರದ ಭಾಷೆಯಿಂದ ನೀನು ನಿನ್ನ ಎದುರಿರುವವರನ್ನು ನೋಯಿಸಬಹುದಷ್ಟೇ. ಅವರ ಮನ ಒಲಿಸಲಾಗಲೀ, ಪರಿವರ್ತನೆ ಮಾಡಲಾಗಲೀ ಈ ಧೋರಣೆಯಿಂದ ಎಂದೂ ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲ ಈ ಕುರಿತು ದೂರದಲ್ಲಿರುವ ತಟಸ್ಥರಾಗಿರುವವರನ್ನು, ಸಹಾನುಭೂತಿ ಇರುವವರನ್ನೂ ಸಹ ನೀವೇ ನಿಮ್ಮ ವಿರೋಧಿಗಳನ್ನಾಗಿ ಪರಿವರ್ತಿಸುತ್ತೀರಿ. ನೀನು ಯಾರನ್ನು ಎಷ್ಟೇ ಪ್ರತಿಭಟಿಸಿ ವಿರೋಧಿಸಿದರೂ ಅವರೂ ನಿನ್ನಂತೆಯೇ ಅನ್ನ ತಿನ್ನುವ ಮನುಷ್ಯರು. ನಿನಗೆ ಸರಿ ಅನ್ನಿಸಿದ್ದು, ಅವರಿಗೂ ಸರಿ ಅನಿಸುವಂತೆ ಮಾಡಬಹುದು ಎನ್ನುವ ನಂಬಿಕೆಯನ್ನು ಎಂದೂ ನೀನು ಕಳಕೊಳ್ಳ ಕೂಡದು. ಲಿಬರಲಿಸಂ, ಸೆಕ್ಯೂಲರಿಸಂ ಎಂದರೆ ಇನ್ನೇನು ಅಲ್ಲ. ಎಲ್ಲರೂ ನನ್ನಂತೆಯೇ ಎನ್ನುವ ಅತ್ಯಂತ ಸರಳ ಅನುಭೂತಿ" ಎಂದು ಗಂಭೀರವಾಗಿ ಹೇಳಿದರು. ನನ್ನ ಕಟುವಾದ ಭಾಷೆಯಿಂದ ಅಣ್ಣ ನಾನು ಊಹಿಸಿದಕ್ಕಿಂತ ಹೆಚ್ಚು ನೊಂದುಕೊಂಡಿದ್ದರು."[೧]

ಹೀಗೆ ಹಲವು ಸಂದರ್ಭಗಳಲ್ಲಿ ಎಂದರೆ ಹೆರರ ಬಗ್ಗೆ ಅಭಿಪ್ರಾಯ ಮಂಡಿಸುವಾಗ, ಕಾರು ಓಡಿಸುವಾಗ, ಯಂತ್ರಗಳನ್ನು ರಿಪೇರಿ ಮಾಡುವಾಗ ಮಗನಿಗೆ ನಾಜೂಕಿನ ಸಲಹೆ ತಪ್ಪುತ್ತಿರಲಿಲ್ಲ. ಈ ತಿಳಿ ಹೇಳಿಕೆಯಿಂದ ಮಕ್ಕಳು ಆ ಕ್ಷಣಕ್ಕೆ ಕಸಿ ವಿಸಿಗೊಂಡರೂ ಬೇಸರಿಸಿದವರೇ ಅಲ್ಲ. ಈ ಎಲ್ಲಾ ವಿಚಾರಗಳನ್ನು ಪಾರದರ್ಶಕ ಮನಸ್ಸಿನಿಂದ ಸಹೃದಯ ಪ್ರಭುಗಳಿಗೆ ಉಣಬಡಿಸುವ ತೇಜಸ್ವಿಯವರ ಮನೋ ವೈಶಾಲ್ಯ ಏನೆಂಬುದು ತಿಳಿಯುತ್ತದೆ.

---

[೧] 'ಅಣ್ಣನ ನೆನಪು', ಪುಟ ೨೨೫.

೨–ಸಂಗೀತ ಪ್ರೇಮಿ

"ಬಾ, ಎನ್ನ ಕರೆದೊಯ್ಯು ಕಠಿನವಾಸ್ತವದಿಂದೆ,
ಸಂಗೀತ ಸುಂದರಿಯೆ, ಸವಿಗನಸಿನೆದೆಗೆ!
ಬುವಿಯ ಕೋಟಲೆಯಿಂದ ಚಿಂತೆ ಭೀತಿಗಳಿಂದೆ
ಎಳೆದೊಯ್ಯುತಾತ್ಮವನು ಮುಳುಗಿ ಸೈ ಸುಧೆಗೆ!"[೧]

ಸಾಹಿತ್ಯ ಸೃಜನೆಯ ಜೊತೆಯಲ್ಲಿ ಸಂಗೀತಾಸ್ವಾದನೆಯ ಗೀಳು ಕುವೆಂಪು ಅವರ ರಚನಾತ್ಮಕ ಕ್ರಿಯೆಗಳಲ್ಲಿ ಬಹು ಮುಖ್ಯವಾದದ್ದು. ಸಾಹಿತ್ಯ ಸೃಷ್ಟಿ ಕಾರ್ಯದಲ್ಲಿ ತೊಡಗುವ ಪ್ರತಿಯೊಬ್ಬ ಕೃತಿಕಾರನಿಗೂ ಇರಲೇಬೇಕಾದ ಅನುಭೂತಿ ಇದು. ಕುವೆಂಪು ಅವರಿಗೆ ಸಂಗೀತದಲ್ಲಿ ಯಾವುದೇ ಶಾಸ್ತ್ರೀಯ ತಿಳಿವಳಿಕೆ ಇಲ್ಲದಿದ್ದರೂ ಅದನ್ನು ಆಸ್ವಾದ ಮಾಡುವ ಸಹೃದಯತೆಯಲ್ಲಿ ಅವರು ಅದ್ವಿತೀಯರು. ಅವರ ಸಂಗೀತ ಪೋಷಕ ಹೃದಯದ ಬಗ್ಗೆ ಮಗ ತೇಜಸ್ವಿ ಹೇಳುವುದು ಹೀಗೆ–"ಅಣ್ಣನಿಗೆ ವೀಣಾ ಮತ್ತು ಗೋಟು ವಾದ್ಯ ವಾದನಗಳೆಂದರೆ ತುಂಬಾ ಪ್ರೀತಿ. ಅದರಲ್ಲೂ ದೊರೆಸ್ವಾಮಿ ಐಯ್ಯಂಗಾರ್ಯರ ವೀಣೆ ಮತ್ತು ವರಾಹಸ್ವಾಮಿಯವರ ಗೋಟುವಾದ್ಯ ಎಂದರೆ ಪಂಚಪ್ರಾಣ. ಆಕಾಶವಾಣಿಯಲ್ಲಿ ಅವರ ಕಾರ್ಯಕ್ರಮ ಎಷ್ಟು ಹೊತ್ತಿಗೇ ಇರಲಿ ಅಣ್ಣ ಮರೆಯದೆ ಅದನ್ನು ಹಾಕಿಕೊಂಡು ಕೂರುತ್ತಿದ್ದರು. ಅವರ ಸಂಗೀತ ಇದ್ದ ಸಮಯದಲ್ಲಿ ನಾವು ಯಾರೂ ಮನೆಯಲ್ಲಿ ಹೆಚ್ಚು ಸದ್ದು ಮಾಡುವ ಹಾಗಿರಲಿಲ್ಲ. ಅವರ ಸಂಗೀತ ಮುಗಿಯುವವರೆಗೂ ಅಣ್ಣ ಕುರ್ಚಿಯಲ್ಲಿ ಕುಳಿತು ಮುಚ್ಚಿದ ಕಣ್ಣು ತೆರೆಯುತ್ತಿರಲಿಲ್ಲ. ಒಂದು ಮಾತೂ ಆಡುತ್ತಿರಲಿಲ್ಲ. ದೇವರ ಮನೆಯಲ್ಲಿ ಕುಳಿತು ಧ್ಯಾನ ಮಾಡುವಾಗ ಯಾವ ಏಕಾಗ್ರತೆಯಲ್ಲಿ ಕುಳಿತಿರುತ್ತಿದ್ದರೋ ಹಾಗೇ ಸಂಗೀತ ಕೇಳುವಾಗಲೂ ಅಣ್ಣ ಕುಳಿತಿರುತ್ತಿದ್ದರು. ಅಣ್ಣನಿಗೆ ಸಂಗೀತದ ಬಗ್ಗೆ ಇಷ್ಟೊಂದು ಆಸಕ್ತಿ ಇದ್ದರೂ ಅದನ್ನು ಕುರಿತು ಶಾಸ್ತ್ರೀಯವಾಗಿ ತಿಳಿದುಕೊಳ್ಳಲು ಏನೂ ಪ್ರಯತ್ನಿಸಲಿಲ್ಲ. ಕಾವ್ಯ ರಸಾಸ್ವಾದನೆಗೆ ವ್ಯಾಕರಣ ಪಾಂಡಿತ್ಯ ಹೇಗೆ ಅನಗತ್ಯವೋ ಹಾಗೇ ಸಂಗೀತಕ್ಕೂ ಶಾಸ್ತ್ರೀಯ ಜ್ಞಾನ ಅನವಶ್ಯಕ ಎಂದು ತಿಳಿದಿದ್ದರು. ಅಣ್ಣ ನನಗೆ ಅನೇಕಬಾರಿ ಚಿತ್ರಕಾರ ವೆಂಕಟಪ್ಪನವರ ಬಗ್ಗೆ ಹೇಳುತ್ತಾ ಸಂಗೀತದ ಬಗ್ಗೆ ಅವರಿಗಿದ್ದ ಅಸಾಧಾರಣ ಪ್ರತಿಭೆಯ ಬಗ್ಗೆ ಹೇಳಿದ್ದರು. ಅವರು ಚಿತ್ರಕಲೆಯಲ್ಲಿ ಎಂಥ ಮಹಾ ಕಲಾವಿದರೋ ಅಷ್ಟೇ ಸಂಗೀತದಲ್ಲೂ ಮಹಾ ಕಲಾವಿದ ಎಂದು ಹೊಗಳುತ್ತಿದ್ದರು. ಅಣ್ಣ ಅನೇಕ ಸಾರಿ ಅವರ ವೀಣಾವಾದನ ಕೇಳುವುದಕ್ಕಾಗೇ ಅವರ ಮನೆಗೆ ಹೋಗಿ ರಾತ್ರಿಯೆಲ್ಲಾ ಅವರ ವೀಣಾವಾದನ ಕೇಳಿದ್ದರಂತೆ.

[೧] ಕುವೆಂಪು ಸಮಗ್ರ ಕಾವ್ಯ. ಸಂಪುಟ ೨, ಪುಟ ೩೪೬.

ಅವರ ನಿಷ್ಠುರ ವ್ಯಕ್ತಿತ್ವದ ದೆಸೆಯಿಂದಾಗಿ ಅವರ ಅಮೋಘ ಸಂಗೀತ ಪ್ರೌಢಿಮೆ ಬೆಳಕಿಗೆ ಬರಲಿಲ್ಲ ಎಂದು ವಿಷಾದ ಪಡುತ್ತಿದ್ದರು. ಅಚ್ಚರಿಯ ಸಂಗತಿ ಎಂದರೆ ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದ ಅಮ್ಮ ಅಣ್ಣನಂತೆ ಒಂದು ದಿನವು ಸಂಗೀತವನ್ನು ತಲ್ಲೀನತೆಯಿಂದ ಕುಳಿತು ಕೇಳಿದ್ದು ನನಗೆ ನೆನಪಿಲ್ಲ. ಅಮ್ಮ ವೀಣೆ ನುಡಿಸಿದ್ದಂತೂ ನೋಡಲೇ ಇಲ್ಲ".[೧]

ತೇಜಸ್ವಿ ಅವರು ಹೇಳಿದ ಈ ಮಾತುಗಳಿಂದ ಹಲವು ಅಂಶಗಳನ್ನು ಗ್ರಹಿಸಬಹುದು. ಕುವೆಂಪು ಅವರಿಗೆ ಸಂಗೀತದ ಬಗ್ಗೆ ಇರುವ ಅವಿಚ್ಛಿನ್ನ ಆಸಕ್ತಿ, ತಲ್ಲೀನತೆ ಮತ್ತು ಎಲೆ ಮರೆಕಾಯಿಯಾಗಿ ಮುಚ್ಚಿ ಮರೆಯಾಗುತ್ತಿರುವ ಸಂಗೀತ ಪ್ರೌಢಿಮೆ ಕುರಿತು ಆಶ್ಚರ್ಯ. ಕಾರ್ಯ ನಿಬಿಡ ಸ್ಥಿತಿಯಲ್ಲೂ ಕುವೆಂಪು ಸಂಗೀತ, ಶ್ರವಣಕ್ಕೆಂದೇ ಬಿಡುವು ಮಾಡಿಕೊಳ್ಳುತ್ತಿದ್ದ. ಅದಕ್ಕಾಗಿ ಅಣಿಯಾಗುತ್ತಿದ್ದ ರೀತಿ ಪ್ರಶಂಸನಾರ್ಹವಾದದ್ದು. ಅವರ ಆಲಿಸುವ ಕೌಶಲ ಮತ್ತು ತಾಳ್ಮೆ ಹಿರಿದು; ಅವರಿಗೆ ಅದು ಹಿರಿಯರಿಂದ ಬಂದ ಬಳುವಳಿ ಎಂದು ಶಂಕಿಸಬಹುದು. ತಮ್ಮ ಸಗ್ಗದ ಬೀಡು ಮಲೆನಾಡಿನಲ್ಲಿ ಏರ್ಪಡಿಸುತ್ತಿದ್ದ ಭಾಗವತರಾಟ, ಗಮಕ ವಾಚನ ಇವುಗಳಿಂದ ಅವರ ಸುಪ್ತ ಚೇತನಕ್ಕೆ ಸಂಗೀತರಸಿಕತೆಯ ಅಂಶವೂ ಸೇರ್ಪಡೆಯಾಯಿತೆಂದು ತಿಳಿಯಬಹುದು. ಅದಕ್ಕೆ ಇಂಬೆಂಬಂತೆ ಅವರೆ ರಚಿಸಿರುವ ಈ ಕವನ ಸಾಕ್ಷಿ.

ಹಾಡಿದನು ಗಮಕಿ

ಹಾಡಿದನು ಗಮಕಿ:
ನಾಡು ನಲಿದುದು ರಸದ ಕಡಲಿನಲಿ ದುಮುಕಿ!
ಆ ಅರಣ್ಯಾಕಾಶಗಳ ಬೃಹನ್ಮೌನದಲಿ
ಕತ್ತಲಲಿ ಕನಸಾದ ವಿಸ್ತೀರ್ಣಾಧಾತ್ರಿಯಲಿ
ಚೈತ್ರ ರಾತ್ರಿಯಲಿ
ಮಸಗಿ ತೆರೆ ತೆರೆಯಾಗುತುಬ್ಬಿ
ತೀರವನ್ನಪ್ಪಳಿಸಿ ಕೊಬ್ಬಿ
ಭೋರಿಡುವ ವಾರಿಧಿಯ ಘನಘೋಷದಂದದಲಿ ತಿರೆಯತಬ್ಬಿ
ಮೊಳಗಿ ಬರೆ ಕವಿ ಕುಮಾರವ್ಯಾಸನಾವೇಶವಾಣಿ
ರೋಮಾಂಚನದಿ ವಿಕಂಪಿಸಿತು ಸಹ್ಯಾದ್ರಿ ಶ್ರೇಣಿ![೨]

---

[೧] 'ಅಣ್ಣನ ನೆನಪು', ಪುಟ ೯೨.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೬೯೨.

ಕುವೆಂಪು ಅವರು ತಮಗಿದ್ದ ಸಂಗೀತಾಸಕ್ತಿಯನ್ನು ಎಂದಿಗೂ ತಗ್ಗಿಸಿ ಕೊಂಡವರಲ್ಲ. ಸಂಗೀತ ಕಲಿಯಲು ಮಕ್ಕಳಿಗೆ ಪ್ರತಿ ಹಂತದಲ್ಲೂ ಕೈ ಜೋಡಿಸಿ ಬೆನ್ನು ತಟ್ಟುತ್ತಿದ್ದರು. ತೇಜಸ್ವಿ ಮತ್ತು ಶಾಮಣ್ಣ ಅವರ ಸಂಗೀತ ಕಲಿಯುವ ಆಸಕ್ತಿಯನ್ನು ಕೇಳಿ ಅಚ್ಚರಿಯಿಂದ–"ತೇಜಸ್ವಿಗೆ ಈ ಸಂಸ್ಕಾರ ಈ ಜನ್ಮದ್ದಂತೂ ಅಲ್ಲಾ ಬಹುಶಃ ಜನ್ಮಾಂತರದ್ದಿರಬಹುದು" ಎಂದರಂತೆ. ಅಲ್ಲದೆ ಅವರಿಗೆ ಕಲಿಯಲು ಬೇಕಾದ ಅನುಕೂಲ ಮಾಡಿಕೊಟ್ಟಿದ್ದರು. ಅಂತೆಯೇ ತಮ್ಮ ಹೆಣ್ಣು ಮಕ್ಕಳಾದ ಇಂದುಕಲಾ ಮತ್ತು ತಾರಿಣಿಯರಿಗೆ ಸಂಗೀತಾಭ್ಯಾಸದಲ್ಲಿ ಉನ್ನತ ಸ್ಥಾನ ಪಡೆಯಲುಸಹಾಯ ಮಾಡಿದರು. ದೊಡ್ಡ ದೊಡ್ಡ ವಿದುಷಿಗಳಿಂದೆಲ್ಲಾ ಶಿಕ್ಷಣ ಕೊಡಿಸಿದರು. ಹೆಣ್ಣು ಮಕ್ಕಳಿಬ್ಬರೂ ತಂದೆಯವರ ಭಾವಗೀತೆಗಳಿಗೆ ಸಂಗೀತ ಸಂಯೋಜಿಸಿ ಅವರೆದುರೆ ವೀಣೆ ನುಡಿಸಿ ಹಾಡುತ್ತಿದ್ದರು. ಅದರಿಂದ ಕುವೆಂಪು ಅವರು ಸಂತೋಷಗೊಂಡು 'ಭೇಷ್' ಎನ್ನುತ್ತಿದ್ದರು.

ತೇಜಸ್ವಿಯವರು ಸಂಗೀತವನ್ನು ಕಲಿಯಲು ಮೈಸೂರಿನ ಹೆಸರಾಂತ ಸಂಗೀತ ಪಂಡಿತರೊಬ್ಬರ ಮನೆಗೆ ಹೋಗುತ್ತಾರೆ. ಅವರ ಜೊತೆಯಲ್ಲಿ ಶಾಮಣ್ಣ ಅವರೂ ಹೋಗುತ್ತಾರೆ. ಅಲ್ಲಿ ಆ ವಿದ್ವಾಂಸರು ಉತ್ತರಾದಿ ಸಂಗೀತದ ಬಗ್ಗೆ ನಿಕೃಷ್ಟವಾಗಿ ಮಾತನಾಡುತ್ತಾರೆ. ಒಂದು ರೀತಿಯಲ್ಲಿ ಅಸ್ಪೃಶ್ಯತಾ ಭಾವನೆಯನ್ನು ವ್ಯಕ್ತಪಡಿಸಿ ಆ ಸಂಗೀತವನ್ನು ತುರುಕರ ಸಂಗೀತವೆಂದು ಹೀಗಳೆಯುತ್ತಾರೆ. ಈ ವಿಚಾರವನ್ನು ತೇಜಸ್ವಿಯವರು ಕುವೆಂಪು ಅವರಲ್ಲಿ ಹೇಳಿದಾಗ; ಕುವೆಂಪು ಅವರು ಸಂಗೀತದ ಜೀವಂತ ಸಾಮರಸ್ಯದ ಬಗ್ಗೆ ಒಂದು ಸುಧೀರ್ಘ ಅಭಿಪ್ರಾಯವನ್ನೇ ಮಂಡಿಸುತ್ತಾರೆ. "ಮೊಗಲರ ಕಾಲದಲ್ಲಿ ಪರ್ಷಿಯಾ ಅರೇಬಿಯಾ ಸಂಸ್ಕೃತಿಗಳ ಸಂಪರ್ಕದಿಂದ ಭಾರತೀಯ ಸಂಗೀತ ಬೇಕಾದಷ್ಟು ಪಡಕೊಂಡಿರಬಹುದು! ತಮಗೆ ರುಚಿಸದ ಮಾತ್ರಕ್ಕೆ ಅದನ್ನು ತುರುಕರ ಸಂಗೀತ, ಅಸ್ಪೃಶ್ಯ ಎಂದು ಸಂಗೀತದಲ್ಲೂ ಜಾತೀಯತೆ ತರುವುದರಲ್ಲಿ ಯಾವ ಅರ್ಥವೂ ಇಲ್ಲ. ಬೇರೆ ಬೇರೆ ಸಂಸ್ಕೃತಿಗಳ ಸಂಪರ್ಕದಿಂದ ಕಲಿಯುತ್ತಾ ಬದಲಾವಣೆಗೊಳ್ಳುತ್ತಾ ಹೋಗುವುದೇ ಜೀವಂತ ಸಂಸ್ಕೃತಿಯ ಲಕ್ಷಣ. ಕರ್ನಾಟಕ ಸಂಗೀತದಲ್ಲೂ ಪಿಟೀಲು ಚೌಡಯ್ಯನವರು ತಮ್ಮ ಪಿಟೀಲಿಗೆ ಎಂಟು ತಂತಿ ಹಾಕಿಕೊಂಡು ವಾದನ ಪ್ರಾರಂಬಿಸಿದಾಗ ಇದೇ ತರ ನಮ್ಮ ಸಂಗೀತಕ್ಕೆ ಮೈಲಿಗೆ ಆಯ್ತು ಎಂದು ಕೂಗಾಡಿದ ವಿದ್ವಾಂಸರು ಬೇಕಾದಷ್ಟು ಜನ ಇದ್ದರು. ಆ ಮೇಲೆ ಅವರ ಅಮೋಘ ಸಂಗೀತ ಕೇಳಿ ಎಲ್ಲ ತೆಪ್ಪಗಾದರು. ನಮ್ಮಲ್ಲಿ ಎಷ್ಟೋ ಜನ ಸಂಗೀತಗಾರರು ಕಲಾವಿದರು ವಿಜ್ಞಾನಿಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ್ದರೂ ಜನ ಸಾಮಾನ್ಯರಿಗಿರುವಷ್ಟೂ ಸಹ ಕಾಮನ್ ಸೆನ್ಸ್ ಇರುವುದಿಲ್ಲ. ಮುಸ್ಲಿಮರು ನಮ್ಮನ್ನು ಗೆದ್ದು

ಆಳಿದರು ಎನ್ನುವ ದ್ವೇಷಕ್ಕೆ ಔತ್ತರೇಯ ಸಂಸ್ಕೃತಿಯನ್ನೆಲ್ಲಾ ತುರುಕರ ಸಂಸ್ಕೃತಿ ಎನ್ನುವುದಾದರೆ ದಕ್ಷಿಣದ್ದೆಲ್ಲಾ ಯಾವ ಜಾತಿಯವರದ್ದು? ಬ್ರಾಹ್ಮಣರದ್ದೋ? ಚಾರಿತ್ರಿಕವಾಗಿ ನೋಡಿದರೆ ಸಹ ಇವರ ಎಲ್ಲಾ ಮಡಿವಂತಿಕೆಯನ್ನೂ ಬದಿಗೊತ್ತಿ ಯಾವು ಯಾವುದೋ ಜಾತಿಗಳಿಂದೆಲ್ಲಾ ಅಸಾಧಾರಣ ಕಲಾವಿದರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದು ಕಾಣುತ್ತದೆ. ಪರ್ಷಿಯ ಸಂಸ್ಕೃತಿಯ ಸಂಪರ್ಕದಿಂದ ಭಾರತೀಯ ವಾಸ್ತುಶಿಲ್ಪದಿಂದ ಹಿಡಿದು ಸಂಗೀತ, ಚಿತ್ರಕಲೆಗಳವರೆಗೆ ಆಗಿರುವ ಲಾಭ ಅಷ್ಟಿಷ್ಟಲ್ಲ. ಕೇವಲ ತಿಂಡಿ ತಿನಿಸುಗಳನ್ನೇ ಪರಿಗಣಿಸಿದರೂ ಜಿಲೇಬಿ, ಜಹಾಂಗೀರು, ದೂದ್‌ಪೇಡ, ನಾನಾ ನಮೂನೆ ಹಲ್ವಾಗಳು ಇವೆಲ್ಲಾ ಮೊಗಲರು ಬರುವುದಕ್ಕೆ ಮೊದಲು ಎಲ್ಲಿದ್ದುವು? ಇವೆಲ್ಲಾ ಪರ್ಷಿಯಾದಲ್ಲೂ ಇಲ್ಲದಿರಬಹುದು. ಆದರೆ ಆ ಸಂಸ್ಕೃತಿಯ ಪ್ರಭಾವದಿಂದ ನಮ್ಮಲ್ಲೇ ಇವೆಲ್ಲಾ ರೂಪುಗೊಂಡವು. ಅದನ್ನೆಲ್ಲಾ ತಿರಸ್ಕರಿಸುವುದಕ್ಕೆ ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಪರಕೀಯ ಪ್ರಭಾವಕ್ಕೆ ಹೆದರಿ ಮಡಿವಂತಿಕೆ ತೋರಿಸಿದರೆ ಕರ್ನಾಟಕ ಸಂಗೀತಕ್ಕೆ ಉಳಿಗಾಲವೇ ಇಲ್ಲವೆನ್ನುವುದು ಆ ವಿದ್ವಾಂಸರಿಗೆ ಗೊತ್ತಿಲ್ಲ ಅಷ್ಟೆ".[೧]

ಸಂಗೀತ ಮನಸ್ಸಿಗೆ ಮುದ ನೀಡುವ ವಾಹಕವಷ್ಟೇ ಅಲ್ಲ, ಅದೊಂದು ಅಮೃತ ಚೈತನ್ಯ. ರಸಸ್ಫೂರ್ತಿ, ದುಃಖ ಶಮನದ ಸಾಧನ. ಪ್ರಪಂಚದ ಯಾವ ಭಾಗದಲ್ಲಿ ಸಂಗೀತದ ಎಳೆಗಳಿದ್ದರೂ ಅವುಗಳೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಪರಸ್ಪರ ಸಾಮರಸ್ಯವನ್ನು ಸಾಧಿಸಿರುತ್ತವೆ. ಅದು ಅವುಗಳ ಜನ್ಮಜಾತ ವಿಶಿಷ್ಟ ಲಕ್ಷಣ. ಈ ಎಲ್ಲಾ ಅಂಶಗಳನ್ನು ಅರಿತಿದ್ದ ಕುವೆಂಪು ಅವರು ಸಂಗೀತದಲ್ಲಿ ಐಕಮತ್ಯವನ್ನು ಗುರುತಿಸಿ, ಆಸ್ವಾದನೆ ಮಾಡಿದ್ದರು. ಸಂಗೀತದ ಒಲುಮೆ ಬಗ್ಗೆ ಅವರು ಬರೆದಿರುವ ಕವನಗಳನೇಕ ಇದ್ದು, ಅವುಗಳಲ್ಲಿ ಬಹು ಪ್ರಮುಖವಾದದ್ದೆಂದು ಇದನ್ನು ಉದಾಹರಿಸಬಹುದು:

ತೇಲಿಸೆನ್ನನು, ತೇಲಿಸೆನ್ನನು
ತೇಲಿಸೆನ್ನನು ಅಮೃತಕೆ
ಬಾಳ ಮುಳ್ಳಿನ ಮೇಲೆ ಹೃದಯವು
ಗೀರಿ ಸೋರಿದೆ ನೆತ್ತರು,
ಸಂಗೀತವೇ ಓ ಸಂಗೀತವೇ!

---

[೧] 'ಅಣ್ಣನ ನೆನಪು', ಪುಟ ೯೯.

ದ್ವೈತವಳಿವಂದದಲಿ ಮನವನು
ಅದ್ದು ನಿನ್ನದ್ವೈತಕೆ.
ಭಿನ್ನತೆಯನುಳಿವಂತರಾತ್ಮಕೆ
ಬ್ರಹ್ಮತೆಯ ನೈವೇದಿ ಸೈ,
ಸಂಗೀತವೇ ಓ ಸಂಗೀತವೇ![೧]

ತೇಜಸ್ವಿಯವರು ಕುವೆಂಪುರವರಲ್ಲಿರುವ ಸಂಗೀತ ಕಾಳಜಿಯನ್ನು ಸೂಕ್ಷ್ಮ ತರಂಗಗಳಲ್ಲಿ ಗ್ರಹಿಸಿ ಅವರೊಟ್ಟಿಗೆ ನಡೆದ ಸಂಗೀತದ ಬಗೆಗಿನ ಪ್ರಸ್ತಾಪಗಳನ್ನು ಬಹು ಮನೋಜ್ಞವಾಗಿ ನಮ್ಮೊಡನೆ ಹಂಚಿಕೊಂಡು ಕುವೆಂಪು ಅವರ ಆಸಕ್ತಿವಲಯಗಳ ಸೂಕ್ಷ್ಮ ಪರಿಜ್ಞಾನವನ್ನು ಸಹೃದಯನಲ್ಲಿ ಮೂಡಿಸಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಋಣಿಯಾಗಬೇಕಲ್ಲವೆ?

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೪೭೧.

೩–ದಾಕ್ಷಿಣ್ಯಕ್ಕೆ ಒಳಗಾಗದ ವ್ಯಕ್ತಿತ್ವ

ಕವಿಗರಸುಗಿರಸುಗಳ ಋಣವಿಲ್ಲ!
ಅವನಗ್ನಿ ಮುಖಿ!
ಪ್ರಲಯ ಶಿಖಿ!

ಕುವೆಂಪು ಅವರು ತಮ್ಮ ವೃತ್ತಿ ಜೀವನದಲ್ಲಿ ಅತ್ಯುನ್ನತ ಪದವಿಗೇರಿದವರು. ಆ ವೃತ್ತಿಯ ಉನ್ನತಾವಕಾಶವನ್ನು ಅವರೆಂದೂ ಬಯಸಿರಲಿಲ್ಲ ಮತ್ತು ನಿರೀಕ್ಷಿಸಿರಲಿಲ್ಲ. ರಾಜಕೀಯ ಹಸ್ತಕ್ಷೇಪವಿರುವ ಅಧಿಕಾರಿ ವಲಯಗಳಿಗೆ ಹೋಗುವುದಾಗಲಿ, ಆರಡಿ ದೇಹವನ್ನು ಮೂರಡಿ ಮಾಡಿಕೊಂಡು ತಮ್ಮಿಚ್ಛೆಗೆ ವಿರುದ್ಧವಾಗಿ ಮಣಿಯುವುದಾಗಲಿ, ಅವರಿಗೆ ಒಗ್ಗದ ಕೃತ್ರಿಮ ಸ್ವಭಾವವಾಗಿತ್ತು. ಅನಾಯಾಸವಾಗಿ ಬಂದ ಕುಲಪತಿ ಹುದ್ದೆಯನ್ನು ಪ್ರಾಮಾಣಿಕವಾಗಿ ಶ್ರದ್ಧೆಯಿಂದ ನಿರ್ವಹಿಸಿದವರು ಕುವೆಂಪು. ಅವರು ಯಾವುದೇ ರೀತಿಯ ರಾಜಕೀಯ ಒತ್ತಡಗಳಿಗೆ ಮಣಿಯದೆ, ಅಧಿಕಾರದಲ್ಲಿ ದಕ್ಷತೆಯ ಸಡಿಲತೆಗೆ ಅವಕಾಶವನ್ನೀಯದೆ ಕರ್ತವ್ಯ ಪಾಲನೆ ಮಾಡಿ, ಹಲವರ ನಕರಾತ್ಮಕ ಧೋರಣೆಗಳಿಗೆ ಅಭಿಮುಖರಾಗುವ ಸನ್ನಿವೇಶಗಳು ಉದ್ಭವಿಸಿದ್ದುವು.

ಅವರು ದೊಡ್ಡ ಅಧಿಕಾರದಲ್ಲಿದ್ದಾಗ ಹೆಂಡತಿ, ಮಕ್ಕಳು, ಬಂಧುಗಳು, ಸ್ನೇಹಿತರು ಎಂಬ ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡ ಒಂದು ಸಣ್ಣ ಉದಾಹರಣೆಯೂ ಕೂಡ ಇಲ್ಲ. ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ಉತ್ತಮ ಕೆಲಸಗಳನ್ನು ಮಾಡಿದರು. ಕನ್ನಡ ಮಾಧ್ಯಮವನ್ನು ಯೂನಿವರ್ಸಿಟಿ ಮಟ್ಟದಲ್ಲೂ ಜಾರಿಗೆ ತರಲು ತುಂಬಾ ಪ್ರಯತ್ನ ಮಾಡಿದರು. ಅಧ್ಯಾಪಕರುಗಳಿಗೆ ಸಂಬಳ ಹೆಚ್ಚಿಗೆ ಬರುವಂತೆ ಮಾಡಿದರು. ಮೈಸೂರು ವಿಶ್ವ ವಿದ್ಯಾಲಯದ ಪ್ರಸಾರಾಂಗವನ್ನು ಒಂದು ಪ್ರಧಾನ ಶಾಖೆಯನ್ನಾಗಿ ರೂಪಿಸಿದರು. ಮೈಸೂರು ವಿಶ್ವವಿದ್ಯಾಲಯದ ಸ್ನಾತ್ತಕೋತ್ತರ ವಿಭಾಗಕ್ಕೆ ಮಾನಸ ಗಂಗೋತ್ರಿ ಎಂದು ನಾಮಕರಣ ಮಾಡಿದರು.

ಕುವೆಂಪು ಸ್ವಂತ ಮಗನ ವಿಷಯದಲ್ಲೂ ದಾಕ್ಷಿಣ್ಯ ಪರರಾಗದಿರುವಷ್ಟು ಪ್ರಾಮಾಣಿಕರಾಗಿದ್ದರು. ತೇಜಸ್ವಿ ಆಂಗ್ಲ ಭಾಷೆಯಲ್ಲಿ 'ಫೇಲ್' ಆಗಿ ತನ್ನ ಫೇಲ್‌ಗೆ ಋಣಾತ್ಮಕ ಮೌಲ್ಯಮಾಪನವೇ ಕಾರಣವೆಂದು ದೂರು ನೀಡಿದಾಗ; ಕುತೂಹಲಕ್ಕಾಗಿ ಕುವೆಂಪು ಅವರು ತೇಜಸ್ವಿಯ ಉತ್ತರ ಪತ್ರಿಕೆ ತರಿಸಿಕೊಂಡು ನೋಡುತ್ತಾರೆ. ಅವರ ಉತ್ತರ ಪತ್ರಿಕೆಗೆ ೨೭

ಅಂಕವನ್ನು ಮೌಲ್ಯಮಾಪಕರು ನೀಡಿರುತ್ತಾರೆ. ಕುವೆಂಪು ತಕ್ಷಣ ಇವನಿಗೆ ೨೭ ಅಂಕವನ್ನು ಕೊಟ್ಟ ಮೇಷ್ಟ್ರು ಯಾರು?" ಎಂದು ಕೇಳಿ – "ಏನಿಲ್ಲ, ಇವನಿಗೆ ಇಪ್ಪತ್ತೇಳು ನಂಬರ್ ಕೊಟ್ಟ ಮುಠ್ಠಾಳ ಮೇಷ್ಟರನ್ನು ಡಿಸ್ಮಿಸ್ ಮಾಡಬೇಕು" – ಎಂದು ಹೇಳುತ್ತಾರೆ. ಪ್ರಾಯಃ ಕುವೆಂಪು ಅವರ ಸ್ಥಾನದಲ್ಲಿ ಮತ್ತೊಬ್ಬರಿದ್ದಿದ್ದರೆ "ಇನ್ನು ಮೂರು ನಂಬರ್ ಕೊಟ್ಟು ಪಾಸು ಮಾಡಲಿಕ್ಕೆ ಏನಾಗ್‌ತ್ತಿತ್ತು ಆ ಮೇಷ್ಟ್ರಿಗೆ?" ಎನ್ನುತ್ತಿದ್ದರೋ ಏನೋ! ಕುವೆಂಪು ಮಾತ್ರ ತಮ್ಮ ಪ್ರಾಮಾಣಿಕತೆಯನ್ನು ಎಂದೂ ತ್ಯಜಿಸಿದವರಲ್ಲಾ ಅಂಥಾ ಸನ್ನಿವೇಶಗಳು ಬಂದರೆ, ಕೇವಲ ನಿಷ್ಠುರದ ಬುದ್ಧಿಮಾತುಗಳು ಅವರಿಂದ ಕೇಳಿ ಬರುತ್ತಿದ್ದವು. ಆ ರೀತಿಯ ಮತ್ತೊಂದು ಸಂದರ್ಭವನ್ನು ನೋಡಬಹುದು–ತೇಜಸ್ವಿಯವರು ಕಾಲೇಜು ವಿದ್ಯಾಭ್ಯಾಸದ ಅವಧಿಯಲ್ಲಿ ಕನ್ನಡ ಪರ ಚಳವಳಿಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಳ್ಳುತ್ತಿದ್ದರು. ತಮ್ಮ ಸ್ನೇಹಿತರೊಡಗೂಡಿ ಇಂಗ್ಲೀಷ್ ಬೋರ್ಡುಗಳಿಗೆಲ್ಲಾ ಟಾರ್ ಬಳಿಯುವ ಚಟುವಟಿಕೆಯನ್ನು ಯೋಜಿಸಿದ್ದರು. ತೇಜಸ್ವಿ ಮತ್ತವರ ಗೆಳೆಯರ ಈ ಪೂರ್ವ ಯೋಜಿತ ಕ್ರಿಯೆಯನ್ನು ತಡೆಯಲು ಪೋಲಿಸ್ ಇಲಾಖೆಯವರು ವಾರೆಂಟ್ ಇಷ್ಯೂ ಮಾಡುತ್ತಿದ್ದರು. ಅಂತೆಯೇ ಸೈಕಲ್ಲಿನ ಲೈಸನ್ಸ್ ತೋರಿಸದೆ ಸಿಕ್ಕಿ ಬಿದ್ದು ಪೋಲಿಸನೊಡನೆ ಜಗಳ ಮಾಡಿಕೊಳ್ಳುವುದು (ವಾಸ್ತವವಾಗಿ ಇವು ಇವರ ಸ್ನೇಹಿತರಿಂದ ಒದಗಿದ ಫಜೀತಿ) – ಇವೇ ಮೊದಲಾದವು ತೇಜಸ್ವಿ ಕಾರುಬಾರಿನಲ್ಲಿದ್ದವು. ಈ ರೀತಿಯ ಪೋಲಿಸ್ ಮೊಕದ್ದಮೆಗಳು ಬಂದಾಗ ತೇಜಸ್ವಿಯ ತಾಯಿ ಹೆದರಿ ಕುವೆಂಪು ಅವರಿಗೆ "ತೇಜಸ್ವಿ ಪರ ಹೇಳಿ" ಎಂದಾಗ ಕುವೆಂಪು ಅವರ ನಿಲುವು ಕಾಠಿಣ್ಯದಿಂದ ಕೂಡಿರುತ್ತಿತ್ತು. ಎಂಬುದಕ್ಕೆ ತೇಜಸ್ವಿಯವರು ನೀಡುವ ಈ ಸಂದರ್ಭವೇ ಸಾಕ್ಷಿ – "ಪೋಲೀಸ್ ಇಲಾಖೆಯ ಅತ್ಯುನ್ನತ ಅಧಿಕಾರಿಗಳಲ್ಲಿ ಅನೇಕರು ಅಣ್ಣನ ಶಿಷ್ಯರೂ ಅಭಿಮಾನಿಗಳೂ ಇದ್ದರು. ಅಮ್ಮ ನನ್ನ ಕಳವಳದ ಮುಖ ನೋಡಲಾರದೆ ಅಣ್ಣನನ್ನು ಉದ್ದೇಶಿಸಿ "ಹೋಗಲಿ, ಯಾರಿಗಾದರೂ ಹೇಳಿ" ಎಂದರು. ಅಣ್ಣ ಸಿಟ್ಟು ಮಾಡಿಕೊಂಡು "ನಿಮಗೆಲ್ಲಾ ಏನಾಗಿದೆ? ಅದೆಲ್ಲಾ ನಾವು ಮಾಡದೇ ಇರುವುದರಿಂದ ನಮಗೆ ಮರ್ಯಾದೆ ಇದೆ. ಸ್ಟೇಷನ್ನಿಗೆ ಹೋಗಿ ವಿಚಾರಿಸಿ ನಾನು ಅಂಥದೇನೂ ಮಾಡಿಲ್ಲ ಎಂದು ಹೇಳಿದರೆ ಇವನದೇನು ಪ್ರಾಣ ಹೋಗುತ್ತಾ"[೧] ಎಂದರು.

ಹೀಗೆ ತಮ್ಮ ಅಧಿಕಾರದವಧಿಯಲ್ಲಿ ಎಂದೂ ಯಾವ ಕಾರಣಕ್ಕೂ ಅಧಿಕಾರ ದುರುಪಯೋಗ ಮಾಡಿಕೊಳ್ಳದ ಸ್ಥಿತ ಪ್ರಜ್ಞ ವ್ಯಕ್ತಿತ್ವ ಕುವೆಂಪು ಅವರದು. ದಾಕ್ಷಿಣ್ಯಕ್ಕೆ ಒಳಗು ಮಾಡುವ ಯಾವ ಉಪಾಧಿಯೂ ಬೇಡವೆಂದು ವಿಶ್ವ ಸ್ವತಂತ್ರ ಸ್ಥಿತಿಯಲ್ಲಿ ಅಧ್ಯಾತ್ಮ ಸಾಧನೆ

---

[೧] 'ಅಣ್ಣನ ನೆನಪು', ಪುಟ ೭೯.

ಮಾಡುವ ಮನಸ್ಸು ಮಾಡಿ ತಮ್ಮ ನಿವೃತ್ತಿ ಸಂದರ್ಭದಲ್ಲಿ ಅವರು ಬರೆದ ಒಂದು ಕವನವನ್ನು ಇಲ್ಲಿ ಸ್ಮರಿಸಬೇಕು.

ನಿವೃತ್ತಿ ಮುಕ್ತನ ಅಭೀಪ್ಸೆ

ಮುಕ್ತನಾದೆ, ಇಂದು, ಜೀವನ್
ಮುಕ್ತನಾದೆ, -ಗುರುವೆ, ನಿಮ್ಮ
ದೇವ ಕೃಪೆಯಿಂದೆ!

ಒಂದು ಕೈಯಲಿ ಕೆಲಸ; ಒಂದು ಕೈಯಲಿ ಪಾದ;
ಕರ್ಮ ಪೂಜೆಗಳೆರಡನೆಸಗುತ್ತ ಬಂದೆ.
ಇಂದಿನಿಂದೆರಡು ಕೈಯೊಳೂ ನಿಮ್ಮ ಕಾಲ್ವಿಡಿದು
ಸಾಧನೆಯ ಕೈಕೊಳೆ ಅನುಗ್ರಹಿಸು, ತಂದೆ.

ಸ್ಥಾನದ ಉಪಾಧಿ, ಅಧಿಕಾರದ ಉಪಾಧಿ,
ಮಾನದ ಉಪಾಧಿ, ಅವಮಾನದ ಉಪಾಧಿ,
ವಿದ್ಯೆಯ ಉಪಾಧಿ, ಕೀರ್ತಿಯ ಉಪಾಧಿ,
ಕವಿಯ, ಸಾಹಿತಿಯ, ಕಡೆಗೆ ಕನ್ನಡ ಉಪಾಧಿ!
ನಿನ್ನಡಿಗೆ ಸರ್ವವ ಸಮರ್ಪಿಸಲು ಬಂದೆ;
ಕೈ ಹಿಡಿದು ಕೃಪೆಗೆಯ್, ಅನುಗ್ರಹಿಸು, ತಂದೆ!

ನೀವೆನ್ನ ಕೈವಿಡಿಯೆ ನಾ ನಿಮ್ಮ ಕಾಲ್ವಿಡಿದು
ಪಯಣದಲಿ ತಿಪ್ಪ ತಿಪ್ಪನೆ ನಡೆವೆ ಮುಂದೆ:
ಅಂದು ದೀಕ್ಷೆಯನ್ನಿತ್ತು ಧೈರ್ಯವನೆರೆದ ತಂದೆ,
ಎತ್ತಿಕೋ; ಒತ್ತಿಕೋ ತಾಯೆದೆಗೆ ಇಂದೆ![೧]

ಆಸ್ತಿ, ಅಂತಸ್ತು, ಅಧಿಕಾರಕ್ಕಾಗಿ ಮುಗಿ ಬೀಳುವ, ಹೊಡೆದಾಡುವ, ಭೇದ ತಂದೊಡ್ಡುವ ಈ ಕಾಲದಲ್ಲಿ ಅವುಗಳಿಗೆ ದುಗ್ಗಾಣಿ ಬೆಲೆಯನ್ನು ನೀಡದೆ; ಆತ್ಮ ಸಂತೋಷಕ್ಕಾಗಿ, ಸರ್ವೋದಯಕ್ಕಾಗಿ ಶ್ರೀಮಾತೆ, ಶ್ರೀಗುರುಗಳ ಆಂತರ್ಯದ ಸಾನಿಧ್ಯಕ್ಕಾಗಿ ಹಂಬಲಿಸಿದ ಮಹಾನ್ ಚೇತನ ಕುವೆಂಪು. ಅವರ ಅವ್ಯಾಜ ಪ್ರೀತಿ ವಾತ್ಸಲ್ಯಗಳಲ್ಲಿ ತಣಿದ, ದಣಿದ ತೇಜಸ್ವಿಯವರೇ ಧನ್ಯರು.

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೨೦೮.

೪–ವೈಚಾರಿಕತೆಯ ಪಾಠ

"ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು!"[೧]

ವೈಚಾರಿಕತೆ ಕುವೆಂಪು ಸಾಹಿತ್ಯದ ಮುಖ್ಯವಾಹಿನಿ. ಯಾವುದೇ ವಿಷಯವನ್ನು ವಿಚಾರಮಾಡದೆ, ವಿವೇಚಿಸದೆ ಭಾವಕೋಶಕ್ಕೆ ಆಹ್ವಾನ ನೀಡುವುದು ಮೆದುಳಿಗೆ ಮೋಸ ಮಾಡಿದಂತೆ. ಪುರಾತನ ಸಂಪ್ರದಾಯಗಳ, ಆಚರಣೆಗಳ, ವಿಧಿ ನಿಷೇದಗಳ ಬಗ್ಗೆ ಪ್ರಶ್ನೆ ಮಾಡುವುದು ವಿವೇಚನೆಯ ಮೊದಲ ಹಂತ. ಈ ವಿಧಿ ವಿಧಾನಗಳಿಂದ ಮನುಕುಲಕ್ಕೆ ಯಾವ ರೀತಿಯಲ್ಲಾದರೂ ತೊಂದರೆಯೇ? ಅಥವಾ ಇದು ಮೌಢ್ಯವನ್ನು ಪ್ರಸಾರ ಮಾಡುವ ಚಟುವಟಿಕೆಯೆ? ಎಂಬುದನ್ನು ಕುರಿತು ಪ್ರತಿ ಸಂದರ್ಭದಲ್ಲಿಯೂ ಮಾನವ ಯೋಚಿಸಬೇಕು. ಹಳೆಯ ಸಂಪ್ರದಾಯಗಳೆಲ್ಲ ಮೌಢ್ಯವಲ್ಲ. ಆದರೆ ಕೆಲವು ಸಂಪ್ರದಾಯಗಳು ಮೂಲಭೂತವಾದಿಗಳ ಬಲವಾದ ತಿದ್ದುಪಡಿಯಿಂದಾಗಿ ಮೌಢ್ಯದ ರೂಪ ತಳೆದಿರುತ್ತವೆ. ಈ ರೀತಿಯಾಗಿ ಮೌಢ್ಯವನ್ನು ಪ್ರಸಾರ ಮಾಡುವ ಪುರೋಹಿತ ವರ್ಗದವರ ವಿರುದ್ಧ ಸಮರ ಸಾರುವ ಕುವೆಂಪು ಅವರ ಮೌಢ್ಯನಾಶಕ ಕೂಗು ಯುವಕರಲ್ಲಿ ವೈಚಾರಿಕತೆಯ ಉಗಮಕ್ಕಾಗಿ.

ಕುವೆಂಪು ತಮ್ಮ ಮಕ್ಕಳಲ್ಲಿ ಎಂದಿಗೂ ಮೌಢ್ಯ ಮನೆ ಮಾಡಲು ಬಿಡುತ್ತಿರಲಿಲ್ಲ. ಅದಕ್ಕೆ ತೇಜಸ್ವಿಯವರು ಆಧುನಿಕ ವಿಚಾರವಾದಿ ಎಂದು ಹೆಸರು ಮಾಡಿರುವುದು. ಅವರು ಬಾಲಕನಾಗಿರುವಾಗ ಒಂದು ಸಂದರ್ಭದಲ್ಲಿ ಕುವೆಂಪುರವರು ತಮ್ಮ ಮಗನಿಗೆ ಹೇಳಿದ ವೈಚಾರಿಕ ಪಾಠ ಅವಿಸ್ಮರಣೀಯ. ಬಾಲಕ ತೇಜಸ್ವಿ ಶಾಲೆಯಲ್ಲಿ ಪಾಠ ಕೇಳುವಾಗ ಮೇಷ್ಟ್ರು ಕುಮಾರವ್ಯಾಸ ಪದ್ಯ ಪಾಠ ಮಾಡುತ್ತಿರುತ್ತಾರೆ. ಆ ಸಂದರ್ಭದಲ್ಲಿ ಕುವೆಂಪು ಅವರನ್ನು ಉದಾಹರಿಸಿ, ಅವರು ಕಾವ್ಯ ಬರೆಯುವಾಗ ಮಾಂಸಾಹಾರ ತಿನ್ನುತ್ತಿರಲಿಲ್ಲ, ಮಡಿ ಬಟ್ಟೆಯುಟ್ಟು ಕಾವ್ಯ ಬರೆಯುತ್ತಿದ್ದರೆಂದು ಬುರುಡೆ ಬಿಡುತ್ತಾರೆ. – ಆ ರೀತಿಯಾಗಿ ಎಂದೂ ತಂದೆ ಕುವೆಂಪು ಅವರನ್ನು ನೋಡದ ತೇಜಸ್ವಿ ಮನೆಗೆ ಬಂದು ತಂದೆಯವರನ್ನು ನಿಜಾಂಶ ವಿಚಾರಿಸುತ್ತಾರೆ. ಕೋಪಗೊಂಡ ಕುವೆಂಪು ತೇಜಸ್ವಿಯೊಡನೆ ನಡೆಸುವ ಮಾತುಕತೆ ಸ್ವಾರಸ್ಯಕರವಾಗಿದೆ.

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೧, ಪುಟ ೩೬೮.

"ವೇದೋಪನಿಷತ್ತುಗಳನ್ನು ಬರೆದವರು ದನದ ಮಾಂಸ ತಿನ್ನುತ್ತಿದ್ದರೆನ್ನುವುದು, ರಾಮಾಯಣ ಬರೆದ ವಾಲ್ಮೀಕಿ ಶಿಕಾರಿ ಮಾಡುತ್ತಿದ್ದ ವ್ಯಾಧನಾಗಿದ್ದನೆನ್ನುವುದು ಆ ಮುಠ್ಠಾಳ ಮೇಷ್ಟ್ರಿಗೆ ಗೊತ್ತಿಲ್ಲ. ಈ ಮಡಿ ಹೆಂಗಸರಂಥ ಮೇಷ್ಟರುಗಳು ನಿಮಗೆ ಹೇಳಿಕೊಡುವುದಾದರೂ ಏನು? ಅವರಿಂದ ನೀವು ಕಲಿಯುವುದಾದರೂ ಏನು? ಅವಿವೇಕಿಗಳು! ಪದ್ಯ ಬರೆಯುವವರು ಪಥ್ಯದಲ್ಲಿರಬೇಕು ಎನ್ನುವ ಕಂದಾಚಾರಗಳನ್ನೆಲ್ಲಾ ನಂಬಿಕೊಂಡಿದ್ದಾರಲ್ಲಾ. ಹಿಂದೂ ಧರ್ಮಕ್ಕೆ ಇದಕ್ಕಿಂತ ಇನ್ನೊಂದು ದುರ್ಗತಿ ಇದೆಯ? ಹೋಗಲಿ ನೀನಾದರೂ ಇಂಥವೆಲ್ಲಾ ತಪ್ಪು ಎನ್ನುವುದನ್ನು ತಿಳಿದುಕೋ. ನಿನ್ನ ಜೊತೆ ಹುಡುಗರಿಗೂ ಹೇಳು. ಇನ್ನೊಂದು ಸಾರಿ ಆ ಮೇಷ್ಟರು ಹಾಗೇನಾದರೂ ಕ್ಲಾಸಿನಲ್ಲಿ ಹೇಳಿದರೆ ನೀನು ಹೇಳು 'ಹಾಗೇನೂ ಇಲ್ಲ' ನಾವು ದನದ ಮಾಂಸ ಸಹ ಸಿಕ್ಕರೆ ತಿನ್ನುತ್ತೇವೆ. ನಾವು ಹಿಂದುಗಳೇ ಅಲ್ಲ ಅಂತ ಹೇಳಿಬಿಡು" ಎಂದು ನನಗೆ ಕೋಪೋದ್ರಿಕ್ತರಾಗಿ ಹೇಳಿದರು.

ಸ್ಕೂಲಿನ ಮೇಷ್ಟರು ಹೇಳಿದ್ದಕ್ಕೆ ತಲೆಯಾಡಿಸಿದ್ದ ನನಗೆ ಅಣ್ಣನ ಮಾತು ಕೇಳಿ ಮತ್ತೂ ಗಾಬರಿಯಾಯ್ತು. ದನದ ಮಾಂಸ ತಿನ್ನುತ್ತೇವೆಂದೂ, ನಾವು ಹಿಂದೂಗಳೇ ಅಲ್ಲವೆಂದೂ ಹೇಳುವುದಾದರೂ ಹೇಗೆ, ಅದೂ ನನ್ನ ಓರಗೆಯ ಹುಡುಗರೆಲ್ಲಾ ಪಕ್ಕಾ ಕಂದಾಚಾರಿ ಬ್ರಾಹ್ಮಣರಾಗಿರುವಾಗ! ನಾವು ಹಿಂದೂಗಳೇ ಅಲ್ಲ ಎಂದರೆ ಆಗ ನಾವು ಸಾಬರು ಅಂತಾಗುವುದಿಲ್ಲವೆ! ಅದು ಸ್ಕೂಲಿನಲ್ಲಿ ಎಲ್ಲರೂ ಸಾಬರನ್ನು ಮನುಷ್ಯರೆ ಅಲ್ಲವೆಂದು ತಿಳಿದಿರುವ ಸಂದರ್ಭದಲ್ಲಿ ಹೇಳಿದರೆ ಉಳಿಗಾಲ ಉಂಟೆ! ನಾನು "ಥೂ ದನದ ಮಾಂಸ ನಾನಂತೂ ತಿನ್ನಲ್ಲಣ್ಣ" ಎಂದೆ.

"ನೋಡೋ, ನಿನಗೆ ಇಷ್ಟ ಇಲ್ಲದಿದ್ದರೆ ನೀನು ತಿನ್ನಬೇಡ. ನನಗೆ ಇಷ್ಟ ಇಲ್ಲದ್ದು ನಾನೂ ತಿನ್ನಲ್ಲ. ಆದರೆ ನೀನು ಏನು ತಿಂತೀಯ ಅನ್ನುವುದಕ್ಕೂ ಏನು ಬರೀತೀಯ ಅನ್ನುವುದಕ್ಕೂ ಯಾವ ಸಂಬಂಧವೂ ಇಲ್ಲ. ಅಷ್ಟೇ ಅಲ್ಲ ಹೀಗೆಲ್ಲ ನೀತಿ ನಿಯಮ,ವ್ರತ, ಆಚಾರ ಮಾಡಿಕೊಂಡು ಬದುಕಿದವನಿಂದ ಎಂದಾದರೂ ಒಳ್ಳೆ ಪದ್ಯ ಬರಿಯಕ್ಕಾಗುತ್ತೇನೋ" ಎಂದು ಇನ್ನಷ್ಟು ಬಯ್ದರು".[೧]

ಈ ಸುಧೀರ್ಘ ವೈಚಾರಿಕ ವ್ಯಾಖ್ಯಾನದಲ್ಲಿ ಕುವೆಂಪು ಅವರ ವಿವೇಚನಾ ತೀಕ್ಷ್ಣತೆ ಎಷ್ಟೆಂಬುದು ಅರಿವಾಗುತ್ತದೆ. ಅವಿವೇಕದ ಮೌಢ್ಯವನ್ನು ಬೋಧಿಸುವ ಮೇಷ್ಟರ ವಿರುದ್ಧ ಕುವೆಂಪುರವರು ಎಂದಿಗೂ ನಿಶಿತಮತಿಯಾಗಿ ಕಿಡಿಕಾರುತ್ತಿದ್ದರು. ತಿಳಿವಳಿಕೆಯೆ ಇಲ್ಲದೆ,

---

[೧] 'ಅಣ್ಣನ ನೆನಪು', ಪುಟ ೬೩.

ವೈಚಾರಿಕವಾದ ಯಾವುದೇ ವಿಜ್ಞಾನ ಕೃತಿಗಳನ್ನು ಓದದೆ, ಪ್ರಾಯೋಗಿಕ ಆಲೋಚನೆ ಮಾಡದೆ, ಬೋಧನೆಗೆ ತೊಡಗುವುದು ಒಂದು ಜನಾಂಗಕ್ಕೆ ವಿಷವನ್ನುಣಿಸಿದ ಹಾಗೆ. ಅದು ದೇಶದ ಅತ್ಯುನ್ನತ ದುರಂತ!

ಕುವೆಂಪು ಸಾಹಿತ್ಯ ಕೃತಿಗಳನೇಕವು ವೈಚಾರಿಕತೆಯನ್ನು ನೇರವಾಗಿ ಬೋಧಿಸುವುವು. ಅವುಗಳಲ್ಲಿ ಬಹುಪ್ರಮುಖವಾದುವೆಂದರೆ – 'ಕಾನೂರು ಹೆಗ್ಗಡಿತಿ', 'ಶೂದ್ರತಪಸ್ವಿ', 'ಜಲಗಾರ' ಹಾಗೂ ಹಲವು ಕವನಗಳು. 'ಕಾನೂರು ಹೆಗ್ಗಡಿತಿ' ಕಾದಂಬರಿಯ ನಾಯಕ ಹೂವಯ್ಯನ ಮೂಲಕ ವೈಚಾರಿಕತೆಯ ಚುರುಕಿನ ಪಾಠವನ್ನು ಮಾಡಿಸುತ್ತಾರೆ, ಕುವೆಂಪು. ಕಾದಂಬರಿಯಲ್ಲಿ ಬರುವ ವೆಂಕಪ್ಪ ಜೋಯಿಸರು ಮೌಢ್ಯವನ್ನು ಪಸರಿಸುವ ವ್ಯಕ್ತಿ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಅವರು ತೋರುವ ಕ್ರೌರ್ಯ ಅಸಹನೀಯವಾದದು. ಸೀತೆಯ ವಿಷಯದಲ್ಲಿ ಅವರು ನೀಡುವ ಸಲಹೆಗಳು ಅಮಾನುಷವಾದವು. ಅವಳಿಗೆ ದೆವ್ವದ ಭೀತಿಯಾಗಿದೆ ಎಂದು ಬರೆ ಹಾಕುವಂತೆ ಸಲಹೆ ಕೊಡುವುದು ಮೌಢ್ಯದ್ಯೋತಕ. ಈ ರೀತಿಯ ವ್ಯಕ್ತಿಗಳು ಮಾನವೀಯ ಮೌಲ್ಯಗಳನ್ನು ಮಣ್ಣುಗೂಡಿಸುತ್ತಿರುವುದೇ ದೇಶದ ಪ್ರತಿಗಾಮಿತನಕ್ಕೆ ಕಾರಣ.

ಯುವಕರು ಶಿಕ್ಷಿತರಾಗಿ ಹೇಗೆ ವೈಚಾರಿಕವಾಗಿ ನಡೆದುಕೊಳ್ಳಬೇಕೆಂಬುದನ್ನು ಕುವೆಂಪು ಹೂವಯ್ಯನ ಮೂಲಕ ಬಹಳ ಸೊಗಸಾಗಿ ಹೇಳಿಸಿದ್ದಾರೆ.

"ನೀವು ತಿಳಿದವರೆಂದು ಕೊಂಡು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶ ಮಾಡಿ, ನಿಮಿತ್ತ ಹೇಳುವುದು, ವಿಭೂತಿಕೊಡುವುದು, ಸತ್ಯ ನಾರಾಯಣ ವ್ರತ ಮಾಡಿಸುವುದು, ದೆವ್ವ ಪಿಶಾಚಿಗಳಿಗೆ ಬಲಿಕೊಡಿಸುವುದು, ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ. ಟ್ರಂಕು ತಗುಲಿ ಬೆನ್ನು ನೋವಾಗಿದ್ದರೆ ಔಷಧಿ ಮಾಡಿ ಎಂದು ಹೇಳುವ ಬದಲು ಬೂದಿ ಕುಂಕುಮ ಹಚ್ಚಿ, ಮಂತ್ರ ಹಾಕಿಸಿ ಎಂದು ಹೇಳುತ್ತಿದ್ದೀರಲ್ಲಾ! ಇದು ಯಾವ ತತ್ವಶಾಸ್ತ್ರದಲ್ಲಿ ಹೇಳಿದೆ? ಹಾಗೆ ಹೇಳಿರುವ ಗ್ರಂಥಗಳಿದ್ದರೆ ಅವು ಮನ್ನಣೆಗೆ ಯೋಗ್ಯವಾದುವೆ? ನಿಮ್ಮ ಬೋಧನೆಯಿಂದ ಎಷ್ಟು ಜನರು ರೋಗಕ್ಕೆ ಸರಿಯಾಗಿ ಮದ್ದು ಮಾಡದೆ, ಬರಿಯ ಬೂದಿ ವಿಭೂತಿಗಳನ್ನೇ ಹಚ್ಚಿಕೊಂಡು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ...."[೧]

ಕುವೆಂಪುರವರ ಹಲವು ಕೃತಿಗಳಲ್ಲಿರುವ ವೈಚಾರಿಕ ನಿಲುವನ್ನು ಪ್ರಸ್ತಾಪಿಸದೆ, ಅವರ ವೈಚಾರಿಕ ವ್ಯಕ್ತಿತ್ವವನ್ನು ತಿಳಿಸುವುದು ಸಾಧ್ಯವಿಲ್ಲ. ಅದು ಸಾಧುವೂ ಅಲ್ಲವೆಂದು ಭಾವಿಸಿ,

---

[೧] 'ಕಾನೂರು ಹೆಗ್ಗಡಿತಿ', ಪುಟ ೧೦೪.

ಇಲ್ಲಿಗೆ ಪ್ರಸ್ತುತವಾಗಿರುವ ಈ ಮೇಲಿನ ಉದಾಹರಣೆಯನ್ನು ನೀಡಿದ್ದೇನೆ. ಕುವೆಂಪು ಅವರು ಕೇವಲ ರಸಾಸ್ವಾದನೆಯೊಂದನ್ನೇ ಕೇಂದ್ರವಾಗಿಟ್ಟುಕೊಂಡು ಕೃತಿ ರಚಿಸಿದವರಲ್ಲ. ವಿಚಾರಕ್ರಾಂತಿಗೆ ಸನ್ನದ್ಧರಾಗಿ, ತಮ್ಮ ಅರಿವಿನ ಎಲ್ಲೆಯನ್ನು ವಿಸ್ತರಿಸಿಕೊಳ್ಳಲು ವಿವೇಕ ಭೇರಿಯನ್ನು ಬಾರಿಸಿದರು.

"ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಬುದ್ಧಿ
ವೇದ ಪ್ರಮಾಣತೆಯ ಮರುಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ.
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಬಾಳಿ!"[೧]

ಲೋಕದ ಪ್ರತಿಯೊಬ್ಬನೂ ವೈಚಾರಿಕ ವಿವೇಕವನ್ನು ಬೆಳೆಸಿಕೊಳ್ಳಬೇಕೆಂದರೆ – ಅದಕ್ಕೆ ಮೂಲ ಬುನಾದಿಯಾದ ಶಿಕ್ಷಣದ ಅವಶ್ಯಕತೆ ಬಹಳಷ್ಟಿದೆ. ಉಳಿದ ದೇಶಗಳ ಸ್ಥಿತಿ ಹೇಗಿದೆಯೋ ತಿಳಿಯದು. ಆದರೆ ಭಾರತದ ಮಟ್ಟಿಗಂತೂ ಶಿಕ್ಷಣವಿಲ್ಲದೆ ವೈಚಾರಿಕ ಪ್ರಜ್ಞೆ ಅರಳುವುದು ಕನಸಿನ ಮಾತು. ಒಂದು ವೇಳೆ ಪ್ರತಿಯೊಬ್ಬರಿಗೂ ಶಿಕ್ಷಣವು ಸಿಗುವಂತಾದರೆ ಅದು ವಿವೇಕಶಾಲಿ, ನಿಶಿತಮತಿ ಶಿಕ್ಷಕರಿಂದ ಮಾತ್ರ ಸಿಗಲಿ. ಆಗಲೇ ಕುವೆಂಪು ಕರೆಕೊಟ್ಟ ವಿಚಾರ ಕ್ರಾಂತಿಗೆ ಮಹತ್ವ ದೊರಕುವುದು. ಅವರ ವ್ಯಕ್ತಿತ್ವ ನಮ್ಮಲ್ಲಿ ಒಂದಾಗಿ ಅಜರಾಮರವಾಗುವುದು.

[೧] ಕುವೆಂಪು ಸಮಗ್ರ ಕಾವ್ಯ, ಸಂ.೧, ಪುಟ ೩೭೦.

೫ – ಮರುಗುವ ಜೀವ

ಮಾನವತಾವಾದಿ ಕುವೆಂಪು ಬದುಕು ವಿವಿಧ ಮೌಲ್ಯಗಳಿಂದ ತುಂಬಿತ್ತು. ಬಹುಶಃ ಆ ರೀತಿಯ ವಿಶಿಷ್ಟ ಗುಣಗಳ ಆಕರವಾಗಿದ್ದರಿಂದಲೇ ಅವರು ಬಹು ಎತ್ತರದ ಬದುಕನ್ನು ಬಾಳಿದರೆಂದು ತೋರುತ್ತದೆ. ಅವರ ಬದುಕು ಮತ್ತು ಸಾಹಿತ್ಯದಲ್ಲಿ ಸಮಾನತೆಯ ಕೂಗು ಎಚ್ಚರದಿಂದಿರುತ್ತಿತ್ತು. ಹಿಂಸೆ, ಅನ್ಯಾಯ, ನೋವು, ದಾರಿದ್ರ್ಯದಿಂದ ಕೂಡಿದ ಸನ್ನಿವೇಶಗಳನ್ನು ನೋಡಿ ಮರುಗುವ ಜೀವಂತ ವ್ಯಕ್ತಿತ್ವ ಕುವೆಂಪು ಅವರದು. ಆ ರೀತಿಯ ಅಮಾನುಷ ಸಂದರ್ಭ ಸನ್ನಿವೇಶಗಳು ಅವರಿಗೆ ಭೀಕರತೆಯನ್ನು ಬಿಂಬಿಸುತ್ತಿದ್ದವು. ಒಂದು ನೋವಿನ ಆಚೀಚಿನ ಕಲ್ಪನೆ ಮಾಡಿಕೊಂಡು ಆ ಸಂದರ್ಭಗಳನ್ನು ವಸ್ತುನಿಷ್ಠವಾಗಿ, ಪ್ರಮಾಣಿಕವಾಗಿ ಸುಧಾರಿಸುವ ಮಾನವೀಯ ಪ್ರಯತ್ನ ಮಾಡುತ್ತಿದ್ದರು.

'ಅಣ್ಣನ ನೆನಪು' ಕೃತಿಯಲ್ಲಿ ತೇಜಸ್ವಿಯವರು ತಮ್ಮ ಅಣ್ಣನ ಮರುಗುವ ವ್ಯಕ್ತಿತ್ವವನ್ನು ಸೊಗಸಾಗಿ ಮೂಡಿಸಿದ್ದಾರೆ. ಕುವೆಂಪುರವರ ಮನೆಗೆ ಹಾಲು ಹಾಕುತ್ತಿದ್ದ ಹಾಲಿನ ಮಾದಮ್ಮ ಬರುಬರುತ್ತಾ ಹಾಲಿನಲ್ಲಿ ನೀರು ಬೆರೆಸುವ ರೂಢಿಮಾಡಿಕೊಳ್ಳುತ್ತಾಳೆ. ಇದರಿಂದ ಬೇಸತ್ತಾ ತೇಜಸ್ವಿ ತಾಯಿ ಹೇಮಾವತಿಯವರು ಮನೆ ಹತ್ತಿರವೆ ಬಂದು ಹಾಲು ಕರೆದು ಹಾಕಲು ಹೇಳುತ್ತಾರೆ. ಆ ಸಂದರ್ಭದ ಸ್ವಾರಸ್ಯವನ್ನು ತೇಜಸ್ವಿ ಹೇಳುವುದು ಹೀಗೆ –"ಮಾರನೆ ದಿನ ಬೆಳಗ್ಗೆ ಎದ್ದಾಗ ನಮಗೊಂದು ಆಘಾತಕಾರಿ ದೃಶ್ಯ ಕಾದಿತ್ತು. ಮಾದಮ್ಮ ಹಾಲು ಕರೆಯಲು ಎಮ್ಮೆಯನ್ನೇನೋ ತಂದಿದ್ದಳು, ಆದರೆ ಕರು ಇಲ್ಲದೆ ಎಮ್ಮೆ ಹಾಲು ಕೊಡುವುದಿಲ್ಲವಾದ್ದರಿಂದ ಅವಳು ಸತ್ತ ಕರುವಿನ ಚರ್ಮ ಸುಲಿಸಿ ಅದರೊಳಗೆ ಹುಲ್ಲು ತುಂಬಿ ಹೊಲಿಸಿ ಒಂದು ಅಸಹ್ಯವಾದ ಕರುವಿನ ಗೊಂಬೆ ಮಾಡಿ ಹೊತ್ತು ತಂದಿದ್ದಳು. ಆ ಗೊಂಬೆಯ ಗುಳಿಬಿದ್ದ ಕಣ್ಣು ಬಾಯಿಗಳಿಂದೆಲ್ಲಾ ಹುಲ್ಲು ಹೊರಚಾಚಿಕೊಂಡು ಅದು ಹೊಸ ಮನೆಗಳೆದರು ಕಟ್ಟುವ ದೃಷ್ಠಿ ಬೊಂಬೆಯಂತೆ ವಿಕಾರವಾಗಿ ಕಾಣುತ್ತಿತ್ತು. ಎಮ್ಮೆ ಅದನ್ನೆ ತನ್ನ ಕರುವೆಂದು ಪರಿಭಾವಿಸಿ ನೆಕ್ಕುತ್ತಾ ಹಾಲು ಕೊಡುತ್ತಿತ್ತು. ಅಣ್ಣನಿಗೆ ಬೆಳಗ್ಗೆ ಎದ್ದು ಈ ಕರುಣಾಜನಕ ದೃಶ್ಯ ನೋಡುವುದು ಎರಡೇ ದಿನಕ್ಕೆ ಅಸಹನೀಯವಾಯ್ತೆಂದು ತೋರುತ್ತದೆ. ಮೂರನೆಯ ದಿನ ಮಾದಮ್ಮನಿಗೆ "ನೀನು ಹಟ್ಟಿಯಿಂದಲೇ ಹಾಲು ಕರೆದು ತಂದು ಕೊಡು. ಇಲ್ಲಿಗೆ ಎಮ್ಮೆ ಹೊಡಕೊಂಡು ಬರುವ ಅಗತ್ಯವಿಲ್ಲ" ಎಂದು ಹೇಳಿಬಿಟ್ಟರು.

ಅಮ್ಮನ ಕಷ್ಟ ಅಮ್ಮನಿಗೆ ಗೊತ್ತು. ಹೇಗೊ ಕಷ್ಟಪಟ್ಟು ಮನೆ ಬಳಿ ಹಾಲು ಕರೆದುಕೊಡುವ ಏರ್ಪಾಡು ಮಾಡಿದ್ದರೆ ಅಣ್ಣ ಏಕಾಏಕಿ ಹೀಗೆ ಮಾಡಿದರಲ್ಲ ಎನ್ನಿಸಿ ನೀರು

ಹಾಲಿನ ವಿಷಯ ಹೇಳಿ ಜಗಳ ಶುರುಮಾಡಿದರು. ಅಣ್ಣ ಆಗ "ನೋಡು ದುಡ್ಡಿನ ಆಸೆಗೋ, ಹೊಟ್ಟೆಪಾಡಿಗೋ ಅವಳು ಅದರ ಕರುವಿಗೆ ಕೊಂಚವೂ ಹಾಲು ಕುಡಿಯಲು ಬಿಡದೆ ಹಲವಾರು ಮನೆಗಳಿಗೆ ಹಾಲು ಕರೆದುಕೊಟ್ಟು ಕರು ಸತ್ತಿರಬಹುದು. ನಿಮಗೆಲ್ಲಾ ಅವಳು ಅಳೆದುಕೊಡುವ ಹಾಲು ನೋಡಿದಾಗ ಅದರಲ್ಲಿ ಸೇರಿಸಿರುವ ನೀರು ಜ್ಞಾಪಕಕ್ಕೆ ಬಂದರೆ, ನನಗೆ ಅದರ ಕರುವಿನ ಕರುಣಾಜನಕ ಸ್ಥಿತಿ ಜ್ಞಾಪಕಕ್ಕೆ ಬರುತ್ತದೆ. ನೀರು ಹಾಲು ಕುಡಿದರೂ ಪರ್ವಾಗಿಲ್ಲ. ಆ ಕೈಕಾಲು ಸೆಟೆದುಕೊಂಡ ಕರುವಿನ ಗೊಂಬೆ ನೆಕ್ಕುತ್ತಾ ಎಮ್ಮೆ ಹಾಲು ಕರೆಯುವ ದೃಶ್ಯ ದಿನಾ ಬೆಳಿಗ್ಗೆ ಎದ್ದು ನೋಡುವುದು ಬೇಡ" ಎಂದರು. ಅಣ್ಣ ಹಾಗೆ ಹೇಳಿದ ಮೇಲೆ ಅಮ್ಮನ ಅಂತಃಸಾಕ್ಷಿ ಕುಟುಕಿದಂತಾಗಿ ಮನೆ ಹತ್ತಿರ ಹಾಲು ಕರೆದು ಕೊಡುವ ವಿಚಾರಕ್ಕೆ ವಿದಾಯ ಹೇಳಿದರು".[೧]

ಹೀಗೆ ಪ್ರತಿ ಸಂದರ್ಭದಲ್ಲೂ ಕುವೆಂಪುರವರ ವ್ಯಕ್ತಿತ್ವ ಅನ್ಯರಿಗೆ ಗೋಚರಿಸದ ಸೂಕ್ಷ್ಮಗಳ ಬಗ್ಗೆ ಆಲೋಚನೆ ಮಾಡುತ್ತಿತ್ತು. ಮಾನವನು ಸಮಾಜ ಜೀವಿ; ಪರಸ್ಪರ ನೋವು ನಲಿವುಗಳಿಗೆ ಪ್ರತಿ ಸ್ಪಂದಿಸಬೇಕು ಎಂಬುದು ಕುವೆಂಪು ಅವರ ತಿಳಿವಳಿಕೆ. ಕುವೆಂಪುರವರು ರಾಮ ಕೃಷ್ಣಾಶ್ರಮದ ಶಿಶುವಾಗಿದ್ದವರು. ಶ್ರೀ ರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ವಿಚಾರ ಧಾರೆಗಳಿಗೆ ಮಾರು ಹೋಗಿದ್ದವರು. ಅವರ ನುಡಿಯಂತೆ ನಡೆಯಲು ಸಂಕಲ್ಪ ಮಾಡಿದ್ದವರು. ಕುವೆಂಪು ಅವರ ಮರುಗುವ ವ್ಯಕ್ತಿತ್ವ ವಿವೇಕಾನಂದರ ಈ ರೀತಿಯ ಮಾತುಗಳಿಂದ ಪ್ರೇರಿತವಾಗಿರಬಹುದೆಂದು ಊಹಿಸಿದರೆ ತಪ್ಪಾಗದು.

"ಸಜ್ಜನರಾದ ರಾಜರೆ, ಈ ಬದುಕು ಹ್ರಸ್ವ. ಜಗತ್ತಿನ ವೈಭವಗಳು ಅಲ್ಪಕಾಲೀನವಾದುವು. ಆದರೆ ಯಾರು ಇತರರಿಗಾಗಿ ಬದುಕುತ್ತಾರೋ ಅವರು ಮಾತ್ರ ಬದುಕುತ್ತಾರೆ. ಉಳಿದವರೆಲ್ಲಾ ನಿಜವಾಗಿ ಬದುಕಿಲ್ಲ. ಅವರು ಜೀವಂತ ಶವಗಳು ಅಷ್ಟೆ". (ವಿವೇಕಾನಂದರ ಕೃತಿ ಶ್ರೇಣಿ)

ಕುವೆಂಪು ಆಧುನಿಕ ಕನ್ನಡ ಸಾಹಿತ್ಯ ಕಂಡ ಮಹಾನ್ ದಾರ್ಶನಿಕ. ಅವರ ಬದುಕೇ ಒಂದು ರೀತಿಯಲ್ಲಿ ಕಾವ್ಯ. "ಮಾನವನ ಅಧ್ಯಯನ ಮಾಡು. ಮಾನವನೇ ಜೀವಂತ ಕಾವ್ಯ" ವಿವೇಕಾನಂದರ ಈ ಮಾತು ಕುವೆಂಪು ಅವರಿಗೆ ಅಕ್ಷರಶಃ ಒಪ್ಪುತ್ತದೆ. ಅವರನ್ನು ಅಧ್ಯಯನ ಮಾಡಲು ತೊಡಗಿದರೆ–ಒಂದು ಹೊಸ ಪ್ರಪಂಚದ ಅರಿವಾಗಿ ನಮ್ಮಲ್ಲಿ ಒಬ್ಬ ವಿವೇಕಶಾಲಿಯ

---

[೧] 'ಅಣ್ಣನ ನೆನಪು', ಪುಟ ೨೨

ಜನನವಾಗುತ್ತದೆ ಎಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಅವರ ತಾಯಿ ಹೃದಯದ ಮಮತೆ, 'ಅಯ್ಯೋ!' ಎನ್ನುವ ಮನಸ್ಸು ಸುಸಂಸ್ಕೃತ ಅಂತಃಕರಣದ ಪ್ರತೀಕ.

ಮಗನು ಹೇಳುವ ಅಪ್ಪನ ವ್ಯಕ್ತಿತ್ವ ಅವರ ಕೃತಿಗಳಲ್ಲೂ ಮೇಳವಿಸಿದೆ. ಅಂತಹ ಒಂದೆರಡು ಉದಾಹರಣೆಯನ್ನು ಗಮನಿಸಿ ಈ ಅಧ್ಯಾಯಕ್ಕೆ ತೆರೆ ಎಳೆಯುತ್ತೇನೆ. ಕುವೆಂಪುರವರ ಮಾನವೀಯ ಕಳಕಳಿಯೇ ಮೈವೆತ್ತಿ ಬಂದಂತೆ ತೋರುವ ಅವರ 'ಧನ್ವಂತರಿಯ ಚಿಕಿತ್ಸೆ' – ಎಂಬ ಕಥೆಯಲ್ಲಿ ಅವರು ತಂದಿರುವ ನೋವಿನ ಕಲ್ಪನೆ ಅದ್ಭುತ. ಮರುಗುವ ಗುಣವಿದ್ದರೆ ನೋವನ್ನು ಪರಿಭಾವಿಸಲು ಸಾಧ್ಯ.

"ಯಾವನಾದರೊಬ್ಬನನ್ನು ಮುಳ್ಳಿನ ಹಾಸಗೆಯ ಮೇಲೆ ಅಂಗಾತನೆ ಮಲಗಿಸಿ, ಎದೆಯ ಮೇಲೆ ಹೆಬ್ಬಂಡೆಯನ್ನು ಬಹುಕಾಲದವರೆಗೂ ಹೇರಿ, ಮಣಭಾರದ ಸುತ್ತಿಗೆಯಿಂದ ಬೀಸಿ ಬೀಸಿ ಹೊಡೆದರೆ, ಅವನು ಹೇಗೆ ನರಳಬಹುದೋ ಹಾಗಿದ್ದಿತು ಆ ಬೀಭತ್ಸಕರವಾದ ನರಳು!"

ಇದರ ಜೊತೆಗೆ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಹೂವಯ್ಯ ಬೇಲರ ಬೈರಾನಿಗೆ ಪಡಿಯನ್ನು ನೀಡುವುದು, ಮತ್ತೆ ಅವನ ಹೆಂಡತಿಗೆ ಹೆರಿಗೆಯಾದಾಗ ಮಾಡುವ ಉಪಚಾರ,. ಹಾಗು ಅವನ ಮಗ ಗಂಗ ಭೂತದ ವಿಚಾರವಾಗಿ ನರಳುತ್ತಿದ್ದಾಗ ಅವನಿಗೆ ತಿಳಿವಳಿಕೆಯ ಧೈರ್ಯ ಹೇಳುವುದು– ಇವೆಲ್ಲಾ ಮಾನವೀಯ ಮೌಲ್ಯಗಳ ಸಂಕೇತವೇ ಅಲ್ಲವೇ?

ಕುವೆಂಪು ಅವರು ತಮ್ಮ ಬದುಕಿನ ಆವರಣದಲ್ಲಿ ಕಂಡುಂಡ ಅನುಭವಗಳನ್ನೇ ಜೀವಂತ ಪಾತ್ರಗಳನ್ನಾಗಿ ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡರು. ಒಬ್ಬ ಯಶಸ್ವಿ ಲೇಖಕನ ಮನಸ್ಸು ಎಂದಿಗೂ ಪ್ರಗತಿಪರ ಧೋರಣೆಯನ್ನು ಹೊಂದಿರುವಂತೆ ಅವರ ಬರಹ ಊರ್ಧ್ವಮುಖವಾಗಿಯೇ ಸಾಗಿತು. ನಾನಾ ಜಂಜಡಗಳಿಂದ ಅಧೋಗತಿಗಿಳಿದಿದ್ದ ಜನ ಸಮುದಾಯವನ್ನು ನೆಮ್ಮದಿಯ ಜೀವನಕ್ಕೆ ಸಾಗಿಸಬೇಕು ಎಂದು ಸಂಕಲ್ಪಿಸಿ, ಅದಕ್ಕಾಗಿ ಜನರಲ್ಲಿ ವಿಚಾರ ವಿವೇಚನೆ ಮಾಡಲು ಬೇಕಾಗಿರುವ ಶಿಕ್ಷಣವನ್ನು ಪೋಷಿಸಿದರು ಎಂಬ ಸತ್ಯ ಅವರ ಕೃತಿಗಳ ಮೂಲಕ ಮತ್ತು ಮಗನ ರಸವತ್ತಾದ ನೆನಪಿನ ಪುಟಗಳಿಂದ ವಿಶದವಾಗಿ ಗೋಚರಿಸುತ್ತದೆ. ಅಪ್ಪನ ಮನೋಭೂಮಿಕೆಯನ್ನು ತಕ್ಕ ಮಟ್ಟಿಗೆ ಗ್ರಹಿಸಿ ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ತೇಜಸ್ವಿಯವರ ಪಾತ್ರ ಹಿರಿದಿದೆ.

೬ – ಕನ್ನಡದ ಟ್ಯಾಂಕರ್

ಕವಿ ಕುವೆಂಪು ಬದುಕಿದ್ದು ಕನ್ನಡ, ಉಸಿರಾಡಿದ್ದು ಕನ್ನಡ, ಆ ಉಸಿರನ್ನು ಅಮರವಾಗಿಸಿದ್ದು ಕನ್ನಡದಲ್ಲೇ. ಅದಕ್ಕಾಗಿಯೇ ಅವರಾಡಿದ್ದು:

> "ಎಲ್ಲಾದರೂ ಇರು; ಎಂತಾದರೂ ಇರು;
> ಎಂದೆಂದಿಗು ನೀ ಕನ್ನಡವಾಗಿರು.
> ಕನ್ನಡ ಗೋವಿನ ಓ ಮುದ್ದಿನ ಕರು,
> ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!"[೧]

ಕುವೆಂಪು ಕನ್ನಡ ಸಾಹಿತ್ಯ ರಾಶಿಗೆ ಅಪಾರ ಕೊಡುಗೆ ನೀಡಲು ಪ್ರೇರೇಪಿಸಿದ ಆಂಗ್ಲ ಕವಿ ಜೇಮ್ಸ್ ಕಸಿನ್ಸ್ ಅವರನ್ನು ಕನ್ನಡ ಜನತೆ ವಂದಿಸಲೇ ಬೇಕು. ಕುವೆಂಪು ಮೊದಲು ಬರೆದದ್ದು ಆಂಗ್ಲ ಭಾಷೆಯಲ್ಲಿ ಎಂಬುದು ಅಚ್ಚರಿಯ ಸಂಗತಿ. ಕನ್ನಡದ ವಿಷಯವಾಗಿ ಮಗ ತೇಜಸ್ವಿಗೆ ಕುವೆಂಪು ಹೇಳಿದ ಮಾತುಗಳು ಅವರೊಡನೆ ಮಾಡಿದ ಚರ್ಚೆಗಳು ಪ್ರತಿಯೊಬ್ಬ ಕನ್ನಡಿಗನಿಗೂ, ಪ್ರತಿಯೊಬ್ಬ ಕನ್ನಡ ಮೇಸ್ಟ್ರಿಗೂ ಕೈ ದೀವಿಗೆಯೇ ಎಂದು ನಾನು ಭಾವಿಸುತ್ತೇನೆ. ಕುವೆಂಪು ೨೦ನೇ ಶತಮಾನದ ಅತಿ ಶ್ರೇಷ್ಠ ಕವಿ. ಅವರು ಕನ್ನಡಕ್ಕಾಗಿ ಮಾಡಿದ ಸೇವೆ ಅನಂತ. 'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪ ವೃಕ್ಷವಾಗುವುದು' ಎಂದು ಮಿಂಚಿನ ತಾತ್ತ್ವಿಕ ಕರೆ ಕೊಟ್ಟವರು ಕುವೆಂಪು.

ಕನ್ನಡದ ಬೆಳವಣಿಗೆಗೆ ಸಮೃದ್ಧಿಗೆ ನಾನು ಜೀವಂತ ಶ್ರಮಿಸುತ್ತೇನೆ. ಅದರ ಬೆಳವಣಿಗೆಗೆ ಅಡ್ಡ ಬರುವವರನ್ನು ಸುಮ್ಮನೇ ಬಿಡುವುದಿಲ್ಲವೆಂದು – "ಕನ್ನಡದ ವಿಷಯದಲ್ಲಿ ನಾನು ಟ್ಯಾಂಕಿನಂತೆ ಮುನ್ನುಗ್ಗುತ್ತೇನೆ; ನೀವು ದಾರಿ ಬಿಟ್ಟು ಕೊಟ್ಟರೋ ಸರಿ, ಇಲ್ಲವೋ ಅಪ್ಪಚ್ಚಿಯಾಗುತ್ತೀರಿ!"[೨] ಎಂದು ಗುಡುಗುತ್ತಾರೆ. ಆದರೆ ಕನ್ನಡದ ಜಾಯಮಾನಕ್ಕೆ ಒಗ್ಗುವಂತೆ ಅದನ್ನು ದುಡಿಸಿಕೊಳ್ಳಲು ನಮಗೆ ಬೇರೆ ಭಾಷೆಗಳ ತಿಳಿವು ಅಗತ್ಯ. ಅದನ್ನು ದೂರೀಕರಿಸುವ ಅವಿವೇಕ ನಮ್ಮೆಲ್ಲಿರ ಬಾರದು. ಒಬ್ಬ ಮನುಷ್ಯ ಅವನಿಗೆ ಸಾಧ್ಯವಾದಷ್ಟು ಭಾಷೆಗಳನ್ನು ಕಲಿಯಲಿ ಆ ಮೂಲಕ ಕನ್ನಡವನ್ನು ಬೆಳೆಸಲಿ ಎಂದು ಹೇಳುತ್ತಾ ಇಂಗ್ಲೀಷ್ ಭಾಷೆಯ ತಿಳಿವಳಿಕೆ ಯಾವ ಕಾರಣಕ್ಕೆ ಅಗತ್ಯವೆಂದು ಮಗ ತೇಜಸ್ವಿಗೆ ದೀರ್ಘವಾಗಿ ಹೇಳಿದ ಮಾತುಗಳಿವು.

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೧ ಪುಟ ೩೮೭.
[೨] 'ವಿಚಾರ ಕ್ರಾಂತಿಗೆ ಆಹ್ವಾನ', ಪುಟ ೭೩.

"ನೀನು ಇಂಗ್ಲೀಷ್ ಚೆನ್ನಾಗಿ ಕಲಿಯಬೇಕಾಗಿರುವುದು ನಿನ್ನ ಅಗತ್ಯಕ್ಕಾಗೇ ಹೊರತು ಇಂಗ್ಲೀಷಿನವರ ಅಗತ್ಯಕ್ಕಾಗಿ ಅಲ್ಲ. ನಿನಗೆ ಅದರಲ್ಲಿರುವ ಪ್ರಪಂಚದ ಜ್ಞಾನವೆಲ್ಲಾ ಬೇಕಾದರೆ ಈ ಸಬೂಬುಗಳನ್ನೆಲ್ಲಾ ಬಿಟ್ಟು ಕಷ್ಟಪಟ್ಟು ಕಲಿ. ಅದು ಬಿಟ್ಟು ಕನ್ನಡದಲ್ಲೇ ಎಲ್ಲಾ ಇದೆ ಎಂದು ತಿಳಿದು ಕೂಪ ಮಂಡೂಕ ಆಗಬೇಡ. ಬೇಕಾದಷ್ಟು ಜನ ಪಂಡಿತರು ಪೋಲಿ ಜೋಕುಗಳನ್ನು ಮಾಡಿಕೊಂಡು ಪಾಠ ಮಾಡುತ್ತಾ ಕಾಲೇಜಿನ ಕೋಡಂಗಿಗಳಾಗಿ ಕಾಲ ಯಾಪನೆ ಮಾಡುತ್ತಿರುವುದಕ್ಕೆ ಕಾರಣ ಈ ರೀತಿಯ ಹುಸಿ ಪಾಂಡಿತ್ಯ. ಕನ್ನಡದಲ್ಲಿ ಏನೂ ಇಲ್ಲ ಎಂದು ತಿಳಿಯುವುದಕ್ಕಿಂತ ಕನ್ನಡದಲ್ಲಿ ಎಲ್ಲಾ ಇದೆ ಎಂದು ತಿಳಿಯುವುದು ಸಾಹಿತ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಅಪಾಯಕಾರಿಯಾದ ಮೌಢ್ಯ. ಇಂಗ್ಲೀಷರು ಸಹ ತಮ್ಮ ಭಾಷೆ ಕುರಿತು ಇಂಥ ಮಾತುಗಳನ್ನಾಡುವುದಿಲ್ಲ. ಯಾವ ಭಾಷೆಯಲ್ಲೂ ಎಲ್ಲಾ ಇದೆ ಎಂದು ತಿಳಿಯುವವನು ಮೂರ್ಖ ಎಂದರು. ಇಡೀ ಜೀವಮಾನವನ್ನೇ ಕನ್ನಡಕ್ಕೆ ಮುಡುಪಾಗಿಟ್ಟ ಅಣ್ಣ ಆವತ್ತು ನನಗೆ ಹೇಳಿದ ಮಾತುಗಳನ್ನು ಆ ಸನ್ನಿವೇಶದಿಂದ ಪ್ರತ್ಯೇಕಿಸಿ ನೋಡಿದರೆ ಕನ್ನಡದ ದ್ವೇಷಿ ಎಂದೇ ತಿಳಿದು ಬಿಡಬಹುದೇನೋ! ಭಾಷೆಯ ಬಗ್ಗೆ ಸಾಹಿತ್ಯದ ಬಗ್ಗೆ ಯಾವ ಸಂದರ್ಭದಲ್ಲೂ ಅಂಧಾಭಿಮಾನಕ್ಕೆ ಬಲಿಯಾಗದೆ ವಿವೇಕಯುತ ವಿವೇಚನೆ ಮಾಡುತ್ತಿದ್ದುದಕ್ಕೆ ಅಣ್ಣನ ಆವತ್ತಿನ ಮಾತುಗಳು ಸಾಕ್ಷಿಯಾಗಿವೆ."[೧]

"ಕನ್ನಡದ ಕಬ್ಬದಲಿ ರಸವುಕ್ಕುತಿಲ್ಲ;
ಕನ್ನಡದ ಕಬ್ಬಿಗರು ಬರಿಯರೆಗಳಂತೆ
ಹೆರರ ಕೊಳಲಿನ ದನಿಯ ಬೀರು ತಿಹರಂತೆ;
ಕನ್ನಡಕೆ ಕೊರಳಿಲ್ಲ ; ಹುರುಳು ತಿರುಳಿಲ್ಲ;
ಬೆಳಕಿಲ್ಲ; ಜೀವನದ ಹುರುಪೆಂಬುದಿಲ್ಲ.
ಎಂಬುದನು ಕೇಳಲೆದೆಗಲುಗಿಕ್ಕಿದಂತೆ
ಬಾಳು ಬಾಯಾರುವುದು; ಮೂಡುವುದು ಚಿಂತೆ;
ನನ್ನಿಯಿಹುದದರಲ್ಲಿ; ಎಲ್ಲ ಸುಳ್ಳಲ್ಲ!"[೨]

ಈ ಮೇಲಿನ ಕವನವನ್ನು ಕುವೆಂಪುರವರು ನೊಂದು ಬರೆದಿದ್ದಾರೆ. "ನನ್ನಿಯಿಹುದದರಲ್ಲಿ; ಎಲ್ಲ ಸುಳ್ಳಲ್ಲ!" ಎಂಬ ಮಾತು ಅವರ ಪ್ರಾಮಾಣಿಕತೆಯನ್ನು ಕನ್ನಡದ ನೈಜ ಸ್ಥಿತಿಯನ್ನು ಎತ್ತಿ ತೋರುತ್ತದೆ. ಅಂದರೆ ಕನ್ನಡ ಸಾಹಿತ್ಯ ಬರಿದು, ಜೊಳ್ಳು

---

೧ 'ಅಣ್ಣನ ನೆನಪು', ಪುಟ ೧೯೦.
೨ ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೫೭೨.

ಎಂಬರ್ಥವಲ್ಲ. ಕನ್ನಡ ಭಾಷೆಯ ಸೃಜನಶೀಲತೆಯಲ್ಲಿ ಹೊಸ ವಿಚಾರಗಳು ಮೂಡುತ್ತಿಲ್ಲ. ವೈಚಾರಿಕ ವಿವೇಚನೆಯಿಂದ ಕೃತಿಗಳು ಹೊರ ಹೊಮ್ಮಬೇಕಾಗಿದೆ, ಅದಕ್ಕಾಗಿ ಅದರಲ್ಲಿ ಸತ್ಯವಿದೆ ಎಂದು ಹೇಳುತ್ತಾರೆ.

ಪ್ರಪಂಚದ ಎಲ್ಲಾ ಭಾಷೆಗಳ ವಿದ್ಯೆ ಮತ್ತು ವಿದ್ಯಮಾನವನ್ನು ಗರ್ಭೀಕರಿಸಿಕೊಂಡು ತನ್ನದೇ ಆದ ಸ್ವಂತಿಕೆಯನ್ನು ಉಳಿಸಿಕೊಂಡು ಅಭಿವ್ಯಕ್ತಿಯನ್ನು ಪಡೆಯುವ ಚೈತನ್ಯ ಶಕ್ತಿ ಕನ್ನಡಕ್ಕೆ ಬೇಕು. ಅದನ್ನು ಬಿಟ್ಟು ನೆರೆ ಭಾಷೆಗಳಿಗೆ ಮನೆ ಭಾಷೆಯ ಸ್ಥಾನವನ್ನಿತ್ತು ನಮ್ಮ ತಾಯ್ನುಡಿಯನ್ನು ಅಂಧಕಾರದಲ್ಲಿ ಮುಳುಗಿಸುವುದಲ್ಲ. ಪ್ರಸ್ತುತದಲ್ಲಿ ವಿದ್ಯೆ ಮತ್ತು ವಿದ್ಯಮಾನವನ್ನು ಸ್ವೀಕರಿಸಿ; ನಮ್ಮ ಸ್ವಂತ ನುಡಿಯಲ್ಲಿ ಏಳ್ಗೆ ಹೊಂದುವುದರ ಬದಲು ಪರಕೀಯ ಭಾಷೆಗಳನ್ನು ಬೆಳೆಸಿ ಉಳಿಸುವ ಅವಿವೇಕಗಳು ಕನ್ನಡ ನಾಡಿನಲ್ಲಿ ವ್ಯಾಪಕವಾಗಿ ನಡೆಯುತ್ತಿವೆ. 'ಕನ್ನಡದಲ್ಲೇ ಎಲ್ಲವೂ ಇಲ್ಲ' ಎಂಬ ಕುವೆಂಪು ಅವರ ಹೇಳಿಕೆಯನ್ನು ತಾತ್ವಿಕ ವಿವೇಚನೆಗೆ ಗುರಿಪಡಿಸಿದಾಗ ಅವರ ಮಾತಿನ ಮಹತ್ವದ ಅರಿವಾಗುತ್ತದೆ. ಅವರೆಂದೂ ಕನ್ನಡದ ವಿರೋಧಿಯಲ್ಲ; ಕನ್ನಡದ ಶಿಶು, ಕನ್ನಡದ ಬಾಳ್ವೆಗೆ ಬದುಕಿದ ಶಕಪುರುಷ, ಕನ್ನಡ ಭಾಷೆ ಸೊರಗುತ್ತಿರುವುದಕ್ಕಾಗಿ ಈ ರೀತಿ ನೊಂದು ಕೂಗುತ್ತಾರೆ.

"ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ,
ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ!
ರಾಜ ನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು,
ದೇವ ನುಡಿಯೆಂದೊಂದು ಹತ್ತಿ ಜಗ್ಗಿ
ನಿರಿ ನಿಟಿಲು ನಿಟಿಲುಲೆಂದು ಮುದಿ ಮೂಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!
ಕೂಗಿ ಕೊಳ್ಳಲು ಕೂಡ ಬಲವಿಲ್ಲ: ಮಕ್ಕಳೇ
ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ!"[೧]

ಹೀಗೆ ನೋವಿನಿಂದ ಕನ್ನಡ ಕಂದರಿಗೆ ಕರೆ ಕೊಡುವ ಕುವೆಂಪು ಅವರ ಕನ್ನಡ ಪ್ರೀತಿ ಪ್ರತಿ ಕನ್ನಡಿಗನ ಮನಸ್ಸಿಗೆ ಜ್ಞಾನ ದೀಪ. ಕೇವಲ ವ್ಯವಹಾರ ಜ್ಞಾನದಿಂದ, ಸ್ವಾರ್ಥಕ್ಕೆ ಬಲಿಯಾಗಿ ನಿನ್ನ ತನವನ್ನು ನೀನು ಮಾರಿಕೊಳ್ಳದೆ, ನಿನ್ನ ಮಾತೆಯನ್ನು ನಿನ್ನ ಅವಿವೇಕಕ್ಕೆ ಆಹುತಿ ಕೊಡದೆ ಕನ್ನಡ ತಾಯಿಯ ರಕ್ಷಣೆಗೆ ಅವಳ ಪೋಷಣೆಗೆ 'ಇಂದೇ ಕಂಕಣ ಕಟ್ಟು' ಎಂದು ಹೇಳುವ ಮಾತು ಕನ್ನಡಿಗನ ಮನ ತಟ್ಟುತ್ತದೆ.

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೧, ಪುಟ ೩೮೫.

"ಇದು ನಿನ್ನಯ ಸತಿಯಾಣೆ!
ಇದು ನಿನ್ನಯ ಪತಿಯಾಣೆ!
ಮಕ್ಕಳ ಮೇಲಾಣೆ!
ಅಕ್ಕರೆ ಮೇಲಾಣೆ!
ಗುರು ದೇವರ ಆಣೆ!
ನನ್ನಾಣೆ!
ನಿನ್ನಾಣೆ!
ಕನ್ನಡ ಜನರೆಲ್ಲರ ಮೇಲಾಣೆ!
ಕನ್ನಡ ನಾಡೊಂದಾಗದೆ ಮಾಣೆ
ತೊಡು ದೀಕ್ಷೆಯ! ಇದು ರಕ್ಷೆಯ!
ಕಂಕಣ ಕಟ್ಟಿಂದೇ
ಇನ್ನೆಂದೂ ತಾನೊಂದೇ!
ಕನ್ನಡ ನಾಡೊಂದೇ!"[೧]

ಈ ಪದ್ಯ ಓದಿದ ಆತ್ಮಾಭಿಮಾನ ಇರುವ ಯಾವ ಕನ್ನಡಿಗನೇ ಆಗಲಿ, ಮನಸ್ಸಿನಲ್ಲಿ ಕನ್ನಡಕ್ಕಾಗಿ ತನ್ನ ಹೋರಾಟವೆಂದು ಸಂಕಲ್ಪ ಮಾಡದೆ ಇರನು. ಕನ್ನಡದ ಮೇಲ್ಮೆಗಾಗಿ ಶ್ರಮಿಸುವ ಇಂಥ ನಿಸ್ಪೃಹ ಹೃದಯಗಳ ನಡುವೆ ಅಧಿಕಾರ ಲಾಲಸೆಗೆ ಒಳಗಾಗಿ ಮಂಗಮತಿಗಳಾಗುವ ಹಿರಿಯ ರಾಜಕೀಯ ಮುಖಂಡರುಗಳೆನಿಸಿಕೊಳ್ಳುವ ಹಲವರು ಕನ್ನಡದ ಮತ್ತು ಕರ್ನಾಟಕದ ಏಳ್ಗೆಗೆ ಅಡ್ಡಗಾಲು ಹಾಕಿರುವುದು ತಿಳಿಯುತ್ತದೆ. ಅದಕ್ಕೂ ಜಗ್ಗದ ಕುವೆಂಪು "ಕರ್ನಾಟಕ ಎಂದರೇನು? ಸಾಮಾನ್ಯವೇ? ಎಚ್ಚರ" ಎನ್ನುತ್ತಾರೆ.

"ಕರ್ನಾಟಕ ಎಂಬುದೇನು?
ಹೆಸರೆ ಬರಿಯ ಮಣ್ಣಿಗೆ?
ಮಂತ್ರಕಣಾ! ಶಕ್ತಿಕಣಾ!
ತಾಯಿಕಣಾ! ದೇವಿಕಣಾ!
ಬೆಂಕಿಕಣಾ! ಸಿಡಿಲು ಕಣಾ!
ಕಾವ ಕೊಲುವ ಒಲವ ಬಲವ
ಪಡೆದ ಚಲದ ಚಂಡಿ ಕಣಾ!"[೨]

ಎಂಬುದಾಗಿ ತುಂಬು ಅಭಿಮಾನದಿಂದ ಎಚ್ಚರಿಸುತ್ತಾರೆ.

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೧೨೮.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೧೨೬.

ತಾಯಿ, ತಾಯ್ನಾಡು, ತಾಯ್ನುಡಿಗೆ ಪರಮ ಗೌರವವನ್ನು ನೀಡುತ್ತಿದ್ದ ಕುವೆಂಪು ಕನ್ನಡಕ್ಕಾಗಿ ಏನು ಮಾಡಲೂ ಸಿದ್ಧರಿದ್ದರು. ತಮಗೆ ಸಿಕ್ಕ ಅಧಿಕಾರದವಧಿಯಲ್ಲಿ ಕನ್ನಡಕ್ಕಾಗಿ ಏನೆಲ್ಲವನ್ನು ಮಾಡಬಹುದೋ ಅದನ್ನು ತಮ್ಮ ಇಚ್ಛೆಯ ಅನುಸಾರ ಮಾಡಿದರು. ಹಾಗೂ ಮುಂದಿನ ಅಧಿಕಾರಿ ವರ್ಗದವರಿಗೆ ಕನ್ನಡಕ್ಕಾಗಿ ನಿಮ್ಮ ಒಳ್ಳೆ ಕೆಲಸಗಳೆಲ್ಲಾ ಮೀಸಲಿರಲಿ ಎಂದು ವಿನಂತಿಸುತ್ತಿದ್ದರು. ಅವರು ಕನ್ನಡಕ್ಕಾಗಿ ಆಡಿದ ಮಾತುಗಳು ಹಚ್ಚ ಹಸುರು. "ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ, ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ವ್ಯಕ್ತಿಗಳನ್ನು ದುಡಿಯಲು ಪ್ರಚೋದಿಸುವುದು, ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನೆಲ್ಲ ತಪಃ ಶಕ್ತಿಯನ್ನು ಅಥವಾ ಪ್ರಾರ್ಥನಾ ಶಕ್ತಿಯನ್ನು ಕನ್ನಡದ ಸೇವೆಗಾಗಿ ಮೀಸಲಿಡುತ್ತೇನೆ......."[೧]

> "ಪಂಪರನ್ನರ್ ಕುಮಾರವ್ಯಾಸ ಲಕ್ಷ್ಮೀಶ
> ಹರಿಹರಾದಿಗಳುಸಿರ್ ನಮ್ಮೊಳಿರ್ಪನ್ನೆಗಂ
> ಅಳುಕದೀ ಕನ್ನಡಂ, ಅಳಿಯದೀ ಕನ್ನಡಂ,
> ಉಳಿವುದೀ ಕನ್ನಡಂ! . . ."[೨]

[೧] 'ಅಣ್ಣನ ನೆನಪು', ಪುಟ ೧೬೮.
[೨] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೧೨೩.

೭-ಸ್ತ್ರೀಗೆ ಮಾತೃ ಗೌರವ

ಆದರ್ಶ ಪುರುಷರ ಸಾಲಿನಲ್ಲಿ ನಿಲ್ಲಬಲ್ಲ ವರಿಷ್ಠ ವ್ಯಕ್ತಿತ್ವ ಕುವೆಂಪು ಅವರದು. ಅವರು ನಡೆದುಕೊಳ್ಳುವ ರೀತಿಯಿಂದ ಯಾರಿಗೂ ನೋವಾಗಲೀ, ಕಿರಿಕಿರಿಯಾಗಲೀ ಎಂದೂ ಉಂಟಾಗಿರಲಿಲ್ಲ. ಯಾರನ್ನು ಅಗೌರವದಿಂದ ಕಾಣುವ, ಛೇಡಿಸುವ ಗುಣಗಳಿರಲಿಲ್ಲ, ಅವರಲ್ಲಿ ಮಕ್ಕಳನ್ನು ಅತಿ ಮುದ್ದಿನಿಂದ ಮುದ್ದಿಸುವ, ಮಾತಾಡಿಸುವ ಕೋಮಲ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರು. ಹೆಣ್ಣು ಎಂದರೆ ಅವರಿಗೆ ಅತೀವ ಗೌರವ. ಅವರನ್ನು ಶ್ರೀಮಾತೆಯ ಸ್ವರೂಪದಂತೆ ಕಾಣುತ್ತಿದ್ದರು. ಮನೆಗೆಲಸಕ್ಕೆ ಬರುತ್ತಿದ್ದ ಮಹಿಳೆಯರನ್ನು ಕೂಡ ಸಭ್ಯವಾಗಿ ನಡೆಸಿಕೊಳ್ಳುವ ತುಂಬು ಮರ್ಯಾದೆಯ ವ್ಯಕ್ತಿತ್ವ ಅವರದು. ಶ್ರೀ ಶಾರದಾ ಮಾತೆಯನ್ನು ಪೂಜಿಸುತ್ತಿದ್ದುದರ ಫಲ ಈ ವ್ಯಕ್ತಿತ್ವ ಎಂದರೆ ತಪ್ಪಿಲ್ಲ.

"ಶ್ರೀ ಶಾರದಾದೇವಿ, ಹೇ ಮಹಾಮಾತೆ,
ಶ್ರೀ ರಾಮಕೃಷ್ಣ ಗುರುದೇವ ಸಂಪ್ರೀತೆ,
ಪರಮ ಪಾವನ ಹೃದಯೆ, ಕಲಿಯುಗದ ಸೀತೆ,
ಭಕ್ತಿಯಿಂದಾರಾಧಿಪೆವು ನಿನ್ನನಮ್ಮಾ!"[೧]

ಶ್ರೀಗುರು, ಶ್ರೀಮಾತೆಯರ ಕೃಪೆಯಿಂದ ಕುವೆಂಪು ಅವರು ತಮ್ಮ ಭಾವ ಸಮುದ್ರದಲ್ಲಿ ಮಹಿಳೆಯರ ಪರವಾಗಿರಿಸಿಕೊಂಡಿದ್ದ ಕಾಳಜಿಯ ರತ್ನಗಳು ಎಂದೂ ಬೆಲೆ ಕುಸಿಯುವಂಥವಲ್ಲ. ಕುವೆಂಪು ಯಾರೊಂದಿಗೂ ಯಾರ ವಿಷಯವನ್ನೂ ಕುರಿತು ಕೀಳು ದರ್ಜೆಯಲ್ಲಿ ಮಾತಾಡುತ್ತಿರಲಿಲ್ಲ. ಅದರಲ್ಲೂ ಸ್ತ್ರೀಯರ ವಿಷಯದಲ್ಲಿ ಕಟ್ಟೆಚ್ಚರದಿಂದ ವರ್ತಿಸಿದವರು. ತಮ್ಮೊಡನೆ ಸಂಭಾಷಣೆಯಲ್ಲಿ ನಿರತರಾದವರು ಯಾರಾದರೊಬ್ಬ ಹೆಂಗಸಿನ ಬಗ್ಗೆ ಅಸಾಧುವಾಗಿ ಸಂಭಾಷಿಸುತ್ತಿದ್ದರೆ ಅವರನ್ನು ತಕ್ಷಣ ತಿದ್ದುತ್ತಿದ್ದರು. ಆ ರೀತಿ ನಡೆದುಕೊಳ್ಳುವುದು ಗುರುತರವಾದ ಅಪರಾಧವೆಂದು ಅವರಲ್ಲಿ ಅಪರಾಧಿ ಪ್ರಜ್ಞೆಯನ್ನು ಮೂಡಿಸುತ್ತಿದ್ದ ಸಂಭಾವಿತ ವ್ಯಕ್ತಿತ್ವ ಅವರದು.

ಬಾಲಕ ತೇಜಸ್ವಿ ಅವರಿಗೆ ಕುವೆಂಪು ಹಲವು ಬಾರಿ ಹೆಂಗಸರ ವಿಷಯವಾಗಿ ಹೇಗೆ ಮಾತಾಡಬೇಕೆಂದು ಪಾಠ ಹೇಳಿದ್ದಾರೆ. ಒಂದು ಸಂದರ್ಭವನ್ನು ಇಲ್ಲಿ ಸ್ಮರಿಸೋಣ. ಬಾಲಕ ತೇಜಸ್ವಿ ಅರ್ಥವೇ ತಿಳಿಯದ ಒಂದು ಅವಾಚ್ಯ ಪದವೊಂದನ್ನು ತಮ್ಮ ಮನೆಗೆಲಸದ

[೧] ಕುವೆಂಪು ಸಮಗ್ರ ಕಾವ್ಯ, ಸಂ.೧, ಪುಟ ೫೪೨.

ಬೋರಮ್ಮನಿಗೆ ಆಡಿ "ಅದು ನೀನೇನಾ?" ಎಂದು ಕೇಳಿಬಿಡುತ್ತಾರೆ. ಅದರಿಂದ ಅಳುತ್ತಾ ಹೋದ ಮನೆಗೆಲಸದಾಕೆಯು ತೇಜಸ್ವಿ ತಾಯಿಯ ಬಳಿ ದೂರನ್ನು ಒಯ್ಯುತ್ತಾಳೆ. ಅದು ಕುವೆಂಪು ಅವರಿಗೂ ತಿಳಿದು ಅವರು ಹೇಳುವ ಬುದ್ಧಿವಾದ ಅಪ್ಪಂದಿರಿಗೆ ಮಾದರಿ. "ಇನ್ನು ಮೇಲೆ ಯಾವ ಹೆಂಗಸಿಗೂ ಈ ರೀತಿ ಹೇಳಕೂಡದು"[೧] ಎಂದು ಹೇಳುತ್ತಾರೆ. ಬಹುಶಃ ಬೇರೆಯವರಾಗಿದ್ದರೆ ಮನೆ ಕೆಲಸದಾಕೆಯನ್ನಲ್ಲವೆ ಅಂದಿರುವುದು ಎಂದು ಮಕ್ಕಳಿಗೆ ಬುದ್ಧಿಯನ್ನು ಹೇಳುವ ಅವಕಾಶವನ್ನು ಕಳೆದುಕೊಳ್ಳುತ್ತಿದ್ದರು.

ಮತ್ತೊಂದು ಬಾರಿ ಯುವಕ ತೇಜಸ್ವಿಗೆ ಮಹಿಳೆಯರ ಬಗ್ಗೆ ಹಗುರವಾಗಿ ಮಾತಾಡಬಾರದೆಂದು ಎಚ್ಚರಿಸುತ್ತಾರೆ. ಆ ಸಂದರ್ಭ ಹೀಗಿದೆ. ಕುವೆಂಪು ಅವರು ವೈಸ್ ಛಾನ್ಸಲರ್ ಆಗಿದ್ದ ಕಾಲಮಾನದಲ್ಲಿ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಮೇಷ್ಟರ ಮೇಲೆ ಒಬ್ಬ ಹೆಂಗಸು ದೂರು ತಂದು ಹೇಳುತ್ತಾರೆ. ಅದೇನೆಂದರೆ ಆ ಮೇಸ್ಟರು ತನ್ನನ್ನು ಮದುವೆಯಾಗುತ್ತೇನೆಂದು ಹೇಳಿ ಮೋಸ ಮಾಡಿದ್ದಾರೆಂದು. ಅಲ್ಲೇ ಇದ್ದ ಯುವಕ ತೇಜಸ್ವಿ ಆ ಹೆಂಗಸು ಹೇಳಿದ ದೂರು ತಮ್ಮ ಮೇಷ್ಟರ ಮೇಲೆ ಎಂದು ತಿಳಿದು ಆಕೆ ಹೇಳುತ್ತಿರವುದರಲ್ಲಿ ಸುಳ್ಳಿರಬಹುದು ಎಂದು ಹೇಳುತ್ತಾರೆ. ಅದಕ್ಕೆ ಕುವೆಂಪು ಅವರು "ಹೋಗಯ್ಯ, ಸುಮ್ಮನೆ ಈಕೆ ನಾಟಕವಾಡಿ ಹೋಗಲು ಇಲ್ಲೀವರೆಗೆ ಬಂದು ಹೋದರು ಅನ್ನುತ್ತೀಯಲ್ಲ! ನಿನಗೆ ವಿಜಯದೇವರಾಜ ಅರಸು ಪರಿಚಯವಿರೋದರಿಂದ ಅವರ ಪರ ಮಾತಾಡುತ್ತಿದ್ದೀಯ. ಅವರು ಏನೋ ಹೇಳಿ, ಇವರು ಏನೋ ತಿಳಿದುಕೊಂಡು, ತಪ್ಪು ಕಲ್ಪನೆ ಮೂಡಿರಬಹುದು. ಒಬ್ಬ ಮಹಿಳೆ ಇಲ್ಲಿಯವರೆಗೆ ಬಂದು ಸುಳ್ಳು ಸುಳ್ಳೇ ದೂರು ಕೊಡುತ್ತಾರೆ ಎಂದರೆ, ಅವರಿಗೂ ಅದು ಮರ್ಯಾದೆ ಪ್ರಶ್ನೆ ಅಲ್ಲವೆ? ಹೋಗಲಿ ಬಿಡು, ಮಹಿಳೆಯರ ವಿಚಾರ ಮಾತ್ರ ನೀವು ಎಂದೂ ಹಗುರವಾಗಿ ಮಾತಾಡಬಾರದು"[೨] ಎಂದು ಹೇಳುತ್ತಾರೆ.

ಈ ರೀತಿಯ ವಿವೇಕ ಹೇಳುವ ಮನಸ್ಸು ಮಾಡಿದರೆ, ಮನು ಹೇಳಿದಂತೆ ಸ್ತ್ರೀಯರಿರುವ ಜಾಗದಲ್ಲಿ ದೇವತೆಗಳು ಸಂತುಷ್ಟರಾಗುವುದರಲ್ಲಿ ಸಂಶಯವಿಲ್ಲ. ಕುವೆಂಪು ತಮ್ಮ ಸಾಹಿತ್ಯದಲ್ಲಿಯೂ ಸ್ತ್ರೀ ಮೂರ್ತಿಗಳನ್ನು ಬೆಳಗಿಸುವುದರಲ್ಲಿ ಎತ್ತಿ ಹಿಡಿಯುವುದರಲ್ಲಿ ಕೊರತೆ ಮಾಡಿಲ್ಲ. 'ಶ್ರೀ ರಾಮಾಯಣ ದರ್ಶನಂ' ಕೃತಿಯಲ್ಲಿ ಬರುವ ಮಹಿಳಾ ಪಾತ್ರಗಳ

---

೧ 'ಅಣ್ಣನ ನೆನಪು', ಪುಟ ೧೪.

೨ 'ಅಣ್ಣನ ನೆನಪು', ಪುಟ ೨೧೦.

ಬೆಳಗೆ ಅದಕ್ಕೆ ಸಾಕ್ಷಿ. ಕುವೆಂಪು ಹೆಣ್ಣಿಗೆ ಇನ್ನಿಲ್ಲದ ಗೌರವ ನೀಡುತ್ತಿದ್ದರು. ಯಾರಾದರೂ ಹೆಣ್ಣನ್ನು ಅಗೌರವದಿಂದ ಕಂಡರೆ ತಿದ್ದುತ್ತಿದ್ದರು. ಅವರ ಕಾವ್ಯದ ಗಿರಿವನಪ್ರಿಯ ರಾಮನಂತೆ.-

> "ಧರ್ಮಜ್ಞನಾತನಾ ಕೈಕಯೀ
> ಕ್ರೂರದರ್ಶಿನಿಯ ಗರ್ಭದಿನೆಂತುಟುದಿಸಿದನೊ
> ಸೋಜಿಗಂ!" "ಸೌಮಿತ್ರಿ, ನಿಂದಿಸದಿರಂಬೆಯಂ.
> ನುಡಿಯುವೊಡೆ ನುತಿಸು ತಮ್ಮನ ಗುಣಗಣಂಗಳಂ"[೧]

ತಾಯಿ ಕೈಕೆಯನ್ನು ಕೋಪದಿಂದ ಕ್ರೂರಿ ಎಂದು ಸಂಬೋಧಿಸಿದನ್ನು ವಿರೋಧಿಸಿ ರಾಮನು ಲಕ್ಷ್ಮಣನಿಗೆ ತಾಳ್ಮೆ ಹೇಳುತ್ತಾನೆ. ಕುವೆಂಪು ಅವರ ಜೀವನದೃಷ್ಟಿ ನಮಗೆ ರಾಮನ ಮೂಲಕ ಅಭಿವ್ಯಕ್ತವಾಗುತ್ತದೆ. ಹೆಣ್ಣು ಜಗನ್ಮಾತೆಯ ಸ್ವರೂಪ, ಭುವನ ಶಾಂತಿಗಾಗಿ, ಪುರುಷನ ಮೇಲ್ಮೆಗಾಗಿ ಅವಳ ಜನ್ಮವೆಂದು ನಿಷ್ಕಪಟವಾಗಿ ತಮ್ಮ ಮನದ ಇಂಗಿತವನ್ನು ಸಾರುತ್ತಾರೆ.

> "ತಾಳುತ್ತಿದೆ ಬಾಳುತ್ತಿದೆ
> ನಿನ್ನಿಂದೆಮ್ಮ ಇಳೆ
> ಹೇ ದಿವ್ಯೆ ಸಾಮಾನ್ಯೆ,
> ಮನೆ ಮನೆಯಾ ಊರ್ಮಿಳೆ,
> ಗೃಹಿಣಿ, ಗರತಿ,ದೇವಿ, ತಾಯಿ,
> ಹೆಸರಿಲ್ಲದ ಮಹಿಳೆ,
> ಮಣಿವನು ಇದೊ ನಿನ್ನಡಗೀ
> ಹುಸಿವೆಸರಿಗೆ ಮರುಳಾಗದ
> ಹೆಸರೊಲ್ಲದ ಹಸುಳೆ!"[೨]

ಹೆಣ್ಣಿಂದ ಭೂಮಿಯು ಬಾಳುತ್ತಿದೆ ಎಂಬ ಮಹತ್ತರವಾದ ಅಭಿಪ್ರಾಯವನ್ನು ಕುವೆಂಪು ಅವರಿಂದ ಮಾತ್ರ ನಿರೀಕ್ಷಿಸಬಹುದು. ಪ್ರಸ್ತುತ ಬದುಕಿನ ಸ್ತರದಲ್ಲಿ ಸಮಾನತೆಯ ಲಯ ತಪ್ಪಿ ಹೆಣ್ಣನ್ನು ಗೌರವದಿಂದ ನೋಡುವ ಪ್ರವೃತ್ತಿ, ಮಾಯವಾಗುತ್ತಿರುವುದು ಮುಂದೆ ಇಳೆಗೊದಗುವ ದುರ್ಗತಿಯ ಸಂಕೇತವೆನಿಸುತ್ತದೆ ಎಂದು ನನ್ನ ಮನಸ್ಸು ಪರಿಭಾವಿಸುತ್ತಿದೆ.

---

[೧] ಶ್ರೀ ರಾಮಾಯಣ ದರ್ಶನಂ. ಪುಟ ೨೧೪.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೮೧.

೮– ತತ್ತ್ವಾದರ್ಶದ ಗುರಿಕಾರ

ಕುವೆಂಪು ಅವರ ಜೀವನ ಸೂತ್ರವತ್ತಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ. ಹೇಗೆ ಹೇಗೋ ಬದುಕಬೇಕು ಎನ್ನುವುದಕ್ಕಿಂತ ಹೀಗೆ ಬದುಕಬೇಕು ಎಂಬ ಆದರ್ಶದ ವ್ಯಕ್ತಿ. ಅವರು ನಂಬಿದ್ದ ತತ್ತ್ವಾದರ್ಶಗಳು ಅವರನ್ನು ವಿವೇಚನ ಪರರನ್ನಾಗಿಯೂ, ಧರ್ಮ ಪರರನ್ನಾಗಿಯೂ, ರೂಪಿಸಿದವು. ಅವರ ಜೀವನದ ಬಹುಮುಖ್ಯ ತತ್ತ್ವಗಳು ಅವರ ಅಭಿಪ್ರಾಯದಲ್ಲಿ – "ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಈ ಪಂಚ ಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ, ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜ ಮತ. ಆ ಪಥ ಈ ಪಥ ಅಲ್ಲ; ವಿಶ್ವಪಥ. ಆ ಒಬ್ಬ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತಮತದ ಆಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನು ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ."[೧]

ಕುವೆಂಪು ಅವರ ಈ ತತ್ತ್ವ ವಿಶ್ವವಾಹಿನಿಯಾಗಿ, ವಿಶ್ವ ಸಾಮರಸ್ಯ ನೆಲೆಸಿದರೆ, ಭುವನದ ಭಾಗ್ಯಕ್ಕೆ ಎಣೆ ಮಿಗಿಲೆಲ್ಲಿ? ಇದಕ್ಕೆ ಸಮುದಾಯ ಸ್ಪಂದಿಸಬೇಕು. ಕೂಡಿ ಬಾಳೋಣ ಎಂಬ ನೀತಿಯಲ್ಲಿ ವಿಶ್ವಾಸ ಬರಬೇಕು. ಕುವೆಂಪು ತಮ್ಮ ತತ್ತ್ವಗಳ ಅನುಷ್ಠಾನವನ್ನು ತಮ್ಮ ಮನೆಯವರಿಂದಲೇ ಪ್ರಾರಂಭಿಸುತ್ತಿದ್ದರು. ಆದರೆ ಅವರ ಮೇಲೆ ಯಾವ ತತ್ತ್ವವನ್ನು ಬಲವಂತವಾಗಿ ಹೇರುತ್ತಿರಲಿಲ್ಲ. ಬದಲಿಗೆ ಯಾವುದೇ ತತ್ತ್ವದ ತಿರುಳನ್ನು ವಿವೇಚಿಸುವ ಆಲೋಚನಾ ಪರ ವ್ಯವಧಾನವನ್ನು ಅವರಿಗೆ ಬಳುವಳಿಯಾಗಿ ನೀಡಿದ್ದರು. ತಪ್ಪು ಸರಿಗಳ ವಿವೇಕ ಪಾಲನೆಯಲ್ಲಿ ಮನೆಯವರೆಂದೂ ಯಜಮಾನನನ್ನು ಮೀರುತ್ತಿರಲಿಲ್ಲ. ಅದೊಂದು ರೀತಿಯ ಸಾಮರಸ್ಯಪೂರ್ಣ ಕುಟುಂಬ.

ಕುವೆಂಪು ಯುವಕರಿಗೆ ವೈಚಾರಿಕ ಜೀವನೋತ್ಸಾಹವನ್ನು ತುಂಬುವುದರಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದರು. ಯುವಕರು ದೇಶದ ಬಲಯುತ ಶಸ್ತ್ರ ಎಂದು ಬಲವಾಗಿ ನಂಬಿದ್ದರು. ಅವರು ವಾಮ ಮಾರ್ಗದಲ್ಲಿ ಹೋಗಬಾರದೆಂದು, ಸತ್‌ಚಾರಿತ್ರ್ಯವನ್ನು ಮೈಗೂಡಿಸಿಕೊಳ್ಳಬೇಕೆಂದು ಅವರ ತುಂಬು ಹೃದಯದ ಕಳಕಳಿ. ಯುವಕರು ಆಲೋಚನಾ ಪರರಾಗಿದ್ದರೂ ಕೆಲವು ಸಂದರ್ಭದಲ್ಲಿ ಜಾರುವ ಇಕ್ಕಟ್ಟಿನ ಪರಿಸ್ಥಿತಿಗಳು ಬಂದಾಗ ಧೃತಿಗೆಡದೆ ನಡೆಯಬೇಕೆಂದು ಈ ರೀತಿ

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೮೯೨.

ಹುರಿದುಂಬಿಸುತ್ತಾರೆ. "ನೀವು ಲೋಕವನ್ನಾಗಲೀ, ಸಮಾಜವನ್ನಾಗಲೀ, ಪುರೋಹಿತಶಾಹಿಯನ್ನಾಗಲೀ ಬದಲಾಯಿಸಲು ಪ್ರಯತ್ನಿಸುವ ಅಗತ್ಯ ಖಂಡಿತ ಇಲ್ಲ. ನೀವು ಮತ್ತು ನಿಮ್ಮ ಮನಸ್ಸು ಪರಿವರ್ತನೆ ಆಗದೆ ಏನೂ ಬದಲಾಗುವುದಿಲ್ಲ. ನಿಮ್ಮಲ್ಲಿ ಪ್ರಾಮಾಣಿಕತೆ ಏನಾದರೂ ಇದ್ದರೆ ನಾನು ಹೇಳುವ ಒಂದು ಸಣ್ಣ ಸುಧಾರಣೆ ನಿಮ್ಮ ಜೀವನದಲ್ಲಿ ಮಾಡಿಕೊಳ್ಳಿ. ನಿಮ್ಮ ಮದುವೆಯನ್ನು ನೀವು ವರದಕ್ಷಿಣೆ ತಗೊಳ್ಳದೆ, ಶಾಸ್ತ್ರಾಚಾರಗಳಿಗೆ ಕಟ್ಟು ಬೀಳದೆ, ನಿಮ್ಮ ಅಂತಸ್ತಿನ ಪ್ರದರ್ಶನ ಮಾಡಲು ಧುಂದು ಮಾಡದೆ, ಸರಳವಾಗಿ ಮದುವೆ ಮಾಡಿಕೊಳ್ಳಿ. ಇದ್ಯಾವ ಮಹಾಕ್ರಾಂತಿ ಎಂದು ನಿಮಗನ್ನಿಸಬಹುದು. ನಿಮ್ಮ ಜೀವನದಲ್ಲಿ ಒಮ್ಮೆಯಾದರೂ ನೀವು ನಂಬಿದ ಆದರ್ಶಗಳ ಮೌಲ್ಯಗಳ ಪರವಾಗಿ ನಿಂತು ಗೊಡ್ಡು ಸಂಪ್ರದಾಯಗಳನ್ನು ಎದುರಿಸಿ, ನಾವು ನಂಬಿದ ಆದರ್ಶಗಳ ಪರವಾಗಿ ನಿಲ್ಲುವ ಅದ್ಭುತ ಅನುಭವ, ಆನಂದ ಏನೆಂದಾದರೂ ನಿಮಗೆ ಗೊತ್ತಾಗುತ್ತದೆ. ಆದರ್ಶಗಳು ನಾವು ದಿನಾ ಪಠಣ ಮಾಡಬೇಕಾದ ಗೊಡ್ಡು ಮಂತ್ರಗಳಲ್ಲ. ಅವು ನಮ್ಮ ಜೀವನದ ಉಸಿರು''[೧] ಎಂದು ಹೇಳುತ್ತಾರೆ.

ಈ ರೀತಿಯ ತತ್ತ್ವಾದರ್ಶದ ದುಂದುಭಿಯನ್ನು ಬಾರಿಸಿದ ಕುವೆಂಪು ತಮ್ಮ ಮಕ್ಕಳನ್ನು ಅದೇ ತತ್ತ್ವದ ಪ್ರಾಯೋಗಿಕ ಕರ್ತೃಗಳಾಗಿ ನೋಡಿದಾಗ ಅವರಿಗಾದ ಆನಂದಕ್ಕೆ ಮೇರೆಯಿಲ್ಲ ಅವರ ಹಿರಿಯ ಮಗ ತೇಜಸ್ವಿ ಅಂತರ್ಜಾತಿಯ ಹೆಣ್ಣನ್ನು ವಿವಾಹವಾದರು. ಅವರ ಕಿರಿಯ ಮಗ ಇನ್ನೂ ಒಂದು ಹೆಜ್ಜೆ ಮುಂದು ಹೋಗಿ ಅಂತರ್ಧರ್ಮದ ಹೆಣ್ಣನ್ನು ವಿವಾಹವಾದರು. ಪ್ರಪಂಚ ಸಾಮರಸ್ಯದ ವಕ್ತಾರರಾಗಿ ಕಂಡ ತನ್ನಿಬ್ಬರು ಮಕ್ಕಳು ಸಾಂಸ್ಕೃತಿಕ ಸಂಘರ್ಷವನ್ನು ದಿಟ್ಟವಾಗಿ ಎದುರಿಸಬಲ್ಲರು ಎಂಬ ಆತ್ಮವಿಶ್ವಾಸ ಕುವೆಂಪು ಅವರಲ್ಲಿ ಬಲವಾಗಿ ಮೂಡಿತು.

ಸ್ನೇಹಿತರೇ, ಅರ್ಥಹೀನ ಗೊಡ್ಡು ಆಚರಣೆಗಳನ್ನು ಪಾಲಿಸುವುದರಲ್ಲಿ ಯಾವ ಅರ್ಥವೂ ಇರುವುದಿಲ್ಲ. ತಮ್ಮ ಹಿರಿಯರ ಮನಸ್ಸನ್ನು ಸಾಧು ಮಾರ್ಗದಲ್ಲಿ ಬದಲಿಸಿ ಅವರಿಗೆ ತತ್ತ್ವಾದರ್ಶದ ಪಾಲನೆಯಲ್ಲಿ ದೊರಕುವ ಪರಮಾನಂದದ ಪರಿಚಯವನ್ನು ಮಾಡಿಸಲು ಸರ್ವ ಪ್ರಯತ್ನದಲ್ಲಿಯೂ ಶ್ರಮಪಡಬೇಕು.

ಕುವೆಂಪು ಅವರು ಸುಖೀ ಸಮಾಜದ ಕನಸನ್ನು ಕಂಡವರು. ಎಲ್ಲರೂ ಒಟ್ಟಾಗಿ, ಯಾವುದೇ ವರ್ಗ ಬೇಧವಿಲ್ಲದೆ, ಮೇಲುಕೀಳೆಂಬ ಅಂತರವಿಲ್ಲದೆ ಜನ ಬದುಕಬೇಕು; ಅದಕ್ಕಾಗಿ ಸರ್ವರೂ ಶಿಕ್ಷಿತರಾಗಬೇಕು. ಅನ್ಯಾಯವನ್ನು ಎದುರಿಸಿ ನಿಲ್ಲದ, ಅಪ್ರಬುದ್ಧ ಸಂಪ್ರದಾಯಗಳಿಗೆ

---

[೧] 'ಅಣ್ಣನ ನೆನಪು', ಪುಟ ೨೩೨.

ತಿಳಿವಳಿಕೆಯಿಲ್ಲದೆ ತಮ್ಮ ಗೋಣುಕೊಡುವ ಕುರಿಮಂದೆಯ ವ್ಯಕ್ತಿತ್ವವನ್ನು ಬಿಡಬೇಕು. ಸುಖೀರಾಜ್ಯದ ರಾಮರಾಜ್ಯ ಸಿದ್ಧಿಸಬೇಕೆಂಬುದು ಅವರ ತತ್ತ್ವಾದರ್ಶದ ಮೂಲಾಶಯ.

"ಕೊನೆಗಂಡಿತೊ ಓರೊರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
"ಸರ್ವೋದಯ!" "ಸರ್ವೋದಯ!"
ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!
ಮೇಲಿಲ್ಲವೊ ಕೀಳಿಲ್ಲವೋ
ಸರ್ವಸಮಾನದ ರಾಜ್ಯಃ
ಅಧ್ಯಕ್ಷನೊ ಚಮ್ಮಾರನೊ
ಕಾಯಕವೆಲ್ಲವು ಪೂಜ್ಯ!
. . . ."[೧]

ತೇಜಸ್ವಿಯವರು ಅಪ್ಪ ಕುವೆಂಪುರವರ ತತ್ತ್ವಾದರ್ಶಗಳನ್ನು ನೇರ ಕಂಡುಂಡು ಅವರ ಕನಸಿನಂತೆ ಬದುಕಿದವರು. ಅಪ್ಪ ಕರೆ ಕೊಟ್ಟದ್ದನ್ನು ಶಿರಸಾವಹಿಸಿ ಪಾಲಿಸಿದ ಧೀಮಂತ ತತ್ತ್ವವಾದಿ, ಸಂಕಲ್ಪವಾದಿಯಾಗಿದ್ದರು. ಅಪ್ಪ ಕುವೆಂಪುವಿನೊಂದಿಗೆ ಮಗ ಪೂರ್ಣಚಂದ್ರ ತೇಜಸ್ವಿಯು ಜೀವನೋತ್ಸಾಹಕ್ಕೆ ಪ್ರೇರಕ ಶಕ್ತಿ. ಇಂದು ಅವರಿಬ್ಬರೂ ನಮ್ಮಲ್ಲಿ ಉಳಿಸಿ ಹೋಗಿರುವ ಆದರ್ಶಗಳಿಗೆ ಬೆಲೆ ಕಟ್ಟಲು ಸಾಧ್ಯವೇ?!

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೭೫.

ಅಧ್ಯಾಯ ೩

ಮಗಳು ಕಂಡ ಕುವೆಂಪು-ಒಂದು ನೋಟ

ತಾರಿಣಿಯವರು ಕುವೆಂಪು ಅವರ ಮುದ್ದಿನ ಮಗಳು. ಕೌಟುಂಬಿಕ ವಲಯಕ್ಕೆ ಸೀಮಿತಗೊಂಡಂತೆ ಕುವೆಂಪು ಅವರ ಒಡನಾಟದ ಪ್ರಕ್ರಿಯೆಗಳು ಹೇಗಿದವು ಎಂಬುದರ ಬಗೆಗೆ ಹಲವು ಕುತೂಹಲಕಾರಿ ವಿಷಯಗಳನ್ನು -'ಮಗಳು ಕಂಡ ಕುವೆಂಪು' - ಎಂಬ ಕೃತಿಯ ಆವರಣದಲ್ಲಿ ಅನಾವರಣ ಮಾಡಿದ್ದಾರೆ. ಈ ಕೃತಿಯು ರಾಷ್ಟ್ರ ಕವಿಯ ಸಾಂಸಾರಿಕ ಜೀವನ, ದಾಂಪತ್ಯ ಜೀವನ, ಬಂಧು-ಮಿತ್ರರ ಒಡನಾಡ ಇವೇ ಮುಂತಾದ ವಿಷಯಗಳಲ್ಲಿರುವ ಸ್ವಾರಸ್ಯಕರ ಸಂಗತಿಗಳನ್ನು, ನವಿರಾಗಿ ಸಾಮಾನ್ಯ ಲಹರಿಯಲ್ಲಿ ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲದಂತೆ ದಾಖಲು ಮಾಡುತ್ತದೆ.

ತೇಜಸ್ವಿಯವರು ಅನಾವರಣ ಮಾಡುವ ಕುವೆಂಪು ಅವರ ವ್ಯಕ್ತಿತ್ವಕ್ಕೂ ತಂಗಿ ತಾರಿಣಿ ಅವರು ಅನಾವರಣ ಮಾಡುವ ವ್ಯಕ್ತಿತ್ವಕ್ಕೂ ಕೆಲವು ತರತಮಗಳಿವೆ ಎಂದರೆ ತಪ್ಪಾಗದು. ತೇಜಸ್ವಿಯವರು ಕುವೆಂಪು ಅವರ ವ್ಯಕ್ತ ಸಾನಿಧ್ಯದಲ್ಲಿ ಕಂಡ ಕೌಟುಂಬಿಕ ವಿಷಯಗಳು ಕೆಲವೇ ಕೆಲವಾದರೆ ಮಿಕ್ಕುಳಿದವು ಕುವೆಂಪು ಅವರ ವೃತ್ತಿ ಮತ್ತು ಕನ್ನಡಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳು. ತಾರಿಣಿ ಅವರು ಕುವೆಂಪು ಅವರನ್ನು ಕವಿಯಾಗಿ, ಲೇಖಕನಾಗಿ, ಎಲ್ಲದಕ್ಕಿಂತ ಮಿಗಿಲಾಗಿ ಮುದ್ದಿನ ಅಪ್ಪನಾಗಿ ಕಂಡ ವ್ಯಕ್ತಿತ್ವ ಕೌತುಕವೆನಿಸುತ್ತದೆ. ಬರಹಗಾರ್ತಿಯಲ್ಲದ ತಾರಿಣಿಯವರು ಈ ಕೃತಿಯ ರಚನಾಕಾರ್ಯದ ಹಿನ್ನೆಲೆಯನ್ನು ಮುನ್ನುಡಿಯಲ್ಲಿ ಈ ರೀತಿ ಹೇಳುತ್ತಾರೆ. "ನಾನು ಸಾಹಿತಿಯಲ್ಲ. ಬರಹಗಾರಳೂ ಅಲ್ಲ. ಬರಿಯ ಸಹೃದಯ ಓದುಗಳಾಗಿರುವೆ. ಈ ಪುಸ್ತಕವೇ ನನ್ನ ಜೀವಮಾನದ ಮೊದಲ ಪ್ರಕಟಿತ ಬರಹ. ಅಣ್ಣ ತೇಜಸ್ವಿಯ 'ಅಣ್ಣನ ನೆನಪು' - ಎಂಬ ಪುಸ್ತಕ ಹೊರಬಂದಾಗ, ನನಗೆ ಎಲ್ಲರೂ ತಂದೆಯವರ ನೆನಪು ಬರೆಯಲು ಒತ್ತಾಯಿಸಿದರು. ಎಂದೂ ಬರವಣಿಗೆ ಮಾಡಿಲ್ಲದ ನನಗೆ ಬರೆಯುವ ಮನಸ್ಥಿತಿ ಇರಲಿಲ್ಲ. ತಂದೆಯವರು ತೀರಿಕೊಂಡ ನಂತರ ಅನೇಕ ಸಲ ನಾನು ನನ್ನ ಪತಿ ಚಿದಾನಂದರೊಡನೆ ತಂದೆಯವರ ವಿಷಯವಾಗಿ ಅನೇಕ ವಿಚಾರಗಳನ್ನು ಸಂದರ್ಭಾನುಸಾರ ಹೇಳುತ್ತಿದ್ದೆ. ಅಂತಹ ಸಮಯದಲ್ಲಿ ಅವರು ಇದನ್ನೆಲ್ಲ ನೀನು ಬರೆದಿಡು ಎಂದು ಹೇಳುತ್ತಿದ್ದರು. ಆದರೂ ನಾನು ಉದಾಸೀನಳಾಗಿದ್ದೆ. ನಾನು ಬರೆಯ ಬಲ್ಲೆ ಎಂಬ ಯಾವ ಭರವಸೆಯೂ ನನಗೆ ಉಂಟಾಗುತ್ತಿರಲಿಲ್ಲ". ಹೀಗೆ ಹೇಳಿಕೊಳ್ಳುವ ತಾರಿಣಿಯವರು ಮುಂದೆ ಹಲವರ ಪ್ರೋತ್ಸಾಹ ಮತ್ತು ಪ್ರೀತಿಯ ಒತ್ತಾಯದಿಂದ ಬರೆಯಲು ಮನಸ್ಸು ಮಾಡಿ ತಾನು

ಏನು ಬರೆಯುತ್ತಿದ್ದೇನೆ ಎಂದು ಹೀಗೆ ಹೇಳುತ್ತಾರೆ. "ಮಗಳಾಗಿ ಅಪ್ಪ ಅಮ್ಮನೊಡನೆ ಹೇಗಿದ್ದೆ ಎಂದು ಬರೆದಿದ್ದೇನೆ".

ಹೀಗೆ ಯಾವುದೇ ಮುಚ್ಚು ಮರೆಯಿಲ್ಲದೆ ಮುಗ್ಧವಾಗಿ ತಾರಿಣಿಯವರು ಹೇಳಿಕೊಳ್ಳುತ್ತಾರೆ. 'ಕುವೆಂಪು ಅವರು ಸ್ವಯಂ ಬರಹಗಾರರು, ಇವರೇಕೆ ಮಕ್ಕಳಿಗೆ ಬರವಣಿಗೆಯ ಬಗ್ಗೆ ಏನೊಂದನ್ನು ಹೇಳಿಕೊಡಲಿಲ್ಲ?' ಎಂಬ ಸೋಜಿಗ ಸಹೃದಯರನ್ನು ಕಾಡುವುದುಂಟು ಅದಕ್ಕೆ ತೇಜಸ್ವಿಯವರ ಉತ್ತರ ಸ್ಪಷ್ಟ ಸಮಾಧಾನವನ್ನು ನೀಡುತ್ತದೆ. "ಅಣ್ಣ ನಮಗೆ ಕೊಟ್ಟ ಶಿಕ್ಷಣವೆಲ್ಲಾ ಹೇಗೆ ಬದುಕಬೇಕು ಎನ್ನುವುದರ ಬಗ್ಗೆಯೇ ಹೊರತು ಹೇಗೆ ಬರೆಯಬೇಕು ಎನ್ನುವುದರ ಬಗ್ಗೆ ಚಕಾರವೆತ್ತಿಲ್ಲ. ಬಹುಶಃ ಬರೆಯುವ ಪ್ರತಿಭೆ ಜನ್ಮಜಾತವಾಗಿ ಇರಬೇಕೆ ಹೊರತು ಅದು ಹೇಳಿಸಿಕೊಂಡು ಬರುವಂಥದಲ್ಲ ಎಂದು ಅಣ್ಣನ ನಂಬಿಕೆ ಇರಬೇಕು"[೧] ಹೌದು. ಯಾವುದೇ ಕೆಲಸ ಆಂತರಿಕ ಪ್ರೇರಣೆಯಿಂದ ಆದರೆ ಅದಕ್ಕೆ ಹೆಚ್ಚು ಬೆಲೆ ಮತ್ತು ಸತ್ತ್ವ ದೊರಕೊಳ್ಳುತ್ತದೆ. ಬಾಹ್ಯ ಪ್ರೇರಣೆಯಿಂದ ಕೆಲಸ ಸಾಗಬಹುದು. ಆದರೆ ನಿರೀಕ್ಷಿತ ಫಲ ದೊರಕದೆ ಹೋಗಬಹುದಲ್ಲವೆ?

ಪ್ರಸ್ತುತ ಕೃತಿಯು ತಾರಿಣಿಯವರ ನೆನಪುಗಳ ಸಮಗ್ರ ಮಿಶ್ರಣವಾದರೂ ಇದರಲ್ಲಿ ಕ್ರಮ ಬದ್ಧತೆಯ ಅಥವಾ ಕಾಲ ಮೇರೆಯ ಯಾವುದೇ ಅಸಹಜತೆಗಳು ನಡೆಯದೆ ಮೊದಲೇ ಯೋಚಿಸಿ ಬರೆದ ಕ್ರಮಬದ್ಧ ನೆನಪಿನ ದಾಖಲೆಯಂತಿದೆ. ಬಹುಶಃ ಅದು ತಾರಿಣಿಯವರ ಜನ್ಮಜಾತ ಪ್ರತಿಭೆಯೇ ಇರಬಹುದು. ಕೃತಿಯು ಹೊರಹಾಕುವ ವಿಸ್ಮಯಗಳು ಕುವೆಂಪು ವ್ಯಕ್ತಿತ್ವಕ್ಕೆ ಮೆರಗು ನೀಡುವಂತಹವು. ತಾರಿಣಿಯವರು ಅಪ್ಪ-ಅಮ್ಮ, ಮಕ್ಕಳ ಉದಯರವಿಯಲ್ಲಿನ ಬದುಕನ್ನು ಎಳೆ ಎಳೆಯಾಗಿ ಬಿಡಿಸಿ; ನೆನಪಿಸಿ ಹೇಳುವ ಕ್ರಮ ತುಂಬಾ ಚೆನ್ನಾಗಿದೆ. ಕೃತಿಯ ಯಾವ ಭಾಗವೂ ಅವಜ್ಞತೆಗೆ ಅವಕಾಶವನ್ನು ಕೊಟ್ಟಿಲ್ಲ. ಮನಸ್ಸಿಗೆ ಕಿರಿಕಿರಿಯನ್ನು ಮಾಡದೆ ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗುತ್ತದೆ. ಕುವೆಂಪು ಅವರ ಸಾಂಸಾರಿಕ ಜೀವನದ ಒಲವು, ದಾಂಪತ್ಯ ಪ್ರೀತಿ, ಗಂಡನಾಗಿ, ಅಪ್ಪನಾಗಿ, ಬಂಧುವಾಗಿ, ನೋವು ನಲಿವುಗಳಿಗೆ ನೀಡುವ ಸ್ಪಂದನ, ಪಡುವ ಕಳವಳ, ಸಹೃದಯನ ಮನೋಭೂಮಿಕೆಯಲ್ಲಿ ಹೊಸ ವಿಚಾರಗಳನ್ನು ಗುಣಾತ್ಮಕವಾಗಿ ಮಥಿಸುತ್ತದೆ.

ತಂದೆ-ತಾಯಿಯರ ಜೊತೆ ಬಹುಕಾಲ ಕಳೆದ ತಾರಿಣಿಯವರ ನೆನಪುಗಳು ಜೀವಂತವಾಗಿವೆ. ಅವರ ತಾಯಿ ಹೇಮಾವತಿಯವರು ಕಾಲವಾದ ಮೇಲೆ ಅಪ್ಪ ಕುವೆಂಪು

---

[೧] 'ಅಣ್ಣನ ನೆನಪು', ಪುಟ ೪೬.

ಅವರ ಜವಾಬ್ದಾರಿ ಪೂರ್ಣ ಮಗಳು ತಾರಿಣಿಯವರ ಮೇಲೆಯೇ ಬೀಳುತ್ತದೆ. ಅಪ್ಪನನ್ನು ಕೊನೆಯವರೆಗೂ ನೋಡಿಕೊಂಡು ಅವರ ಅಂತರ್ಮುಖತೆಯನ್ನು ಅರ್ಥ ಮಾಡಿಕೊಂಡು ಅವರೆಲ್ಲಾ ಬೇಕು ಬೇಡಗಳನ್ನು ಅಚ್ಚುಕಟ್ಟಾಗಿ ಕೊರೆಯಾಗದಂತೆ ನೋಡಿಕೊಂಡ ಪುಣ್ಯವಂತೆ ಮಗಳು. ಕನ್ನಡದ ಮೇರು ಧ್ವನಿಯನ್ನು ಗುರುವಿನಡಿಗೆ ಹೋಗುವವರೆಗೂ ಪ್ರೀತಿಯಿಂದ ಸಲಹಿದ ಪುಣ್ಯವಂತೆ ಮಗಳಿಗೆ ಕನ್ನಡದ ಸಮಸ್ತ ದನಿಗಳಿಂದ ತುಂಬು ಹೃದಯದ ಧನ್ಯವಾದಗಳಿರಲಿ. ಈ ಕೃತಿಯ ಹೂರಣವನ್ನು ಮೆಲ್ಲುತ್ತಾ ಹೋದಂತೆ ತಂದೆ ತಾಯಿ ಜೊತೆಗೆ ಮಗಳು ತಾರಿಣಿಯ ವ್ಯಕ್ತಿತ್ವದ ಹಿರಿಮೆ ಓದುಗನಲ್ಲಿ ಸುಪ್ತವಾಗಿ ಮೈದಳೆಯುತ್ತಾ ಹೋಗುತ್ತದೆ. ತೇಜಸ್ವಿ ಅವರು ತಂಗಿ ತಾರಿಣಿಯ ಬಗ್ಗೆ ಆಡಿದ ಮಾತುಗಳು ಅದಕ್ಕೆ ಸಾಕ್ಷಿ.

"ಅಣ್ಣನ ಮಕ್ಕಳಾದ ನಾವು ನಾಲ್ಕು ಜನರಲ್ಲಿ ಅತ್ಯಂತ ಕಿರಿಯವಳು ತಾರಿಣಿ. ಅಣ್ಣ 'ತಾರಿಣಿ; ತಂಟೆ ಕೋರಿಣಿ? ಎಂದು ಹಾಸ್ಯ ಮಾಡುತ್ತಿದ್ದುದು ನನಗೆ ಮಸುಕಾಗಿ ನೆನಪಿದೆ. ಆದರೆ ನನಗೆ ಆಗಲೇ ಮರೆತು ಹೋಗಿರುವ ನಮ್ಮ ದೈನಂದಿನ ಜೀವನದ ಅನೇಕ ಘಟನೆಗಳನ್ನು ತಾರಿಣಿ ಚೆನ್ನಾಗಿ ನೆನಪಿಟ್ಟುಕೊಂಡು ಈ ಕೃತಿಯಲ್ಲಿ ಸ್ಫುಟವಾಗಿ ಚಿತ್ರಿಸಿರುವುದು ಅಚ್ಚರಿಯ ಸಂಗತಿ. ಅಮ್ಮ ತೀರಿ ಹೋದ ಮೇಲೆ ತಾರಿಣಿ ಅಮೇರಿಕಾದಿಂದ ಬರುವವರೆಗೆ ರಾಜೇಶ್ವರಿ ಮೈಸೂರಿನಲ್ಲಿದ್ದಳು. ಅನಂತರ ಕೊನೆಗಾಲದವರೆಗೂ ಅಣ್ಣನನ್ನು ನೋಡಿಕೊಂಡವಳು ಮತ್ತು ಉದಯರವಿಯ ಎಲ್ಲ ಜವಾಬ್ದಾರಿಯನ್ನೂ ಹೆಗಲ ಮೇಲೆ ಹೊತ್ತು ನಿರ್ವಹಿಸಿದವಳು ತಾರಿಣಿಯೆ. ಅಣ್ಣ ಅಮ್ಮ ಇಲ್ಲದ ಉದಯರವಿಯನ್ನು ಹಾಳಾಗದಂತೆ ನೋಡಿಕೊಂಡವಳು, ಈಗಲೂ ನೋಡಿಕೊಳ್ಳುತ್ತಿರುವವಳು ತಾರಿಣಿ. ತಾರಿಣಿಯೂ ಚಿದಾನಂದರೂ ಅಲ್ಲಿರುವುದರಿಂದ ನನ್ನ ಮಟ್ಟಿಗೆ ಉದಯರವಿ ಎಂದಿನಂತೆಯೇ ಮುಂದುವರಿದಿದೆ ಎನ್ನಿಸುತ್ತದೆ. ಈ ಕೃತಿಯಲ್ಲಿ ಕುವೆಂಪುರವರ ಚಿತ್ರಣದ ಹಿನ್ನೆಲೆಯಲ್ಲಿ ಅವ್ಯಕ್ತವಾಗಿ ಓದುಗರಿಗೆ ತಾರಿಣಿಯ ವ್ಯಕ್ತಿತ್ವದ ಧೈರ್ಯ, ತ್ಯಾಗಶೀಲತೆ, ಜವಾಬ್ದಾರಿಗಳ ಅರಿವು ಗಮನಕ್ಕೆ ಬರುತ್ತದೆಂಬ ವಿಶ್ವಾಸ ನನ್ನದು."[೧]

ಕೃತಿಯ ಪೂರ್ಣಾನಂದವನ್ನುಂಡ ನಾನು ಅದರಲ್ಲಿ ಕಂಡ ಕುವೆಂಪು ವ್ಯಕ್ತಿತ್ವದ ಲಯಗಳನ್ನು ನನಗೆ ತೋಚಿದಂತೆ ಕೆಲವು ಉಪಶೀರ್ಷಿಕೆಗಳಲ್ಲಿ ಕಾಣಿಸಲು ಪ್ರಯತ್ನಿಸಿದ್ದೇನೆ.

ಕುವೆಂಪು ಅವರು ತಮ್ಮ ಮುದ್ದಿನ ಮಗಳು ತಾರಿಣಿಯವರಿಗೆ ಬರೆದ ಕವನದ ಮೂಲಕ ಪ್ರಬಂಧವನ್ನು ಪ್ರವೇಶಿಸೋಣವೆಂದು ನನ್ನ ಆಶಯ.

ಶ್ರೀ ತಾರಿಣಿಗೆ

---

೧ 'ಮಗಳು ಕಂಡ ಕುವೆಂಪು', ಕೃತಿಯ ಬೆನ್ನುಡಿ.

"ದೊಡ್ಡವರೆಲ್ಲರ ಹೃದಯುದಿ ಕಟ್ಟಿಹ
ತೊಟ್ಟಿಲ ಲೋಕದಲಿ
ನಿತ್ಯ ಕಿಶೋರತೆ ನಿದ್ರಿಸುತಿರುವುದು
ವಿಸ್ಮೃತನಾಕದಲಿ:
ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
ಆನಂದದ- ಆ ದಿವ್ಯ ಶಿಶು;
ಹಾಡಲಿ; ಕುಣಿಯಲಿ; ಹಾರಲಿ; ಏರಲಿ
ದಿವಿಜತ್ವಕೆ ಈ ಮನುಜ ಪಶು!"[೧]

[೧] ಮೇಘಪುರ ಕವನ ಸಂಕಲನದಿಂದ ಅರ್ಪಣೆ ಕವನ.

೧ – ಪ್ರಜಾಸತ್ತಾತ್ಮಕ ಅಪ್ಪ

ನಿಸರ್ಗ ಕವಿಯಾದ ಕುವೆಂಪು ಆಲೋಚನೆಗಳು ಸಮತೂಕದವು. ಯಾರಿಗೂ ಹಾನಿ ಮಾಡುವ ಕೆಲಸಗಳನ್ನು ಅವರು ಪ್ರೋತ್ಸಾಹಿಸುತ್ತಿರಲಿಲ್ಲ. ಅವರ ಮನಸ್ಸು ಸರ್ವೋದಯದ ಹಾದಿಯಲ್ಲಿ ನಡೆದು ಅಭ್ಯಾಸವಾಗಿತ್ತು. ಆ ದಾರಿಯಿಂದ ವಿಮುಖರಾಗುವ ಯಾವ ಹುನ್ನಾರಗಳಿಗೂ ಅವರು ಸೊಪ್ಪು ಹಾಕಿದವರಲ್ಲ. ಅಂತಹ ಮಾತುಗಳಿಗೆ, ಅವರ ಮನಸ್ಸು ಬಧಿರವಾಗುತ್ತಿತ್ತು. ಸಾಮಾಜಿಕ ಬದುಕಿನಲ್ಲಿ ಕಳಕಳಿಯನ್ನುಳ್ಳ ಅವರು ತಮ್ಮ ಉದ್ಧಾರ ಸಮುದಾಯದ ಏಳಿಗೆಯಲ್ಲಿದೆ ಎಂದು ನಂಬಿದ್ದರು. ಅದಕ್ಕಾಗಿ 'ಕರ್ನಾಟಕ ಹೃದಯ ಶಿವನಲ್ಲಿ ಡಿಂಡಿಮವ' ಬಾರಿಸಲು ಮೊರೆಯಿಡುತ್ತಾರೆ.

"ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ!
ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವರನು ಕೂಡಿಸಿ ಒಲಿಸು.
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!
ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ!
ಕ್ಷಯಿಸೆ ಶಿವೇತರ ಕೃತಿ ಕೃತಿಯಲಿ
ಮೂಡಲಿ ಮಂಗಳ ಮತಿಮತಿಯಲ್ಲಿ;
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ!
ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯವ ಶಿವ!"[೧]

ಸಾಮಾಜಿಕ ಜೀವನದ ಬಗ್ಗೆ ಇಷ್ಟು ಮಮಕಾರವಿದ್ದ ಕುವೆಂಪು, ಕೌಟುಂಬಿಕ ಜೀವನದಲ್ಲಿ ಅಷ್ಟೇ ಕಳಕಳಿಯನ್ನು ಹೊಂದಿದ್ದರು. ತಮ್ಮ ತತ್ತ್ವ ಸಿದ್ಧಾಂತಗಳನ್ನು ಮನೆಯಲ್ಲಿಯೂ ಆಚರಿಸುತ್ತಿದ್ದರು. ಅದಕ್ಕೆ ಸಡಿಲಕೆ ಎಂಬುದಿರಲಿಲ್ಲ. ತತ್ತ್ವ ಬದ್ಧ ಜೀವನ ಮಾನಸಿಕ ಆರೋಗ್ಯವನ್ನು ಕಾಪಾಡುತ್ತದೆ. ಎಂಬುದು ಅವರ ನಂಬುಗೆಯಾಗಿತ್ತು. ಅದರಂತೆ

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೪೧೭.

ನಡೆಯುತ್ತಿದ್ದರು. ಆದರೆ ಮನೆಯವರನ್ನು ಬಲಾತ್ಕಾರ ಪಡಿಸುತ್ತಿರಲಿಲ್ಲ. ಅಚ್ಚರಿ ಎಂದರೆ, ಅವರ ತತ್ತ್ವ ಸಿದ್ಧಾಂತಗಳಿಗೆ ಮನೆಯವರೇ ಮಾರು ಹೋಗುತ್ತಿದ್ದರು. ಅವರಂತೆಯೇ ನಡೆಯಲು ಪ್ರಯತ್ನಿಸುತ್ತಿದ್ದರು. ಇದು ಕುವೆಂಪು ಅವರ ವ್ಯಕ್ತಿತ್ವದ ಜಾದೂ ಎಂದೇ ಹೇಳಬೇಕು. ಕವಿ ಕುವೆಂಪು ಬದುಕಿದ್ದೆ ಪ್ರಜಾಸತ್ತಾತ್ಮಕ ದೋರಣೆಯಲ್ಲಿ. ಅವರ ಪ್ರಜಾಸತ್ತಾತ್ಮಕ ನೀತಿಯ ಹಲವು ಉದಾಹರಣೆಗಳನ್ನು ನೋಡಬಹುದು. ತಾರಿಣಿಯವರೇ ಹೇಳುವಂತೆ–"ಮಕ್ಕಳಿಗೆಲ್ಲಾ ಅಪ್ಪ ಅಮ್ಮನ ಪ್ರೀತಿ ವಿಶ್ವಾಸಗಳು ಹೆಚ್ಚಾಗಿಯೇ ಇತ್ತು. ಎಲ್ಲರನ್ನೂ ಒಂದೇ ಸಮದೃಷ್ಟಿಯಲ್ಲಿ ನೋಡುತ್ತಿದ್ದರು. ಒಬ್ಬರಿಗೆ ಹೆಚ್ಚು ಇನ್ನೊಬ್ಬರಿಗೆ ಕಡಿಮೆ ಪ್ರೀತಿ ತೋರಿದ್ದಾರೆ. ಎಂದು ಯಾವಾಗಲೂ ನನಗೆ ಅನ್ನಿಸಲಿಲ್ಲ. ತಂದೆಯವರು ಮಕ್ಕಳಿಗೆ ಹೊಡೆದದ್ದು ನಾನು ನೋಡಿಲ್ಲ. ಅಮ್ಮನ ಹತ್ತಿರ ಬೇಕಾದಷ್ಟು ಸಲ ಏಟು ತಿಂದಿರುವೆ. ಆದರೆ ಅಪ್ಪ ಯಾವತ್ತೂ ಹೊಡೆದಿಲ್ಲ".[೧]

ಕುವೆಂಪು ಅವರು ಮಕ್ಕಳಿಗೆ ಹೊಡೆದರೆ ಮೊಂಡು ಬೀಳುತ್ತಾರೆ ಎಂಬ ಸೂಕ್ಷ್ಮವನ್ನು ಅರಿತಿದ್ದರು. ಮಕ್ಕಳನ್ನು ಏನಿದ್ದರೂ ನಯವಾದ ಮಾತುಗಳಿಂದ ತಿದ್ದಬೇಕು. ಹೊಡೆಯುವುದು ಸಾಧು ಮಾರ್ಗವಲ್ಲ ಎಂದು ಅರಿತುಕೊಂಡಿದ್ದರು. ಅದಕ್ಕಾಗಿ ಮಕ್ಕಳಿಗೆ ಬುದ್ಧಿಯನ್ನು ಹಲವು ನೀತಿ ಕಥೆಗಳ ಮೂಲಕ ಬಾಲ ಮನಸ್ಸಿಗೆ ನಾಟುವಂತೆ ಹೇಳುತ್ತಿದ್ದರು. ಈ ವಾತಾವರಣದಲ್ಲಿ ಬೆಳೆದ ಮಕ್ಕಳು ತಮ್ಮ ಮಕ್ಕಳನ್ನು ಕೂಡ ತಾತ ಕುವೆಂಪುವಿನ ಬಳಿಯಲ್ಲಿ ಬೆಳೆಯಲು ಬಿಡುತ್ತಿದ್ದರು. ತಾರಿಣಿಯವರ ನೆನಪಿನಂತೆ, ಅಪ್ಪನ ರೀತಿ ಹೀಗಿರುತ್ತಿತ್ತು. "ತಂದೆಯವರು ಯಾವಾಗಲೂ ನಮಗೆ ಹೀಗೆ ಮಾಡಿ ಇದು ಸರಿಯಾದದ್ದು, ತಪ್ಪೇನೂ ಇಲ್ಲ ಎಂದು ಹೇಳುತ್ತಿದ್ದರು. ಆದರೆ ಹೀಗೆಯೇ ಮಾಡಬೇಕೆಂಬ ಒತ್ತಾಯ ತರುತ್ತಿರಲಿಲ್ಲ. ಮುಂದಿನ ನಿರ್ಧಾರ ನಿಮ್ಮದು. ಚೆನ್ನಾಗಿ ಯೋಚಿಸಿ ನಿರ್ಧರಿಸಿ ಎಂದು ನಮಗೆ ಬಿಡುತ್ತಿದ್ದರು."[೨]

ಕುವೆಂಪು ಅವರು, ಮಕ್ಕಳು ದೊಡ್ಡವರಾದ ಮೇಲೆ ನಡೆದುಕೊಳ್ಳುತ್ತಿದ್ದ ರೀತಿ ಇನ್ನು ವಿಸ್ಮಯ. ಅವರು ತಮ್ಮ ಧೋರಣೆಗಳನ್ನು ಅವರ ಮೇಲೆ ಹೇರುತ್ತಿರಲಿಲ್ಲ. ಅವರಿಗೆ ಸಂಪೂರ್ಣ ಅಭಿವ್ಯಕ್ತಿ ಸ್ವಾತಂತ್ರವನ್ನು ತಮ್ಮ ಸಾನ್ನಿಧ್ಯದಲ್ಲಿಯೇ ದೊರೆಕಿಸಿಕೊಟ್ಟು ಮುಕ್ತ ಪ್ರಜಾಸತ್ತಾತ್ಮಕವಾದಿಯಾಗಿದ್ದರು. ಒಮ್ಮೆ ತಾರಿಣಿಯವರು ಓದುವಾಗ ಸ್ಕಾಲರ್‌ಶಿಪ್ ಹಣ ಬಂದಾಗಿನ ಸಂದರ್ಭದ ಕುವೆಂಪು ವರ್ತನೆ ಸ್ವಾರಸ್ಯಕರವಾದ. ಪ್ರಜಾಸತ್ತಾತ್ಮಕ ಧೋರಣೆಯದಾಗಿದೆ.

---

[೧] 'ಮಗಳು ಕಂಡ ಕುವೆಂಪು', ಪುಟ ೧೨.
[೨] 'ಮಗಳು ಕಂಡ ಕುವೆಂಪು', ಪುಟ ೨೪.

"ನಾನು ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಮಾಡುವಾಗ ಮೊದಲ ವರ್ಷದ ಪದವಿ ಮುಗಿದಾಗ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದಕ್ಕಾಗಿ ಸಬ್‌ಜೆಕ್ಟ್ ಸ್ಕಾಲರ್ ಶಿಪ್ ಬಂದಿತ್ತು. ಸ್ಕಾಲರ್ ಶಿಪ್ ಪಡೆದ್ದರಿಂದ ಅದರ ಜೊತೆ ಮೊದಲ ವರ್ಷ ಕಟ್ಟಿದ್ದ ಫೀಸ್ ಹಣ ಪೂರ್ಣ ಹಿಂದಕ್ಕೆ ಕೊಟ್ಟರು. ಎಲ್ಲ ಹಣ ತಂದು ತಂದೆಯವರ ಕೈಯಲ್ಲಿಟ್ಟೆ. ಅವರೇ ಫೀಸ್‌ಗೆ ಹಣ ಕೊಟ್ಟಿದ್ದಲ್ಲವೇ ಅದು ಅವರಿಗೆ ಸೇರಬೇಕು ಎಂದು. ತಂದೆಯವರು 'ಏತಕ್ಕೆ ಈ ಹಣ' ಎಂದು ಕೇಳಿದರು. ನನಗೆ ಸ್ಕಾಲರ್ ಶಿಪ್ ಬಂದಿದೆ ಜೊತೆಗೆ ನೀವು ಫೀಸ್ ಕಟ್ಟಲು ಕೊಟ್ಟ ಹಣವೂ ವಾಪಸ್ಸು ಬಂತು ಎಂದು ಹೇಳಿದೆ. ಅವರು ಸಂತೋಷದಿಂದ 'ಎಲ್ಲ ಹಣ ನೀನೇ ಇಟ್ಟುಕೋ ನಿನ್ನ ಪರಿಶ್ರಮಕ್ಕೆ ಸಂದ ಪುರಸ್ಕಾರ ಇದು' ಎಂದು ಹೇಳಿ ಎಲ್ಲವನ್ನೂ ನನಗೇ ಕೊಟ್ಟರು. ಅವರು ನಾವು ಓದುವ ಮತ್ತು ಮಾಡುವ ಕೆಲಸಗಳ ಬಗ್ಗೆ ಉತ್ತೇಜಿಸುತ್ತಿದ್ದರೇ ಹೊರತು, ಅವರ ನಿರೀಕ್ಷೆಯನ್ನಾಗಲೀ, ಇಚ್ಛೆಯನ್ನಾಗಲೀ, ಪೂರೈಸಬೇಕೆಂದು ನಮ್ಮ ಮೇಲೆ ಒತ್ತಡ ತರುತ್ತಿರಲಿಲ್ಲ. ನಮಗೆ ಎಲ್ಲ ರೀತಿಯ ಸ್ವಾತಂತ್ರ್ಯ ಕೊಟ್ಟಿದ್ದರು. ನಮ್ಮ ಜೀವನದ ಸರಿಯಾದ, ಉತ್ತಮ ಮಾರ್ಗದಲ್ಲಿ ಹೋಗುವಂತೆ ಸಹಾಯ, ಸಹಕಾರ ನೀಡುತ್ತಿದ್ದರು".[೧]

ಕುವೆಂಪು ಮಕ್ಕಳ ಮದುವೆಯ ವಿಷಯದಲ್ಲೂ ತಾವು ಅಧಿಕಾರವನ್ನು ಬಯಸಲಿಲ್ಲ. ಬದುಕಿ ಬಾಳಬೇಕಾದವರು ಅವರೇ ಅವರ ಜೀವನದ ಸಂಗಾತಿಯನ್ನು ಆರಿಸಿಕೊಳ್ಳಲಿ ಎಂಬ ವಿಶಾಲ ಮನಸ್ಕರಾಗಿದ್ದರು. ಈ ಧೋರಣೆಯು ಹೆಣ್ಣು ಮಕ್ಕಳ ವಿಷಯಕ್ಕೇನೂ ಹೊರತಾಗಿರಲಿಲ್ಲ. ಅವರಿಗೂ ಎಲ್ಲ ವಿಚಾರದಲ್ಲಿಯೂ ಸ್ವಾತಂತ್ರ್ಯವನ್ನು ಕೊಟ್ಟಂತೆ ಅವರ ವಿವಾಹದ ವಿಚಾರದಲ್ಲಿಯೂ ಕೊಟ್ಟಿದ್ದರು. ಅವರ ಕ್ಷೇಮಕ್ಕಾಗಿ ಶ್ರೀಮಾತೆಯನ್ನು ಪ್ರಾರ್ಥಿಸುತ್ತಿದ್ದರು. 'ಮಗಳಿಗೆ ಹರಕೆ' ಎಂಬ ಕವನದಲ್ಲಿ ಅವರ ಪ್ರಾರ್ಥನೆ ಎಷ್ಟು ಪ್ರಜಾಸತ್ತಾತ್ಮಕವಾಗಿದೆ ಎಂದು ತಿಳಿಯುತ್ತದೆ.

"ನಿನ್ನಮ್ಮನನು ನಾನು ಎಂತು ಒಲಿದೆನೊ ಅಂತೆ
ನಿನ್ನ ನೊಲಿಯುವ ಇನಿಯ ನಿನಗೂ ದೊರೆಯುವಂತೆ
ಹರಕೆ ಗೈಯಲಿ ನಿನಗೆ ಶ್ರೀ ಜಗನ್ಮಾತೆಃ
ನಿನ್ನ ತನವನು ನೀನು ಅವನಿಗರ್ಪಿಸುವೋಲೆ
ತನ್ನ ತನವನು ಅವನು ನಿನಗರ್ಪಿಸಲಿ, ಬಾಲೆ.
ನಿನ್ನನರ್ಪಿಸಿ ನೀನು ಆಗು ಸೊನ್ನೆ;
ತನ್ನನರ್ಪಿಸಿ ಅಕ್ಕೆ ಅವನು ಸೊನ್ನೆ:

[೧] 'ಮಗಳು ಕಂಡ ಕುವೆಂಪು', ಪುಟ ೩೦.

ಪಕ್ಕ ಪಕ್ಕದಿ ಬರೆಯೆ,
ಸೊನ್ನೆ ಎರಡೂ ನೆರೆಯೆ
ಮೂಡುವುದು ತಾನಲ್ತೆ ಅನಂತ್ಯೆ ಚಿಹ್ನೆ?
ದಾಂಪತ್ಯ ಜೀವನದಿ ನೀನಾಗು ಧನ್ಯೆ!"[೧]

ತನ್ನನ್ನು ತಾನೇ ಮೀರಿ ಉದಾರವಾದಿಯಾಗಿದ್ದ ಕುವೆಂಪು, ವಿಶ್ವದೃಷ್ಟಿಯನ್ನು ತಮ್ಮದಾಗಿಸಿಕೊಂಡಿದ್ದರು. ತಮ್ಮ ಮಕ್ಕಳ ಮದುವೆಯ ವಿಷಯದಲ್ಲಿ ಯಾವುದೇ ಆಕ್ಷೇಪಣೆಯನ್ನು ಮಾಡಿರಲಿಲ್ಲ. ಆದರೆ ಹಲವು ಜನ ಕುವೆಂಪು ಅವರು ಅವರ ಮಕ್ಕಳ ಮದುವೆಯನ್ನು ವಿರೋಧಿಸಿದ್ದರು ಎಂಬ ವದಂತಿಯನ್ನೇ ನಂಬಿಕೊಂಡಿರುವುದು ವಿಷಾದಕರ.

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೩೮೬.

೨ – ಸಂಸಾರಿಯಾಗಿ ಕುವೆಂಪು

ಜಗತ್ತಿನ ಮಹಾವ್ಯಕ್ತಿಗಳ ಬದುಕು ಲೋಕ ಕಲ್ಯಾಣಕ್ಕಾಗಿ ಮುಡಿಪಾಗಿರುತ್ತದೆ. ಲೋಕ ಜೀವನದ ಎಲ್ಲಾ ದಂಘುಗಗಳನ್ನು ಎದುರಿಸುವ ಇವರು ತಮ್ಮ ಕೌಟುಂಬಿಕ ನೆಲೆಯನ್ನು ಅಧ್ವಾನದ ಮಟ್ಟದಲ್ಲಿಯೇ ಬಿಟ್ಟಿರುತ್ತಾರೆ. ಈ ರೀತಿಯ ಅಸಮತೆಯೇಕೆಂಬುದೇ ಅಚ್ಚರಿಯ ಸಂಗತಿ. ಈ ಎಲ್ಲಾ ವಿಚಾರಗಳಿಗೆ ಅಪವಾದವಾಗಿ ನಮಗೆ ಗೋಚರಿಸುವ ಶ್ರೀ ವ್ಯಕ್ತಿತ್ವ ಕುವೆಂಪು ಅವರದು. ಅವರು ಸಾಮಾಜಿಕ ಜವಾಬ್ದಾರಿ ಮತ್ತು ಕೌಟುಂಬಿಕ ಜವಾಬ್ದಾರಿ ಎರಡನ್ನೂ ನಿಷ್ಠೆಯಿಂದ ನಿರ್ವಹಿಸಿದವರು; ಯಾವೊಂದು ಕಾರಣಕ್ಕೂ ಜವಾಬ್ದಾರಿಯಿಂದ ವಿಮುಕ್ತರಾದವರಲ್ಲ. ಬದಲಿಗೆ ಇತರರ ಹೊಣೆಗಾರಿಕೆಗಳನ್ನೂ ಎಚ್ಚರಿಸುತ್ತಿದ್ದರು. ಪ್ರಕೃತಿ ವಿರೋಧ ಸಂಸ್ಕೃತಿಯ ಆಚರಣೆಯನ್ನು ಖಂಡಾತುಂಡಾವಾಗಿ ಬಹಿಷ್ಕರಿಸುತ್ತಿದ್ದರು. ತಮ್ಮ ಸಾಂಸಾರಿಕ ಜೀವನದಲ್ಲಿ ತಮ್ಮಪಾತ್ರ ಅನನ್ಯ ಎಂದು ನಂಬಿದ್ದರು. ಅದು ಪ್ರಕೃತಿ ನಿಷ್ಠ ಮನಸ್ಸು. ಸಂಸಾರದ ಬಗ್ಗೆ ಅವರಿಗಿದ್ದ ಒಲವನ್ನು ಈ ಕವನದಲ್ಲಿ ನಾವು ಗುರುತಿಸಬಹುದು.

ಶ್ರೀ ಪಾದ ಪೂಜೆ

"ಶ್ರೀ ಮಾತೆಯ ಪಾದದಲಿ
ಮಕ್ಕಳು ನಾಲ್ವರು ನಾಲ್ವೆರಳು;
ಸಹದರ್ಮಿಣಿ ಸತಿ ಹೆಬ್ಬೆರಳು!

ಶ್ರೀ ಗುರುವಾಶೀರ್ವಾದದಲಿ
ಕವಿಗೀ ಸಂಸಾರವೆ ಪೂಜೆ;
ಪೂಜೆಯೆ ಸಂಸಾರದ ಓಜೆ!

ಸಂಸಾರದ ಸೇವೆ
ಶ್ರೀಪಾದದ ಪೂಜೆ;
ಶ್ರೀಪಾದದ ಪೂಜೆ
ಸಂಸಾರದ ಸೇವೆ!"[೧]

ಸಂಸಾರವನ್ನು ಶ್ರೀಪಾದದ ಪೂಜೆ ಎಂದು ವಿಶ್ವಾಸವನ್ನಿಟ್ಟಿದ್ದ ಕುವೆಂಪು ಅವರು, ತಮ್ಮ ಯೌವನ ಕಾಲದಲ್ಲಿ ನೇರವಾಗಿ ಸಂಸಾರಕ್ಕೆ-ಪಾದಾರ್ಪಣೆ ಮಾಡಿದವರಲ್ಲ ಎಂಬುದು ಅಚ್ಚರಿಯ ವಿಷಯ. ಅವರು ರಾಮಕೃಷ್ಣಾಶ್ರಮದ ಸಂಸರ್ಗದಲ್ಲಿದ್ದುದ್ದರಿಂದ ಬ್ರಹ್ಮಚಾರಿ ಜೀವನವನ್ನು

---

[೧] ಕುವೆಂಪು ಸಮಗ್ರ ಕಾವ್ಯ, ಸಂ.೨, ಪುಟ ೨೯.

ಪಾಲಿಸಬೇಕೆಂದು ಮನಸ್ಸು ಮಾಡಿದ್ದರು. ಅಂದರೆ ಸಂಸಾರವೆಂಬುದು ದುರ್ಭರ ಎಂಬ ಭಾವನೆಯಿಂದ ಎಂಬುದು ಸತ್ಯಕ್ಕೆ ದೂರವಾದ ಮಾತು. ವಿಶ್ವ ಜೀವನದ ಸಾಮರಸ್ಯವನ್ನು ಬೆಸೆಯಲು ಸಂಸಾರ ತೊಡಕಾಗಬಹುದೇನೋ ಎಂಬ ಸಂದೇಹದಿಂದ ಎರಡು ವಲಯದ ಹೊಣೆಗಾರಿಕೆ ಕಷ್ಟವೇನೋ ಎಂದು ತಿಳಿದಿದ್ದರು ಎಂದು ಕಾಣುತ್ತದೆ. ಆದರೆ ಕೆಲವು ದಿನಗಳುರುಳಿದ, ಮೇಲೆ ಸಂಸಾರ ಸೇವೆಯಲ್ಲಿದ್ದೆ ಸಮುದಾಯ ಸೇವೆ ಮಾಡಬಹುದು ಎಂಬ ಅದರ ಜೊತೆಗೆ ಸನ್ಯಾಸಿ ಜೀವನ ಸುಲಭದ ಮಾತಲ್ಲವೆಂಬ ತಿಳಿವಳಿಕೆ ಬಂತೆಂದು ತೋರುತ್ತದೆ. ಸನ್ಯಾಸಿ ಜೀವನದ ಬಗೆಗೆ ಪ್ರಾಮಾಣಿಕವಾಗಿ ಅವರು ತಾಳಿದ ನಿಲುವು ಈ ಕವನದಿಂದ ನಮಗೆ ತಿಳಿಯುತ್ತದೆ.

ಸಂನ್ಯಾಸ

"ಕೊರಸಿಯ ಮೇಲೆ ನೀ ನಡೆಯಬಲ್ಲೆಯ ಹೇಳು?
ಬೆಂಕಿಯಲಿ ಬೀಳ್ವ ಬಲವಿರುವುದೇನು?
ನಿನ್ನ ಕಣ್ಣನು ನೀನೆ ಕೀಳಬಲ್ಲೊಡೆ ಹೇಳು?
ನಿನ್ನೆದೆಯ ನೀನಿರಿಯ ಬಲ್ಲೆಯೇನು?
ಆ ಧೈರ್ಯ ನಿನಗಿರಲು ಸನ್ಯಾಸಿಯಾಗು, ನಡೆ;
ನಿನ್ನ ಕೈವಶವಾಗದಿರದು ಮುಕ್ತಿ!
ಕಾವಿಯೆಂಬುದು ಬರಿಯ ಬಟ್ಟೆಯಲ್ಲದ್ದು ಬೆಂಕಿ!
ಸನ್ಯಾಸ ಸಾಧನೆಯು ಲೀಲೆಯಲ್ಲ!

ದಡದಲ್ಲಿ ನಿಂತು ನೀನುರಿಯುವುದಕ್ಕಿಂತ
ಕಡಲಲಿ ಮುಳುಗಿ ತೇಲಾಡುವುದೆ ಮೇಲು
ಬರಿದೆ ಪಶ್ಚಾತ್ತಾಪ ಪಡದಿರಾಮೇಲೆ
ಬೇಯುವುದಕ್ಕಿಂತ ನೀ ಸಾಯುವುದೆ ಲೇಸು!"[೧]

ಈ ರೀತಿಯಾಗಿ ಸನ್ಯಾಸದ ಹಿರಿಮೆ ಗರಿಮೆಗಳನ್ನು, ಅದನ್ನು ಪಾಲಿಸಲು ಇರಬೇಕಾದ ಧೈರ್ಯ, ಮಾನಸಿಕ ಅಚಂಚಲತೆಯನ್ನು ಈ ಕವನದಲ್ಲಿ ಮನಸಾರೆ ವ್ಯಕ್ತಪಡಿಸುತ್ತಾರೆ, ಕುವೆಂಪು ಸನ್ಯಾಸಿಯಾಗುವ ಸಂಕಲ್ಪವನ್ನು ಬಿಟ್ಟು ಸಾಂಸಾರಿಕ ಜೀವನಕ್ಕೆ ಅಣಿಯಾಗುವ ಮುನ್ನ ಶ್ರೀಗುರುವಿನಲ್ಲಿ ಸಾಂಸಾರಿಕ ಜೀವನದ ಪ್ರವೇಶಕ್ಕೆ ಅನುಮತಿ ಕೇಳುವ ಒಂದು ಕವನವು ಈ ಅಧ್ಯಾಯಕ್ಕೆ ಪ್ರಸ್ತುತವೆನಿಸುತ್ತದೆ.

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೫೫೨.

ರಸವೊಂದೆ ಕವಿಗೆ ನೀತಿ

"ಸೋತೆನ್; ಎನ್ನಿಂದಾಗದಿನ್ ಮೇಲೆ; ಗುರುದೇವ,
ಮನ್ನಿಸೆನ್ನನ್ ಹಿಂದೆ ಹೇಳ್ದನಲ್ಲವೆ ಯೇಸು;
"ಕುದಿಯುವುದಕಿಂತಲೂ ಮದುವೆಯಪ್ಪುದೆ ಲೇಸು"
ಸಂಯಮದ ಹೆಮ್ಮೆಯಾ ಸಗ್ಗದಾಸೆಗೆ ನೋವ
ನರಕದಿ ತಪಂಗೈದೆನಿದುವರೆಗದುವೆ ಸಾಕು.
ಎನ್ನಹಂಕೃತಿ ಬೆಳೆಗೆ ಹರರ ಮೆಚ್ಚುಗೆ ಬೇಲಿ,
ನಿಂದೆಯೆಂಬುದೆ ಪಹರೆ. ಅಯ್ಯೋ, ಸೆರೆಯನೆ ಹೋಲಿ
ಬಾಳ್ದ ಬದುಕಿದು ಸಾಕು. ಇನ್ನು ಬಿಡುಗಡೆ ಬೇಕು,
ಬಿಡುಗಡೆಯು ಬೇಕೆಂಬ ಮೋಕ್ಷ ಬಂದನದಿಂದೆ!
ಹೊನ್ನಾದರೇನು? ಕಬ್ಬಿಣವಾದರೇನು? ಮಿಣಿ
ಎಂದಿಗೂ ಬಂಧನವೇ! ನೀತಿಫಣಿ ಗರುಡಮಣಿ
ತಾನಲ್ತೆ ಕವಿಯ ರಸಹೃದಯ? ಕೇಳ್-ರಸವೊಂದೆ
ನಿಯತಿಕೃತ ನಿಯಮ ರಹಿತನ್ ಕವಿಯೆನೆಗೆ ನೀತಿ:
ಹ್ಲಾದವೆ ಪರಮ ಧರ್ಮವುಳಿದೆದೆಲ್ಲಂ ಭೀತಿ!"[೧]

ಹೀಗೆ ಬಲವಾದ ವಿವೇಚನೆಯಲ್ಲಿ ತೊಡಗಿ ಸಂಸಾರ ಸಾಗರದಲ್ಲಿ ಮಿಂದು ತೇಲಲು ಹೇಮಾವತಿ ಎಂಬುವವರನ್ನು ವಿವಾಹವಾಗುತ್ತಾರೆ. ಹೇಮಾವತಿಯವರು ಕುವೆಂಪುರವರ ವ್ಯಕ್ತಿತ್ವ ರೂಪಣದಲ್ಲಿ ಅನನ್ಯ ಪಾತ್ರವನ್ನು ವಹಿಸಿದ್ದಾರೆ. ಪರಸ್ಪರರು ಜೋಡಿ ಎತ್ತಿನ ರೀತಿ ಸಂಸಾರದ ಬಂಡಿಯನು ಸಮ ವೇಗದಲ್ಲಿ ಎಳೆದಿದ್ದಾರೆ. ಕವಿ ಕುವೆಂಪು ತಮ್ಮ ಸಾಂಸಾರಿಕ ಜೀವನದ ನಾನಾ ಪಾತ್ರಗಳಾದ ಗಂಡ, ಅಪ್ಪ, ಬಂಧು, ಸ್ನೇಹಿತರಾಗಿ ಅಚ್ಚುಕಟ್ಟಾದ ಕಾರ್ಯನಿರ್ವಹಣೆ ಮಾಡಿದ್ದಾರೆ. ತಮ್ಮ ಹೊಣೆಯನ್ನು ಒಲವಿನಾಣತಿ ಎಂದು ಹೊತ್ತಿದ್ದಾರೆ. ಅವರು ಕೂಡ ಶ್ರೀ ಸಾಮಾನ್ಯನಂತೆ ಸೀಮೆಎಣ್ಣೆಗೆ ಕ್ಯೂ ನಿಂತಿದ್ದಾರೆ, ಅಕ್ಕಿ ಬೇಳೆಗೆ ಕ್ಯೂ ನಿಂತಿದ್ದಾರೆ, ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿದ್ದಾರೆ, ಹೆಂಡತಿಗೆ ಅಡುಗೆಯಲ್ಲಿ ಸಹಾಯ ಮಾಡಿದ್ದಾರೆ. ಬಿಡುವಾದಾಗ ಹೆಂಡತಿ ಮಕ್ಕಳೊಡನೆ ವಿಹಾರಕ್ಕೆ ಹೋಗಿದ್ದಾರೆ. ಒಬ್ಬ ಪ್ರಾಮಾಣಿಕ ಸಂಸಾರಿ ಏನೆಲ್ಲಾ ಜವಾಬ್ದಾರಿಯನ್ನು ನಿರ್ವಹಿಸಬಹುದೋ ಅದನ್ನೆಲ್ಲಾ ಅಚ್ಚುಕಟ್ಟಾಗಿ ಮಾಡಿದ್ದಾರೆ. ಅವರ ಸಾಂಸಾರಿಕ ಜೀವನದ ಹಲವು ರಸ ನಿಮಿಷಗಳಲ್ಲಿ

[೧] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೪೫೦.

‘ಬೆಳದಿಂಗಳ ಊಟ’ವೂ ಒಂದು. ಹೆಂಡತಿ ಮಕ್ಕಳೊಡನೆ ಅವರು ಚಂದಮಾಮನ ಬೆಳಕಿನಲ್ಲಿ ಊಟ ಮಾಡಿದ ಸಂದರ್ಭವನ್ನು ತಾರಿಣಿಯವರು ಈ ರೀತಿ ನೆನಪು ಮಾಡುತ್ತಾರೆ.

“ಚಿಕ್ಕವರಿರುವಾಗ ನಮಗೆ ಸಂತಸದ ವಿಚಾರವೆಂದರೆ ಕೈತುತ್ತು ಊಟ ಮಾಡುತ್ತಿದ್ದುದು. ಅಮ್ಮ ಈ ದಿನ ಕೈತುತ್ತು ಊಟ ಹಾಕುವೆ ಎಂದರೆ ನಮಗೆಲ್ಲಾಖುಷಿ. ಸಧ್ಯ ಊಟದ ಬಟ್ಟಲು ತೊಳೆಯುವ, ಅನ್ನ ಕಲೆಸುವ, ತೊಂದರೆ ತಪ್ಪಿತಲ್ಲಾ ಎಂಬ ಸುಖ. ಅಮ್ಮ ಸಾರನ್ನ, ಮೊಸರನ್ನ ಕಲೆಸಿ, ಕೈಗೆ ಉಂಡೆ ಮಾಡಿ ತುತ್ತುಕೊಡುತ್ತಿದ್ದರು. ಎಲ್ಲರೂ ತಿನ್ನುತ್ತಿದ್ದೆವು. ಕೆಲವು ಸಮಯ ತಾರಸಿಯ ಮೇಲೆ ಬೆಳದಿಂಗಳಲ್ಲಿ ಕೈ ತುತ್ತು ಊಟ ತುಂಬ ಮಜ ಕೊಡುತ್ತಿತ್ತು. ಇದರಲ್ಲಿ ಅಪ್ಪನವರೂ ಭಾಗಿಯಾಗುತ್ತಿದ್ದರೂ ಕಲಸನ್ನ ತಿನ್ನೋಣ ಬನ್ನಿ ಎನ್ನುತ್ತಿದ್ದರು”.[೧] ಹೀಗೆ ಹೆಂಡತಿ ಮಕ್ಕಳೊಡನೆ ಎಲ್ಲಾ ರೀತಿಯ ಸವಿ ತುತ್ತನ್ನು ಸಂತೋಷದಿಂದ ಸೇವಿಸುತ್ತಿದ್ದರು.

ಕುವೆಂಪು ಅವರು ಮಕ್ಕಳ ಮೇಲೆ ತುಂಬ ಕಾಳಜಿ ಇಟ್ಟಿದ್ದರು. ಒಂದು ದಿನ ತಾರಿಣಿಯವರು ಕಾಲೇಜಿನ ಯಾವುದೋ ಕಾರ್ಯಕ್ರಮದ ಕಾರಣವಾಗಿ ಮನೆಗೆ ಮಾಮೂಲಿ ಸಮಯವಾಗಿದ್ದರೂ ಬಂದಿರಲಿಲ್ಲ. ಅದಕ್ಕೆ ಕಾಲೇಜಿಗೆ ಹುಡುಕಿಕೊಂಡು ಹೋಗಿ ಕಾರಿನಲ್ಲಿ ವಾಪಸ್ಸು ಕರೆದುಕೊಂಡು ಬರುವವರೆಗೂ ಕುವೆಂಪು ಅವರಿಗೆ ನೆಮ್ಮದಿ ಇರುತ್ತಿರಲಿಲ್ಲ. ಹೆಂಡತಿ ಮಕ್ಕಳೊಂದಿಗೆ, ಮೊಮ್ಮಕ್ಕಳೊಂದಿಗೆ ಹಬ್ಬ ಹರಿದಿನದಲ್ಲಿ ಭಾಗವಹಿಸುವುದೆಂದರೆ ಕುವೆಂಪು ಅವರಿಗೆ ಎಲ್ಲಿಲ್ಲದ ಸಂಭ್ರಮ. ತಮ್ಮ ಮನೆಯವರ ಬಗ್ಗೆ ಇದ್ದ ಕಾಳಜಿ, ಜವಾಬ್ದಾರಿ ಪ್ರೀತಿಗಳು ಅತಿಶಯ. ಒಂದು ದಿನ ನಡೆದ ಸಂಗತಿ ಮನೆಯವರ ಬಗ್ಗೆ ಅವರಿಗಿದ್ದ ಕಾಳಜಿಯನ್ನು ಎತ್ತಿ ಹಿಡಿಯುತ್ತದೆ.

“ತಂದೆಯವರು ಕುಲಪತಿಗಳಾಗಿದ್ದಾರೆ. ಆ ವರ್ಷದ ದೀಪಾವಳಿ ಬಂದಿದೆ. ನಾವೆಲ್ಲಾ ಪಟಾಕಿ ಬಾಣ ಬಿರುಸು ಅಮ್ಮನ ನೇತೃತ್ವದಲ್ಲಿ ನಾಲ್ಕು ದಿನಗಳ ಮೊದಲೇ ಕೊಂಡು ತಂದು ತಂಡಿಯಾಗಬಾರದೆಂದು ಬೆಚ್ಚಗೆ ಇಟ್ಟಿದ್ದೆವೆ. ಹಬ್ಬದ ದಿನ ಸಂಜೆ ತಂದೆಯವರ ಎದುರು ಹಚ್ಚಿ ಸಂತೋಷಿಸಲು ಉತ್ಸುಕರಾಗಿದ್ದೇವೆ. ತಂದೆಯವರು ಆ ದಿನ ಸಂಜೆ ಆಕಾಶವಾಣಿ ಕಾರ್ಯಕ್ರಮಕ್ಕೆ ಹೋಗಬೇಕಾಗಿದೆ. ಅವರು ಕಾರ್ಯಕ್ರಮಕ್ಕೆ ಹೊರಡುವಾಗ ಎಷ್ಟು ಹೊತ್ತಿಗೆ ಬರುವಿರಿ ಎಂದು ನಾನು, ಅಕ್ಕ ಕೇಳಿದ್ದಕ್ಕೆ ‘ಆರುಗಂಟೆಯ ಹೊತ್ತಿಗೆ ಬರುವೆ, ನೀವು ಹಣತೆ ದೀಪ ಹಚ್ಚಿಟ್ಟು ಪಟಾಕಿ ಹೊಡೆಯಲು ಸಿದ್ಧರಾಗಿರಿ’ ಎಂದು ಹೇಳಿ ಹೋದರು. ತಂದೆಯವರು

---

[೧] ‘ಮಗಳು ಕಂಡ ಕುವೆಂಪು’, ಪುಟ ೧೧-೧೨.

ಹೇಳಿದಂತೆ ಆರುಗಂಟೆಗೆ ಹಣತೆ ದೀಪ ಹಚ್ಚಿಟ್ಟು ತಂದೆಯವರಿಗಾಗಿ ಕಾಯುತ್ತಿದ್ದೆವು. ಅವರು ಬರುವುದು ತಡವಾಯಿತು. ಹಣತೆ ಎಣ್ಣೆ ಮುಗಿದು ದೀಪ ಆರಿ ಹೋಗುತ್ತದೆ ಎಂದು ನನಗೆ ಕಲಾಗೆ ತುಂಬ ಬೇಸರವಾಯಿತು. ಇನ್ನೂ ತಂದೆಯವರು ಬರಲಿಲ್ಲ. ಎಂದು ಕಾತರರಾಗಿ ಕಾಯುತ್ತಿದ್ದೆವು. ನಮ್ಮ ಕಾತರತೆ ನೋಡಿ ಅಮ್ಮ 'ಆಕಾಶವಾಣಿಗೆ ಪೋನ್ ಮಾಡಿ ನಿಮ್ಮ ಅಣ್ಣ ಬರುವುದು ಇನ್ನೂ ತಡವಾಗುವುದೇ ವಿಚಾರಿಸಿ' ಎಂದರು. ಅಕ್ಕ ಕಲಾ ಪೋನ್ ಮಾಡಿ ವಿಚಾರಿಸಿದಾಗ ಆಕಾಶವಾಣಿಯವರು ಈಗ ಮನೆಗೆ ಹೊರಟಿದ್ದಾರೆ ಎಂದು ಹೇಳಿದರು. ನಾನು ಕಲಾ ಅವರಿಗಾಗಿ ಮನೆ ಮುಂದೆ ಕಾಯುತ್ತಾ ನಿಂತಿದ್ದೆವು. ಸ್ವಲ್ಪ ಸಮಯದಲ್ಲಿ ತಂದೆಯವರು ಅವಸರವಾಗಿ ಮನೆಗೆ ಬಂದರು. ಅವರ ಮುಖದಲ್ಲಿ ತುಂಬ ಆತಂಕ ದುಗುಡ ಕಾಣುತ್ತಿತ್ತು. ಬಂದವರೇ 'ಮನೆಯಲ್ಲಿ ಏನಾದರೂ ತೊಂದರೆಯಾಗಿದೆಯೇ?' ಎಂದು ವಿಚಾರಿಸಿದರು. ಕಲಾ 'ಹಾಗೇನು ಇಲ್ಲ ಎಲ್ಲ ಸರಿಯಾಗಿದೆ' ಎಂದಳು. 'ಮತ್ತೇಕೆ ಪೋನ್ ಮಾಡಿದ್ದೀರಿ?' ಎಂದರು. 'ನೀವು ಆರು ಗಂಟೆಗೆ ಬರುವೆ, ಹಣತೆ ಹಚ್ಚಿಡಿ ಎಂದು ಹೇಳಿ ಹೋದಿರಿ.. ನಾವು ಆರು ಗಂಟೆಗೆ ಹಣತೆ ಹಚ್ಚಿದೆವು. ಎಷ್ಟು ಹೊತ್ತದರೂ ನೀವು ಬರಲಿಲ್ಲ. ನೀವು ಬರುವಷ್ಟರಲ್ಲಿ ದೀಪಗಳು ಎಣ್ಣೆ ಮುಗಿದು ಆರಿಹೋಗಬಹುದು. ಅದಕ್ಕೆ ಎಷ್ಟು ಹೊತ್ತಿಗೆ ಬರುವಿರಿ? ಬೇಗ ಬನ್ನಿ, ಎಂದು ಹೇಳಲು ಪೋನ್ ಮಾಡಿದೆ? ಎಂದಳು. ತಂದೆಯವರು ದೊಡ್ಡದಾಗಿ ನಿಟ್ಟುಸಿರುಬಿಟ್ಟು 'ಸದ್ಯ ಯಾರಿಗೂ ಏನೂ ಆಗಿಲ್ಲ. ಆಕಾಶವಾಣಿಯಿಂದ ಹೊರಟಾಗ ಮನೆಯಿಂದ ಪೋನ್ ಬಂದಿತ್ತು ಎಂದು ಕೇಳಿ ನನಗೆ ತುಂಬಾ ಗಾಬರಿಯಾಯಿತು. ಪಟಾಕಿ ಹೊಡೆದು ಯಾರು ಏನು ಮಾಡಿಕೊಂಡರೋ ಎಂದು. ದೇವರ ಕೃಪೆಯಿಂದ ಏನೂ ಸಂಭವಿಸಲಿಲ್ಲ. ನಾನು ನನ್ನ ಜೀವಮಾನದಲ್ಲೆಲ್ಲಾ ತುಂಬಾ ಕಷ್ಟ, ಸಂಕಟ ಅನುಭವಿಸಿದ್ದೇನೆ' ಎಂದು ಹೇಳಿ ಹಚ್ಚಿಟ್ಟಿದ್ದ ಹಣತೆಯ ದೀಪಗಳನ್ನೆಲ್ಲಾ ನೋಡುತ್ತಾ 'ನಿಮ್ಮೆಲ್ಲರ ಜೀವನ ಹೀಗೆ ನೂರಾರು ಹಣತೆಗಳಾಗಿ ಬೆಳಗಲಿ, ಎಂದು ಆಶೀರ್ವದಿಸಿ ಹೇಳಿದ ಮಾತು ಇಂದಿಗೂ ನನ್ನ ಮನದಾಳದಲ್ಲಿ ಅಚ್ಚಳಿಯದೆ ಉಳಿದಿದೆ".[೧] ತಾರಿಣಿಯವರು ಹಂಚಿಕೊಳ್ಳುವ ಈ ನೆನಪು ಕುವೆಂಪು ಅವರ ಕೌಟುಂಬಿಕ ಪ್ರೀತಿಯನ್ನು ಸಾರುತ್ತದೆ. ಇಷ್ಟೊಂದು ಪ್ರೀತಿ ವಿಶ್ವಾಸವೇ ತುಂಬಿದ್ದ ಸಂಸಾರದಲ್ಲಿ ಜಗಳ ಇರಲಿಲ್ಲವೇ? ಗಂಡ ಹೆಂಡಿರು ಮುನಿಸಿಕೊಂಡಿದ್ದೆ ಇಲ್ಲವೇ? ಈ ವಿಚಾರವಾಗಿ ಪೂರ್ಣ ಚಂದ್ರ ತೇಜಸ್ವಿಯವರಾಗಲೀ, ತಾರಿಣಿಯವರಾಗಲಿ ಎಲ್ಲೂ ಏನೂ ಹೇಳಿಲ್ಲ. ಹಾಗಾದರೆ ಕುವೆಂಪು ಸಂಸಾರದಲ್ಲಿ ಜಗಳವೇ ಇರಲಿಲ್ಲವೆ? ಎಂಬುದು ಕಾಡುವ ಸಹಜ ಪ್ರಶ್ನೆ. ಅದಕ್ಕೆ ಉತ್ತರವೆಂಬಂತೆ ಒಂದು ಕವನವನ್ನು ಉದಾಹರಿಸಬಹುದು.

---

[೧] 'ಮಗಳು ಕಂಡ ಕುವೆಂಪು', ಪುಟ ೨೪೪-೪೫.

ಕ್ಷಮಿಸು, ಕಂದ!

“ಮುತ್ತನೊಂದನೊತ್ತದಿಂದು
ಸತ್ತೆನೊಂದು ದಿನವನು!

ಮುನಿಸೆನ್ನ, ಮುದ್ದು ಕಂದ,
ನಮ್ಮ ನಮ್ಮ ಮುನಿಸಿನಿಂದ
ನಿನ್ನ ನೆತ್ತಿ ಕೊಳ್ಳದಿಂದು
ಕೊಂದೆ ನೊಂದು ದಿನವನು,
ಮತ್ತೆ ಮರಳಲಾರದೊಂದು
ಮುತ್ತಿನಂಥ ದಿನವನು!”[೧]

ಈ ಕವನವನ್ನು ಗ್ರಹಿಸಿದಾಗ ನಮ್ಮ ಭಾವಕ್ಕೆ ತೋಚುವುದು ಗಂಡ-ಹೆಂಡಿರಲ್ಲಿ ವೈಮನಸ್ಸು ಉಂಟಾಗಿದೆ ಎಂದು. ‘ನಮ್ಮ ನಮ್ಮ ಮುನಿಸಿನಿಂದ’ ಎಂಬ ಸಾಲು ನಮಗೆ ಅದನ್ನು ಸ್ಪಷ್ಟಪಡಿಸುವ ಸಾಕ್ಷಿ. ಒಟ್ಟಾರೆ ಇವರ ಸಾಂಸಾರಿಕ ಜೀವನದಲ್ಲೂ ಮನಸ್ತಾಪಗಳು ಬರುತ್ತಿದ್ದವು. ಎಂಬುದು ಸ್ಪಷ್ಟವಾಗುವ ವಿಷಯ. ಸಂಸಾರ ಈ ರೀತಿಯ ಸರಸ ವಿರಸಗಳಿಂದಲೇ ಕೂಡಿರಬೇಕೆಂಬುದು ಬಹುಶಃ ವಿಧಿ ನಿಯಮವಿರಬೇಕು. ಅದನ್ನು ‘ವಿಭೂತಿ ಪುರುಷರು’ ಕೂಡ ಮೀರಲು ಸಾಧ್ಯವಿಲ್ಲವೆಂಬಂತೆ ಕಾಣುತ್ತದೆ. ಒಟ್ಟಿನಲ್ಲಿ ಕುವೆಂಪು ಸಂಸಾರದಲ್ಲಿಯೂ ‘ಮುನಿಸು’ ಎಂಬ ‘ರಸ’ವಿತ್ತು. ಈ ಮುನಿಸು ಯಾರ ತಪ್ಪಿನಿಂದೆಂಬುದು ಅಚ್ಚರಿ. ಅದನ್ನು ನಿವಾರಿಸಲು ಈ ಕವನವು ನಮಗೆ ಸಹಕಾರಿಯಾಗಬಲ್ಲುದು.

ಸತಿಗೆ ಸುಖಾಗಮನ

“ತವರಿನಿಂದ ತಿರುಗಿ ಬಂದೆ:
ಹೋದ ಹರಣಗಳನೆ ತಂದೆ,
ಓ ಜೀವಿತೇಶ್ವರಿ!
ನೀನಿಲ್ಲದೆ ಬದುಕು ಗುಂಡು
ಕಲ್ ಬಾರ!
ನೀ ನಿಲ್ಲದೆ ಟೊಳ್ಳು, ಬೆಂಡು,
ನಿಸ್ಸಾರ!

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೬೨.

ಸುಖಾಗಮನ ಕಿದುವೆ ಕವನ
ನಿನಗೆ, ನನ್ನ ದೇವಿ!
ನನ್ನದೇನೆ ಇರಲಿ ತಪ್ಪು
ಕ್ಷಮಿಸಿ ಕರುಣಿಸೆನ್ನನಪ್ಪು,
ಬಾಳಿಸೆನ್ನ ನೋವಿ!"[೧]

ತಪ್ಪು ಯಾರದೋ, ಒಟ್ಟಿನಲ್ಲಿ ಮುನಿಸು ಬರುತ್ತಿತ್ತು, ನಿಜ ಆದರೆ ಈ ಮುನಿಸು ತೀರಾ ಅತಿರೇಕಕ್ಕೆ ಹೋಗದೆ ಮಿಲನದಲ್ಲೇ ಪರಿ ಸಮಾಪ್ತಿಯನ್ನು ಪಡೆಯುತ್ತಿತ್ತು. ಇದು ವಿವೇಕ. ದಂಪತಿಗಳು ವಿಧಿ ನಿಯಮಕ್ಕೆ ಭಯಪಟ್ಟೋ, ಶ್ರೀಪಾದದ ಲೀಲಾ ವಿಲಾಸಕ್ಕೆ ಅಚ್ಚರಿ ಪಟ್ಟೋ ತಮ್ಮನ್ನು ಇನ್ನೆಂದೂ ಅಗಲಿಸದೆ, ಮಿಲನ ಜನನವನ್ನು ಅನುಗ್ರಹಿಸು ಎಂದು ವಿನಮ್ರತೆಯಿಂದ ಪ್ರಾರ್ಥಿಸುತ್ತಾರೆ. ಪುನರ್ಮಿಲನಕ್ಕೆ ಹಾತೊರೆಯುವ ಈ ದಂಪತಿಗಳಿಬ್ಬರ ಸಂಸಾರ ಪ್ರೇಮ ಅನನ್ಯವಾದದ್ದೇ ಸರಿ ಈ ಕವನವೂ ಗಮನಾರ್ಹ.

ದಂಪತಿ ಪ್ರಾರ್ಥನೆ

"ಕರುಣಾ ಕೃಪಾ ಸಾಗರ, ಹೇ ಗುರುದೇವ,
ಬಾಳಿಸಿ ನಮ್ಮಿಬ್ಬರನೂ ನೀ ಬಲ್ಲಂದದಲಿ
ಕರೆದುಕೊ ನಿನ್ನಲರಡಿಗೆ:

ಒಲವಿನ ವರವನು ನೀಡೆಮಗೆ;
ಅಗಲಿಕೆ ಎಂದೂ ಬೇಡೆಮಗೆ;
ಕಷ್ಟವೊ, ನಷ್ಟವೊ, ಬಡವೋ, ಸಿರಿಯೋ,
ಗಂಜಿಯೊ ನೀರೋ ಸಾಕೆಮಗೆ;
ಪ್ರೇಮ ಕೃಪಾಬಲ ಬೇಕೆಮಗೆ!"[೨]

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೫೨.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೩೫೦.

೩ - ದಾಂಪತ್ಯ ಪ್ರೀತಿಯಲ್ಲಿ ಕುವೆಂಪು

ಪೆಣ್ಣೊಲಿದ ನಲ್ಲನಿರೆ, ಗಂಡೊಲಿದ ನಲ್ಲೆಯಿರೆ,
ಸಿರಿ ಬಾಳ್ತೆ ಸಿಂಗಾರ ಸೊಗಕೆ ಹೊಯಿಕೈಯಿಹುದೆ ಪೇಳ್
ಬದುಕಿನಲಿ? . . . .

ಕುವೆಂಪು ಅವರು ದಾಂಪತ್ಯ ಸುಖವನ್ನು ಅರ್ಥ ಪೂರ್ಣವಾಗಿ ಉಂಡವರು. ತಮ್ಮ ಇರವನ್ನು ತಮ್ಮ ಅರ್ಧಾಂಗಿಯಲ್ಲಿ ಕಂಡುಕೊಂಡ ಮಹಾನ್ ಚೇತನ. ಎರಡು ದೇಹ, ಒಂದೇ ಆತ್ಮವೆಂಬಂತೆ ಇವರ ದಾಂಪತ್ಯ ಜೀವನ. ಕುವೆಂಪು ಅವರ ಜೀವನೋತ್ಸಾಹವೇ ಅವರ ಮಡದಿ. ಸಾಹಿತ್ಯ ಸ್ಫೂರ್ತಿಯೇ ಅವರು. ಹೆಂಡತಿಯನ್ನು ಅನನ್ಯ ಪ್ರೀತಿಯಿಂದ ಪೂಜಿಸುತ್ತಿದ್ದರು ಕುವೆಂಪು. ಅವರನ್ನು ಬಿಟ್ಟು ಇರುವುದೇ ಇವರಿಗೆ ದೊಡ್ಡ ಕಷ್ಟ. ತಮ್ಮ ಹೆಂಡತಿ ಗರ್ಭಿಣಿಯಾಗಿದ್ದಾಗ ತವರು ಮನೆಗೆ ಕಳುಹಿಸಲೇ ಹಿಂದು ಮುಂದು ನೋಡುತ್ತಿದ್ದರು. ಅವರ ಮನೆಯವರನ್ನೇ ತಮ್ಮ ಮನೆಗೆ ಬರಲು ಹೇಳುತ್ತಿದ್ದರು. ಅವರನ್ನು ಬಿಟ್ಟಿರಲಾರದೆ, ಊಟದ ತೊಂದರೆ. ಆರೋಗ್ಯದ ತೊಂದರೆ ಎಂದು ನೆಪಗಳನ್ನು ಹೇಳುತ್ತಿದ್ದರು. ಹೆಂಡತಿ ಎಂದರೆ ಅವರಿಗೆ ಅಷ್ಟೊಂದು ಪ್ರೀತಿ. ಅವರನ್ನು ಒಂಟಿಯಾಗಿ ಎಲ್ಲೂ ಕಳುಹಿಸಿದ್ದೇ ಇಲ್ಲ ಎಂದು ಹೇಳುತ್ತಾರೆ. ಮಗಳು ತಾರಿಣಿ- "ತಂದೆಯವರು ನಿವೃತ್ತರಾದ ಮೇಲೆ ಅವರೇ ಕಾರು ಚಾಲನೆ ಮಾಡಿಕೊಂಡು ಅಮ್ಮನನ್ನೂ, ನಮ್ಮನ್ನೂ ಪೇಟೆಗೆ ಕರೆದೊಯ್ಯುತ್ತಿದ್ದರು. ನಮ್ಮನ್ನು ಕಾಲೇಜಿಗೆ ಬಿಡುತ್ತಿದ್ದರು. ಪೇಟೆಗೆ ಹೋದಾಗ ನಮ್ಮ ಕೆಲಸ ಮುಗಿಸಿ ಬರುವವರೆಗೆ ಕಾರಿನಲ್ಲಿಯೇ ಕಾಯುತ್ತಾ ಕುಳಿತಿರುತ್ತಿದ್ದರು. ಆಗ ಸಿಟಿ ಬಸ್ಸಿನ ಅನುಕೂಲ ಇರಲಿಲ್ಲ. ರಿಕ್ಷಾಗಳು ಅಪರೂಪ. ನಾವು ದೊಡ್ಡವರಾದ ಮೇಲೆ ಬಸ್ಸಿನಲ್ಲಿ ಓಡಾಡುತ್ತಿದ್ದೆವು. ಆದರೆ ಅಮ್ಮನನ್ನು ಒಂದು ದಿನವೂ ಬಸ್ಸಿನಲ್ಲಿ ಹೋಗಲು ತಂದೆಯವರು ಬಿಡುತ್ತಿರಲಿಲ್ಲ. ನಾನೇ ಕಾರಿನಲ್ಲಿ ಕರೆದುಕೊಂಡು ಹೋಗುವೆ ಎನ್ನುತ್ತಿದ್ದರು. ದಿನಸಿ ಅಂಗಡಿಗೆ ಹೋದಾಗ ಒಂದು ಗಂಟೆ ಕಾಯಬೇಕಾಗುತ್ತಿತ್ತು. ಕೆಲವು ಸಮಯ ಬಟ್ಟೆ ಅಂಗಡಿಗೆ ಹೋದಾಗ ಹೊತ್ತಾಗುತ್ತಿತ್ತು. ಅಂಗಡಿ ಎದುರೆ ಕಾರು ಇರುತ್ತಿತ್ತು. ಅಂಗಡಿ ಒಡೆಯ ಬಂದು ತಂದೆಯವರನ್ನು ಒಳಗೆ ಕುಳಿತು ಕೊಳ್ಳಿ ಎಂದು ಕರೆಯುತ್ತಿದ್ದರು. ಆದರೆ ತಂದೆಯವರು ಬರುತ್ತಿರಲಿಲ್ಲ. ಕಾರಿನಲ್ಲೇ ಕುಳಿತಿರುತ್ತಿದ್ದರು. ಕೆಲವು ಬಾರಿ ಅಮ್ಮ ದಂತ ವೈದ್ಯರಲ್ಲಿ ಹೋದಾಗ ಅವರು ಬರುವವರೆಗೆ ಒಂದು ಗಂಟೆ ಎರಡು ಗಂಟೆ ಕಾರಿನಲ್ಲೇ ಕುಳಿತು ಅವರಿಗಾಗಿ ಕಾಯುತ್ತಿದ್ದರು".[೧]

---

[೧] 'ಮಗಳು ಕಂಡ ಕುವೆಂಪು', ಪುಟ ೬೧.

ಗಂಡ ಹೆಂಡಿರಿಬ್ಬರು ಪರಸ್ಪರ ಪ್ರೀತಿಸುವುದರಲ್ಲಿ ಅವರಿಗವರೇ ಸಾಟಿ. ಗಂಡ ನೊಂದುಕೊಂಡರೆ ಹೆಂಡತಿಗಾಗದು; ಹೆಂಡತಿ ನೊಂದುಕೊಂಡರೆ ಗಂಡನಿಗಾಗದು. ಆ ರೀತಿಯ ಅನನ್ಯ ದಾಂಪತ್ಯ. ಅದು ದಾಂಪತ್ಯದ -ಪರಾಕಾಷ್ಠೆಯ ಪ್ರೀತಿ. ಈ ಗಂಡಹೆಂಡಿರ ಎರಕ ಹೊಯ್ದ ಪ್ರೀತಿಯ ಸಂದರ್ಭವನ್ನು ತಾರಿಣಿಯವರು ಸೂಕ್ಷ್ಮವಾಗಿ ಗ್ರಹಿಸಿ ನಮ್ಮೊಂದಿಗೆ ಹಂಚಿಕೊಂಡಿದ್ದು ಹೀಗೆ. –"ಒಂದು ದಿನ ಮಧ್ಯಾಹ್ನ ಕಾಲೇಜು ಮುಗಿಸಿ ಮನೆಗೆ ಬಂದು ಎಂದಿನಂತೆ ಮುಂದುಗಡೆ ಬಾಗಿಲು ತಟ್ಟಿದಾಗ, ಹಿಂದುಗಡೆಯಿಂದ ಬಾ, ಬಾಗಿಲು ತೆರೆದಿದೆ ಎಂದು ಹೇಳಿದ ತಂದೆಯವರ ದನಿ ಕೇಳಿಸಿತು. ಹಿಂದುಗಡೆ ಬಾಗಿಲಿಗೆ ಬಂದಾಗ ನೋಡಿದರೆ ಪಾತ್ರೆ ತೊಳೆಯುವ ಜಾಗದಲ್ಲಿ ಅಮ್ಮ ಕುಳಿತು ಮೀನು ಶುಚಿ ಮಾಡುತ್ತಿದ್ದಾರೆ. ಮಧ್ಯಾಹ್ನ ಎರಡು ಗಂಟೆ ಸಮಯ. ಬಿಸಿಲು ಜೋರಾಗಿದೆ. ಅದಕ್ಕಾಗಿ ತಂದೆಯವರು ಅಮ್ಮನಿಗೆ ಛತ್ರಿ ಹಿಡಿದು ನೆರಳಾಗುವಂತೆ ಮಾಡಿದ್ದಾರೆ. ನೋಡಿದ ತಕ್ಷಣ ಆ ದೃಶ್ಯ ತುಂಬ ತಮಾಷೆಯಾಗಿ ಕಾಣುತ್ತಿತ್ತು. ಆದರೆ ಹೊರಗೆ ಬಿಸಿಲು ಸುಡುತ್ತಿತ್ತು. ಸಿಮೆಂಟ್ ಮೇಲೆ ಕುಳಿತು ಕೆಲಸ ಮಾಡಲು ಕಷ್ಟವಿತ್ತು. ಆಗತಾನೇ ಮೀನು ಮಾರುವವನು ಒಳ್ಳೆಯ ಮೀನು ಮಾರಾಟಕ್ಕೆ ಬಂದಿದೆ ಎಂದು ಕೊಟ್ಟು ಹೋಗಿರುವನು. ಅಮ್ಮ ತಂದೆಯವರಿಗೆ ಇಷ್ಟವೆಂದುಕೊಂಡು ಶುಚಿಗೊಳಿಸುತ್ತಿದ್ದರು. ಅಪ್ಪ ನೋಡಿದವರು ಅಮ್ಮನಿಗೆ ಬಿಸಿಲು ತಾಪ ಆಗುತ್ತಿದೆ ಎಂದು ಅಮ್ಮನ ಕೆಲಸ ಮುಗಿಯುವವರೆಗೆ ಛತ್ರಿ ಹಿಡಿದು ನಿಂತಿದ್ದರು."[೧]

ಹೇಮಾವತಿ ಎಂದರೆ ಕುವೆಂಪು ಅವರಿಗೆ ಸ್ವರ್ಗ. 'ದೇವನಿತ್ತ ಧರಾ ಸ್ವರ್ಗ ನನಗೆ ನಿನ್ನ ಮೆಯ್' ಎಂದು ತಮ್ಮ ವಾಂಛಲ್ಯವನ್ನು ತೆರೆದಿಡುತ್ತಾರೆ. ಹೆಂಡತಿಯೊಂದಿಗೆ ಅವರ ಬಾಳು ಎಲ್ಲಾ ಉಪಾಧಿಗಳನ್ನು ಸಹಿಸಬಲ್ಲುದು. ಎದುರಿಸಬಲ್ಲುದು ಹೇಮಾವತಿಯವರೇ ಕುವೆಂಪು ಅವರ ಆತ್ಮ ಬಲ.

"ನೀನಿರೆ ಬೆಂಬಲ, ಹಗುರ ಹಿಮಾಚಲ;
ನೀ ಹೋದರೆ ದೂರ
          ಅರಳೆಯೆ ಗಿರಿ ಭಾರ!
ನೀನೊಡನಿರೆ ನಾ ರಸ ಸಂಗಿ;
          ದಿಟ ನೀನರ್ಧಾಂಗಿ!

ಇದನೆಂಬರೆ ತಿರೆ, ನೀ ಕಣ್ ಮುಂದಿರೆ?
ನೀನಿರೆ ಸಂಸಾರ

---

೧ 'ಮಗಳು ಕಂಡ ಕುವೆಂಪು', ಪುಟ ೧೧೧.

ತಾನಿಕ್ಷು ಕ್ಷೀರ!

ನೀ ನೀರೆ,

ನಾ ನೀರ;

ಈ ಪಾರ,

ಆ ಪಾರ;

ತೋಳ್ ತಬ್ಬಿದ ನಾವಿಬ್ಬರೆ

ರಸಕೆರಡೇ ತೀರ!''[೧]

ಕುವೆಂಪು ಅವರ ಮಡದಿ ಮೇಲಿನ ಪ್ರೀತಿ ಅನಂತ ನೀಲಾಕಾಶದಲ್ಲೂ ಎಡೆ ದೊರೆಯದಷ್ಟು ವಿಸ್ತಾರವಾಗಿತ್ತು. ಅವರು ಮಡದಿಯ ಬಾಹು ಬಂಧನದಲ್ಲಿ ಅನಂತವನ್ನು ಮರೆಯುತ್ತಿದ್ದರು. ಮಡದಿಯ ಸಾನ್ನಿಧ್ಯದಿಂದ ದೂರವಿರಲು ಅವರಿಗೆ ಮರಣ ಸಂಕಟವಾಗುತ್ತಿತ್ತು. ಅವರು ತಮ್ಮ ಮೊದಲ ವಿರಹದ ನೋವನ್ನು 'ಪ್ರಥಮವಿರಹ' ಕವನ ಬರೆಯುವ ಮೂಲಕ ವ್ಯಕ್ತಪಡಿಸಿದ್ದಾರೆ. ಅದು ಜೇನಾಗುವ ಕೃತಿಯಲ್ಲಿದೆ ಎಂದು ತಮ್ಮ ನೆನಪಿನ ದೋಣಿಯಲ್ಲಿ' (ಪುಟ ೩೫) ಹೇಳಿಕೊಳ್ಳುತ್ತಾರೆ.

ಕುವೆಂಪು ಅವರು ಮಹಾನ್ ರಸಿಕರು. ದಾಂಪತ್ಯ ಸುಖವನ್ನು ಅಳೆದು ತೂಗಿ ಇಂಚಿಂಚು ಸವಿದವರು. ಅವರ ರಸಿಕತನವನ್ನು ತೋರಿಸುವ ಒಂದು ಸಂದರ್ಭದ ಮಾತುಗಳಿವು, ತಾರಿಣಿಯವರ ನೆನಪಿನಲ್ಲಿ ''ದೊಡ್ಡ ಕಾರು ಹೊಸದಾಗಿ ಬಂದಿತ್ತು. ಷೆಡ್‌ನಲ್ಲಿ ನಿಲ್ಲಿಸಿದ್ದರು. ಆ ದಿನ ತಂದೆಯವರು ಆಗಾಗ್ಗೆ ಷೆಡ್‌ಗೆ ಹೋಗಿ ಕಾರು ನೋಡಿ ಬರುತ್ತಿದ್ದರು. ಕಾರಿನ ಮೇಲೆ ಬಿದ್ದಿದ್ದ ಧೂಳು ಒರೆಸುವುದು, ಒಳಗೆ ಕುಳಿತು ನೋಡುವುದು ಮಾಡುತ್ತಿದ್ದರು. ಸಣ್ಣ ಕಾರಿಗೂ ದೊಡ್ಡ ಕಾರಿಗೂ ಬಿಡುವುದರಲ್ಲಿ ಇರುವ ವ್ಯತ್ಯಾಸವನ್ನು ಮನನ ಮಾಡುತ್ತಿದ್ದರೋ ಏನೋ. ಅಡಿಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಅಮ್ಮ ಅದನ್ನೆಲ್ಲ ಗಮನಿಸಿದ್ದರು ತಂದೆಯವರು ಒಳಗೆ ಬಂದಾಗ 'ಏನು ಅಷ್ಟೊಂದು ಸಂಭ್ರಮ ಮತ್ತೆ ಮತ್ತೆ ಷೆಡ್‌ಗೆ ಹೋಗಿ ಬರುವುದು? ಹೋಗಿ ಕಾರು ಮುಟ್ಟಿ ಮುಟ್ಟಿ ನೋಡಿ ಬರುವಿರಾ?' ಎಂದರು. ತಂದೆಯವರು 'ಹೌದು ಯಾವುದು ಹೊಸತು ಬಂದರೂ ಮತ್ತೆ ಮತ್ತೆ ನೋಡುವೆ. ಮುಟ್ಟಿ ಮುಟ್ಟಿ ನೋಡುವೆ. ನೀನೂ ಹೊಸದಾಗಿ ಬಂದಾಗ ಮಾಡುತ್ತಿರಲಿಲ್ಲವೇ? ನಿನಗೆ ಮಾತ್ರ ಎಂದು ತಿಳಿದೆಯಾ?' ಎಂದು ತಮಾಷೆ ಮಾಡಿದರು. ಅಮ್ಮ 'ಸಾಕು ಸುಮ್ಮನಿರಿ ನಿಮ್ಮ ತಮಾಷೆ. ಹೋಗಿ ಮತ್ತೆ ಮತ್ತೆ ಮುಟ್ಟಿ ಸವರಿ ಬನ್ನಿ, ಯಾರು ಬೇಡ ಎನ್ನುವರು' ಎಂದು ಹೇಳಿದರು. ಅಪ್ಪ ನಗುತ್ತಾ ಅವರ

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೪೧.

ರೂಮಿನ ಕಡೆ ಹೊದರು."[೧] ಹೀಗೆ ಹೆಂಡತಿಯನ್ನು ರಸಿಕತೆಯ ಮಾತುಗಳ ಮೂಲಕ ಚುಡಾಯಿಸುತ್ತಿದ್ದರು. ಕುವೆಂಪು ಅವರಿಗೆ ಈ ರೀತಿಯ ದಾಂಪತ್ಯದ ಅನುಭವವಿದ್ದಿದ್ದರಿಂದಲೇ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಬೈಸಿಕಲ್ಲನ್ನು ಮುಟ್ಟಿದ ಸಂದರ್ಭದಲ್ಲಿ ಐತ ಮತ್ತು ಗುತ್ತಿಯರ ಮನಸ್ಸುಗಳು ಅವರ ಪ್ರೇಯಸಿಯರ ಮೈ ಮಾಟವನ್ನು ನೆನಪಿಸಿಕೊಂಡು ಖುಷಿಪಡುವ ಸಂದರ್ಭವನ್ನು ಸೊಗಸಾಗಿ ಚಿತ್ರಿಸಿರುವುದು.

ತಮ್ಮ ಹೆಂಡತಿ ತಮ್ಮನ್ನು ಬಿಟ್ಟು ಎಲ್ಲಿಗೆ ಹೋಗಬೇಕೆಂದರೂ ಇವರು ಸಹಿಸುತ್ತಿರಲಿಲ್ಲ. ಊರಿಗೆ ಹೋಗುವ ಸಂದರ್ಭಗಳು ಹಾಗೇನಾದರೂ ಬಂದರೆ ಅದನ್ನು ಬ್ರಹ್ಮ ಸಂಕಟದಿಂದ ಒಪ್ಪುತ್ತಿದ್ದರು. ಮತ್ತೆ ಊರಿನಿಂದ ತಮ್ಮ ಹೆಂಡತಿ ಬರುತ್ತೇನೆಂದು ಪತ್ರ ಬರೆದರೆ ಅವರಿಗೆ ಹೇಳ ತೀರದ ಆನಂದ. ಅದನ್ನು 'ಪ್ರಿಯೆಯ ಪತ್ರ' ಎಂಬ ಕವನದಲ್ಲಿ ವ್ಯಕ್ತಪಡಿಸುತ್ತಾರೆ.

ಪ್ರಿಯೆಯ ಪತ್ರ

"ನಾಡಿ ನಾಡಿಯಲಿ ಹರಿದುದು ಜೇನು
ನಾಳೆ ಬಹೆನೆಂದು ಬರೆಯಲು ನೀನು?

ಹತ್ತಿಕಲ್ಲ ವೋಲಿದ್ದುದು ನಿನ್ನೆ;
ಕಲ್ಲೆ ಹತ್ತಿಯಾಯ್ತಿಂದೆನ್ನ ಚನ್ನೆ!

ನಾಳೆ ನಿನ್ನ ನಾ ನೋಡಿದೊಡೆನ್ನ
ಮುಡಿ ನಿಮಿರದೆ ಹೇಳಂಬರದನ್ನ!"[೨]

ಹೀಗೆ ಹೆಂಡತಿಯೇ ಅವರಿಗೆ ವಿಶ್ವ. ಆಕೆಯಿಲ್ಲದೆ ಇವರು ತಮ್ಮ ಬದುಕನ್ನು ಕಲ್ಪಿಸಿಕೊಳ್ಳಲು ನಡುಗುತ್ತಿದ್ದರು. ತಮ್ಮ ಭಾವಕೋಶದಲ್ಲಿ ಹೇಮಾವತಿಯನ್ನು ಭದ್ರವಾಗಿಸಿಕೊಂಡಿದ್ದರು. ಒಂದು ಗಂಡಿನ ಬದುಕಿನಲ್ಲಿ ಹೆಣ್ಣಿನ ಪಾತ್ರವಿಲ್ಲದೆ ತೃಪ್ತಿ ಸಾರ್ಥಕತೆಯ ಮಾತು ಕನಸಿಗೂ ಮೀರಿದ್ದು. ಕುವೆಂಪುಗೆ ಹೇಮಾವತಿ ಅವರನ್ನು ಪಡೆದು ಸಾರ್ಥಕ್ಯ ಸಾಧಿಸಿದ ಅನುಭೂತಿಯಿದು.

---

[೧] 'ಮಗಳು ಕಂಡ ಕುವೆಂಪು', ಪುಟ ೬೯.

[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೪೮.

"ನೋಡಿ ಕಣ್ ಸಾರ್ಥಕ!
ಕೇಳಿ ಕಿವಿ ಸಾರ್ಥಕ!
ಸೋಂಕಿ ಮೆಯ್ ಸಾರ್ಥಕ!
ಅಪ್ಪಿ ಬಾಳ್ ಸಾರ್ಥಕ!"[೧]

ಈ ರೀತಿಯ ಪರಸ್ಪರ ಭಾವಗಳು ಗಂಡ ಹೆಂಡಿರಲ್ಲಿ ಮನ ತುಂಬಿಕೊಂಡಿದ್ದವು. ಹೆಂಡತಿಗೇನಾದರೂ ಸಂಭವಿಸಿದರೆ ಗಂಡ ಪಡುವ ನೋವು ಎಲ್ಲೆ ಮೀರಿದ್ದು; ಅಂತೆಯೇ, ಗಂಡನಿಗೇನಾದರೂ ಸಂಭವಿಸಿದರೆ ಹೆಂಡತಿ ಅನುಭವಿಸುವ ನೋವು. ತಾರಿಣಿಯವರು ಹೇಳುವ ಒಂದು ಉದಾಹರಣೆಯಲ್ಲಿ, ಹೇಮಾವತಿಯವರು ಒಮ್ಮೆ ಅನಾರೋಗ್ಯದಲ್ಲಿದ್ದಾಗ ತಮ್ಮ ಪತಿಯ ಬಗೆಗಿನ ಪ್ರೇಮ ಕಾಳಜಿಯನ್ನು ವ್ಯಕ್ತಪಡಿಸಿದ್ದು ಹೀಗೆ "ನನ್ನ ಬಗ್ಗೆ ನನಗೆ ಚಿಂತೆಯಿಲ್ಲ. ನಾನಂತೂ ಹೋಗುತ್ತೇನೆ. ನಿಮ್ಮಿಬ್ಬರಿಗೆ ಇನ್ನೂ ಮದುವೆಯಾಗಿಲ್ಲ. ನಿಮ್ಮ ಅಣ್ಣನ (ಅಪ್ಪನ) ಗತಿ ಏನು? ಅವರು ಏನು ಮಾಡುವರು? ಎಂದು ದುಃಖಿಸುತ್ತಿದ್ದರು."[೨]

ಕುವೆಂಪು ಅವರನ್ನು ಪ್ರೇಮ ಬಂಧನದಲ್ಲಿ ಆರಾಧಿಸಿದ ಹೇಮಾವತಿಯವರು ೧೯೮೭ರ ಸೆಪ್ಟೆಂಬರ್ ತಿಂಗಳಿನಲ್ಲಿ ಭೌತಿಕವಾಗಿ ಅಗಲುತ್ತಾರೆ. ಈ ಘಟನೆ ಕುವೆಂಪು ಅವರನ್ನು ಭಾವ ಶೂನ್ಯರನ್ನಾಗಿಸಿ; ಶೂನ್ಯ ಸಮಾಧಿಯಲ್ಲಿ ತಮ್ಮ ಉಳಿದ ಜೀವನವನ್ನು ಕಳೆಯುವಂತೆ ಮಾಡುತ್ತದೆ. ಅಂದಿನ ಅವರ ಭಾವ ತೀವ್ರತೆಯ ವರ್ತನೆಗಳನ್ನು ಮಗಳು ದಾಖಲು ಮಾಡಿರುವುದು ಹೀಗೆ – "ತಾಯಿಯವರ ಅಗಲಿಕೆಯ ನೋವಿನಿಂದ ತಂದೆಯವರು ವಯಸ್ಸಾದಂತೆ ಕಾಣುತ್ತಿದ್ದರು. 'ಅಮ್ಮ ಹೋದ ಮರು ದಿನವೇ ಅಣ್ಣ ಹತ್ತು ವರ್ಷ ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದರು.' ಎಂದು ತೇಜಸ್ವಿ ಹೇಳುತ್ತಿದ್ದ. ತಾಯಿಯವರ ನೆನಪು ಭಾವನಾತ್ಮಕವಾಗಿ ಸಂಪೂರ್ಣ ಅವರನ್ನು ಆವರಿಸಿತ್ತು. ಅವರ ಭಾವನೆಗಳು ಕಣ್ಣೀರಾಗಿ ಹೊರ ಬರುತ್ತಿತ್ತು. ಹಾಗಾಗಿ ಅಮ್ಮನ ವಿಚಾರ ಮಾತಾಡಲು ನಾನು ತುಂಬಾ ಹಿಂಜರಿಯುತ್ತಿದ್ದೆ. ದೇವರ ಮನೆಯಲ್ಲಿ ಅಮ್ಮನ ಪೋಟೋ ಇಟ್ಟು ಆ ಪಟಕ್ಕೆ ತಾಯಿಯವರ ಕರಿಮಣಿ ಸರವನ್ನು ಹಾರದಂತೆ ಹಾಕಿದ್ದರು. 'ದೇವರ ಮನೆಯಲ್ಲಿ ಕುಳಿತು ಅಮ್ಮನ ಫೋಟೋ ನೋಡಿದಂತೆಲ್ಲಾ ತಂದೆಯವರು ಬಿಕ್ಕಳಿಸಿ, ಬಿಕ್ಕಳಿಸಿ ಅಳುತ್ತಿದ್ದರು' ಎಂದು ಅಕ್ಕ ಹೇಳಿದ್ದಳು. ತಂದೆಯವರು

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೨೨.
[೨] 'ಮಗಳು ಕಂಡ ಕುವೆಂಪು', ಪುಟ ೧೪೬.

ಹೇಳಿದರಂತೆ ನಾನು ಅತ್ತಾಗಲೆಲ್ಲ ಅಮ್ಮ, ಫೋಟೋ ಒಳಗಿನಿಂದ ನಾನು ಇಲ್ಲೇ ಇದ್ದೀನಿ ಏಕೆ ಅಳುತ್ತಿದ್ದೀರಿ' ಎಂದು ಹೇಳಿದಂತೆ ಅನ್ನಿಸುತ್ತದೆ ಎಂದು.''[೧]

ನಿಷ್ಕಲ್ಮಷ ಪ್ರೇಮವನ್ನು ಸಾಧಿಸಿದ್ದ ಗಂಡ ಹೆಂಡಿರಿಬ್ಬರೂ ಭಾವನಾತ್ಮಕವಾಗಿ ಐಕ್ಯವಾಗಿದ್ದರೂ; ಭೌತಿಕ ಚಲನವಲನ ನೀಡುತ್ತಿದ್ದ ಒಂದು ಬಗೆಯ ಉದ್ರಿಕ್ತ ಪ್ರೀತಿಯನ್ನು ಸ್ಪರ್ಶವಿಲ್ಲದ ನಿರಾಕಾರ ಚಿತ್ರ ತಣಿಸದು ಎಂಬ ಸತ್ಯದ ಅರಿವಿದ್ದ ಕುವೆಂಪು ಅವರು ತಾವು ಮನೆಯಲ್ಲಿ ಓಡಾಡುವೆಡೆಯಲ್ಲೆಲ್ಲಾ ಹೇಮಾವತಿಯವರ ಭಾವ ಚಿತ್ರವನ್ನಿರಿಸಿದ್ದರು. ಅದನ್ನು ನೋಡಿದಾಗ ಬಹುಶಃ ಅವರಿಗಾಗುತ್ತಿದ್ದ ಆನಂದ ನಂದನಕ್ಕಿಂತ ಮಿಗಿಲೇ ಇರಬೇಕು.

ಉದಯರವಿಯಲ್ಲಿ ಬಾಳಿ ಹೋದ ಹೇಮಾವತಿಯವರು ಬಳಸುತ್ತಿದ್ದ ಯಾವ ವಸ್ತುವನ್ನಾದರೂ ಸರಿಯೆ, ಯಾರೂ ಮುಟ್ಟಲೂ ಅದನ್ನು ಬದಲಾವಣೆ ಮಾಡಲೂ ಸುಲಭವಾಗಿ ಕುವೆಂಪು ಅವರು ಬಿಡುತ್ತಿರಲಿಲ್ಲ. ಮನೆಯ ಪ್ರತಿಭಾಗದಲ್ಲೂ ತಮ್ಮ ನಲ್ಲೆಯನ್ನು ದರ್ಶಿಸುತ್ತಿದ್ದರು. ಅದು ನೈಜ ಹೃದಯದ ಸತ್ಯ ದರ್ಶನವೇ ಸರಿ. ಅವರ ಉತ್ಕಟ ಪ್ರೀತಿ ಹೀಗಿತ್ತು ಎಂದು ಮಗಳು ತಾರಿಣಿ ನೆನಪು ಮಡುತ್ತಾರೆ. ''ತಂದೆಯವರ ಮಲಗುವ ಕೊಠಡಿಯಲ್ಲಿ ಅವರ ಮಂಚವಿಟ್ಟಿದ್ದ ಪಕ್ಕದ ಗೋಡೆಗೆ ಅವರ ದೀಕ್ಷಾಗುರು ಶ್ರೀ ಸ್ವಾಮಿ ಶಿವಾನಂದರ ಫೋಟೋ ಹಾಕಿದ್ದರು. ಅಮ್ಮನವರು ಬೆಳಿಗ್ಗೆ ಎದ್ದವರೇ ಫೋಟೋ ಹತ್ತಿರ ಹೋಗಿ ಗೋಡೆಗೆ ತಲೆಮುಟ್ಟಿ ನಮಸ್ಕರಿಸಿ ಬರುತ್ತಿದ್ದರು. ಫೋಟೋ ತಾಯಿಯವರ ಎತ್ತರಕ್ಕೆ ಇನ್ನೂ ಸ್ವಲ್ಪ ಮೇಲಿತ್ತು. ಅವರಿಗೆ ಫೋಟೋಕ್ಕೆ ತಲೆ ಮುಟ್ಟಿಸಲು ಎಟುಕುತ್ತಿರಲಿಲ್ಲ. ಕೆಳಭಾಗದ ಗೋಡೆಗೆ ತಲೆ ಒತ್ತಿ ನಮಸ್ಕರಿಸುತ್ತಿದ್ದರು. ಅವರು ತಲೆ ಮುಟ್ಟಿಸುತ್ತಿದ್ದ ಸ್ಥಳದಲ್ಲಿ ಅವರ ತಲೆಯ ಎಣ್ಣೆ ತಗುಲಿ ಗೋಡೆ ಮೇಲೆ ಸ್ವಲ್ಪ ಜಿಡ್ಡಿಗೆ ಗುರುತು ಆಗಿತ್ತು. ಅಮ್ಮ ಹೋದ ಮೇಲೆ ತಂದೆಯವರು ನನಗೆ ಹೇಳುತ್ತಿದ್ದರು. 'ನೋಡು, ಅಮ್ಮ ದಿನಾ ನಮಸ್ಕರಿಸಿ ಬಿದ್ದ ಈ ಗುರುತಿನ ಮೇಲೆ, ಗೋಡೆ ಕೊಳೆಯಾಗಿದೆ ಎಂದು ನೀನು ಸುಣ್ಣ ಹೊಡೆಯಬೇಡ. ಅದು ಹಾಗೇ ಇರಲಿ ಅಮ್ಮನ ನೆನಪಿಗಾಗಿ' ಎನ್ನುತ್ತಿದ್ದರು.''[೨]

ಇಹದಲ್ಲೂ, ಪರದಲ್ಲೂ ಬಾಳಿಗೆ ಅರ್ಥ ದೊರಕಿಸಿದ ಅನಂತಪೂರ್ಣೆ ಹೇಮಾವತಿಯರಿಲ್ಲದೆ ಕುವೆಂಪು ತಾವು ಶೂನ್ಯ ಎಂದು ಭಾವಿಸುತ್ತಾರೆ. ಕನಸಿನ ಸಗ್ಗದ

---

೧ 'ಮಗಳು ಕಂಡ ಕುವೆಂಪು', ಪುಟ ೧೭೩..

೨ 'ಮಗಳು ಕಂಡ ಕುವೆಂಪು', ಪುಟ ೩೩೮.

ಬಾಗಿಲು ಕೂಡ ಪತ್ನಿಯ ಅಸ್ತಿತ್ವದ ಮೂಲಕ ಪತಿಯ ಇರವನ್ನು ಪ್ರತಿಪಾದಿಸುತ್ತದೆ. ಇದು ಕಲ್ಪನೆಯೋ, ಭೂಮ ನನ್ನಿಯೊ ಒಟ್ಟಿನಲ್ಲಿ ಭಾವ ಸಮಾಧಿಯಲ್ಲಿ ಎಲ್ಲವೂ ಅತೀತ.

ಜನ್ಮ ಜನ್ಮ ಸಂಗಾತಿ

"ಯಾರು ಕೈ ಬಿಟ್ಟರೂ ನೀ ಬಿಡದಿರು;
ನೀ ನೆನ್ನ ತಾಯ್, ತಂದೆ,_ಗುರು, ದೇವರು!

ನಿನ್ನೊಡನೆ ಹಿಂದೆನಿತೊ ಸಾರಿ ಹುಟ್ಟಿದೆ, ಸತ್ತೆ;
ಮುಂದೆಯೂ ನಿನ್ನೊಡನೆ ಜನ್ಮ ಜನ್ಮವನೆತ್ತೆ
ಹಿಂಜರಿಯನೈ, ಕ್ಲೇಶ ಕಷ್ಟದಿ, ಮತ್ತೆ ಮತ್ತೆ,
ಸಂಸಾರ ಲೀಲೆಯ ರಾಸ ವರ್ತುಲದಿ ಸುತ್ತೆ!

ನೀನಿರಲು ನನ್ನೊಡನೆ, ದುಮುಕೆ ಹೆದರಿಕೆ ಏಕೆ
ಸರ್ಪ ಕಾಳೀಯನಿರ್ಪ ಮಡುವಾದರೂ?
ನೀಂ ಬರಲು ಬೆಂಬಿಡದೆ, ನನಗನ್ಯರೇಂ ಬೇಕೆ?
ನೀಂ ಬಂದೆ ಬಹೆ, ಕೊಂಚ ತಡವಾದರೂ!"[೧]

ಗಂಡ ಹೆಂಡಿರ ಖಾಸಗಿ ಬದುಕನ್ನು ಪೂರ್ಣವಲ್ಲದಿದ್ದರೂ ತಮ್ಮ ಗ್ರಹಿಕೆಯಲ್ಲಿ ಸೆರೆಯಾದಷ್ಟು ವಿಷಯವನ್ನು ಸೂರೆ ಮಾಡಿ ಸಹೃದಯರಿಗೆ ನಿರ್ವಂಚನೆಯಿಂದ ಬಿತ್ತರಿಸಿರುವುದು ತಾರಿಣಿಯವರ ಗ್ರಹಣ ಸಾಮರ್ಥ್ಯವನ್ನು ತೋರಿಸುತ್ತದೆ.

[೧] ಕುವೆಂಪು ಸಮಗ್ರ ಕಾವ್ಯ, ಸಂ.೨ ಪುಟ ೨೩೫.

೪ – ಸಾಹಿತ್ಯ ಸ್ಫೂರ್ತಿ ಮತ್ತು ಕುವೆಂಪು

ಕುವೆಂಪು ತಮ್ಮ ಬಲಾಢ್ಯ ಭಾವನೆಗಳಿಂದ ಅಭಿವ್ಯಕ್ತಿಪಡಿಸಿದ ಸಾಹಿತ್ಯ ಅಪೂರ್ವ. ಕುವೆಂಪುರವರ ಸಾಹಿತ್ಯ ಸೃಜನೆಗೆ ಹಲವಾರು ಸ್ಫೂರ್ತಿದಾಯಕ ಸಂದರ್ಭಗಳು, ಸನ್ನಿವೇಶಗಳು ಎಡೆಮಾಡಿಕೊಟ್ಟಿವೆ. ನಿತ್ಯ ನಿರಂತರವಾಗಿ ಭಾವುಕರಾಗಿಯೇ ಇರುತ್ತಿದ್ದ ಕುವೆಂಪುರವರು ಸಾಹಿತ್ಯ ಸೃಜನೆಗೆ ಹೆಚ್ಚು ಸ್ಫೂರ್ತಿಯನ್ನು ಪಡೆದದ್ದು ಮಲೆನಾಡಿನ ನಿಸರ್ಗದ ಮಡಿಲಿನಲ್ಲಿ ಅದಕ್ಕಾಗಿಯೇ ಅವರು 'ಕಾಡಿನಕವಿ'; ಅರ್ಥಾತ್ ಪ್ರಕೃತಿ ಕವಿ. ಅವರು ನಾಡಿನ ಜೀವನದಿಂದ ಬೇಸತ್ತವರು. ಅವರಿಗೆ ವನರಾಶಿಯಲ್ಲಿ ಮೈಮರೆಯುವುದು ಅನಂತ ಆನಂದವನ್ನು ನೀಡುತ್ತದೆ. 'ಶ್ರೀ ರಾಮಾಯಣ ದರ್ಶನಂ' ಕೃತಿಯಲ್ಲಿ ಶ್ರೀರಾಮನಿಂದ ಆಡಿಸಿರುವ ಮಾತುಗಳು ಅವರ ಮನೋಧರ್ಮಕ್ಕೆ ಸಾಕ್ಷಿಯನ್ನು ಒದಗಿಸುತ್ತವೆ.

> "ಗುರುದೇವ,
> ನಿಮ್ಮ ಕರುಣೆಯಿನೆಮಗೆ ಲಭಿಸಿತೀ ವನಸುಖಂ.
> ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ
> ಈ ವನ್ಯ ಸಂಸ್ಕೃತಿಯ ಮುಂದೆ?"[೧]

ಹೀಗೆ ಕುವೆಂಪುರವರ ಸಾಹಿತ್ಯ ರಾಶಿಯಲ್ಲಿ ಪ್ರಕೃತಿಯ ಪ್ರಭಾವ ಬಹಳಷ್ಟಿದೆ. ಬೇರೆ ಬೇರೆ ಕೃತಿಗಳನ್ನು ಓದಿಕೊಂಡು ಕೂಡ ಹಲವು ರೀತಿಯಲ್ಲಿ ಸ್ಫೂರ್ತಿಯನ್ನು ಪಡೆದುಕೊಂಡಿದ್ದಾರೆ. ಸಧ್ಯಕ್ಕೆ ನಾವು ಇಲ್ಲಿ ವಿವೇಚನೆಗೆ ಗುರಿಪಡಿಸಬೇಕಾಗಿರುವ ವಿಷಯವೆಂದರೆ ಕುವೆಂಪು ಅವರು ತಮ್ಮ ಕೌಟುಂಬಿಕ ವಲಯಕ್ಕೆ ಸಂಬಂಧಪಟ್ಟ ಹಲವು ಸಂದರ್ಭಗಳಲ್ಲಿ ಸ್ಫೂರ್ತಿಗೊಂಡು ಕವನ ರಚಿಸಿರುವುದು. ಆ ಸಂದರ್ಭ ಸನ್ನಿವೇಶದಲ್ಲಿ ಹೊರ ಹೊಮ್ಮಿರುವ ಕವನಗಳು ಸ್ವಾರಸ್ಯಕರ. ಉದಯರವಿ ಕುಟುಂಬಕ್ಕೆ ಸೀಮಿತಗೊಂಡಂತೆ ಅವರು ರಚಿಸಿರುವ ಕವನಗಳಲ್ಲಿ ಮೊದಲಿಗೆ ತಾಯಿಯ ಬಗ್ಗೆ ಅವರು ಬರೆದಿರುವ ಕವನವನ್ನು ಸವಿಯೋಣ.

> "ಅಮ್ಮನ ಮಡಿಲೊಳು ಮಲಗಿರುವೆನಗೆ
> ಗುಮ್ಮನ ಭಯವಿಹುದೇನಣ್ಣಾ
> ಅಮೃತದ ಹೊಳೆಯೊಳು ತೇಲುವ ನನಗೆ
> ಮೃತ್ಯುವ ಭಯವಿಹುದೇನಣ್ಣಾ?"[೨]

---

[೧] 'ಶ್ರೀ ರಾಮಾಯಣದರ್ಶನಂ', ಪುಟ ೪೪.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೨೪೯.

ತಾಯಿಗೆ ಮೊರೆ

"ಕೇಡನೆಲ್ಲ ಭಕ್ಷಿಸು;
ಕಿವಿಯ ಹಿಂಡಿ ಶಿಕ್ಷಿಸು;
ರೆಟ್ಟೆ ಹಿಡಿದು ರಕ್ಷಿಸು;
ಕೃಪಣೆ ಯಾಗಬೇಡ, ಅಮ್ಮ
ಓ ಕೃಪಾ ಕಟಾಕ್ಷಿಸು!"[೧]

ಕುವೆಂಪು ಅವರು ಬರೆದಿರುವ ಈ ಕವನ ಅಧ್ಯಾತ್ಮದ ಮಾರ್ಗದಲ್ಲಿ ತಾಯಿಗೆ ಮೊರೆಯಿಡುತ್ತಿರುವ ಕವನವಾಗಿದೆ ಎನಿಸುತ್ತಿದೆ. ಕುವೆಂಪು ತಾಯಿಯನ್ನು ಬಹಳ ಬೇಗ ಕಳೆದುಕೊಂಡವರು. ಅವರಿಗೆ ತಾಯಿಯ ಮೇಲಿನ ಅಭಿಮಾನ, ಪ್ರೀತಿಗಳು ಅಪಾರ. ಮತ್ತೆ ತಾಯಿಯ ಪ್ರೀತಿಯನ್ನು ಅವರು ನೋಡಿದ್ದು, ತಮ್ಮ ಮಡದಿ ಹೇಮಾವತಿಯವರ ಮೂಲಕ ತಮ್ಮ ಮಡದಿಯವರಿಂದ ಸ್ಫೂರ್ತಿಗೊಂಡು ಅವರು ಬರೆದ ಕವನಗಳು ಸಾಕಷ್ಟು. ಕುವೆಂಪು ಅವರೇ ಹೇಳಿಕೊಳ್ಳುವಂತೆ ಅವರ ಮಡದಿಯ ಮೇಲೆ ರಚಿತವಾಗಿರುವ ಕವನಗಳು – 'ಚಂದ್ರಮಂಚಕೆ ಬಾ ಚಕೋರಿ', 'ಜೇನಾಗುವ', 'ಅನುತ್ತರಾ', 'ಷೋಡಶಿ' – ಎಂಬ ಕವನ ಸಂಕಲನಗಳಲ್ಲಿ ತುಂಬಿಕೊಂಡಿವೆ. ಅವು ಪ್ರೀತಿಗೆ, ಮುನಿಸಿಗೆ, ವಿರಹಕ್ಕೆ, ಕಾಮಕ್ಕೆ - ಹೀಗೆ ಹಲವು ಎಳೆತನ, ಯೌವನ, ಮಧ್ಯವಯಸ್ಸು, ವೃದ್ಧಾಪ್ಯದ ವಯೋಮಾನಕ್ಕೆ ಅನುಗುಣವಾಗಿ ರಚಿತವಾಗಿವೆ. ಅವರ 'ಚಂದ್ರ ಮಂಚಕೆ ಬಾ ಚಕೋರಿ', ಕವನ ಸಂಕಲನವನ್ನು ತಮ್ಮ ಮಡದಿಗೆ ಅರ್ಪಣೆ ಮಾಡಿದ್ದಾರೆ. ಅದು ಹೀಗೆ–

"ನನ್ನ ಜೀವನ ಲಕ್ಷ್ಮಿಗೆ
ನನ್ನ ಹೃದಯದ ವಾಣಿಗೆ
ಪ್ರೇಮದೀ ಕೃತಿ ಕಾಣಿಕೆ
ಚೆಲುವಿನೊಲವಿನ ರಾಣಿಗೆ

ಆನಂದದೀ ಕೇಂದ್ರಕೆ!
ಸೌಂದರ್ಯದೀ ನೇಮಿಗೆ
ರಸ ತಪಸ್ಯೆಯ ಕಾಣಿಕೆ
ಗೃಹ ತಪಸ್ವಿನಿ ಹೇಮಿಗೆ!"

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೨೯೧.

ಅರ್ಧಾಂಗಿಯಾದ ಹೇಮಾವತಿಯವರು ಕುವೆಂಪು ಅವರಿಗೆ ಒಲವಿನ ರಾಣಿ, ಮಡದಿಯ ಮೇಲೆ ಅವರು ಇಟ್ಟಿದ್ದ ಪ್ರೀತಿಗೆ ಎಣೆ ಮಿಗಿಲಿಲ್ಲ. ಅಂತೆಯೇ ಇವರಿಬ್ಬರ ಪ್ರೀತಿಯ ಸಂಕೇತಗಳಾಗಿ ಹೊಮ್ಮಿದ ಮಕ್ಕಳ ಮೇಲೆ ಕುವೆಂಪು ಬರೆದ ಕವನಗಳು ಬಹಳಷ್ಟು. ಮಹಾ ಕವಿಯೊಬ್ಬನಿಗೆ ದೊರೆಕೊಳ್ಳುವ ಭಾವ ಸಮೃದ್ಧಿಯಷ್ಟೂ ಕೂಡ ಕುವೆಂಪು ಅವರಿಗೆ ಲಭಿಸಿತ್ತು. ಅವರು ತಮ್ಮ ಮಗ ಕೋಕಿಲೋದಯ ಚೈತ್ರ ಅವರನ್ನು ಕುರಿತು ಈ ರೀತಿ ಕವನ ಬರೆಯುತ್ತಾರೆ.

"ತೇಜಸ್ವಿ ಸೋದರನೆ,
ಹೇಮಾಂಗಿಯ ತನೂಭವನೆ, ಹೇ ನನ್ನಾತ್ಮ
ನವ್ಯತಾ ದೇವತಾ ಪ್ರತ್ಯಕ್ಷ ರೂಪಿ, ಓ
ಕೋಕಿಲೋದಯ ಚೈತ್ರ, ಹರುಸುವೆನು ಹೆಸರಿಟ್ಟು
ಹೆಸರಿನ ಹಿರಿಮೆ ಉಸಿರಿಗೂ ಬರಲಿ ಎಂದೊಲಿದು
ಬಯಸಿ; ತೊಟ್ಟಿಲಾಗಲಿ ನಿನಗೆ ಉಪನಿಷತ್ತಿನ
ದಿವ್ಯ ಸಂಸ್ಕೃತಿಯ ಋಷಿದರ್ಶನಂ. ಸಕಲ ಭೂ
ಭಾಗಗಳ ಮಾನವರ ಉದ್ಧಾರ ಸಾಹಸದ
ಶತಮಾನ ಕೃತಿಗಳ ತಪಃ ಫಲಂ ನಿನಗಕ್ಕೆ
ಸ್ತನ್ಯ ಪೀಯೂಷ ಪಾನಂ. – . . . .
. . . ."[೧]

ಕುವೆಂಪು ಅವರು ಪ್ರತಿ ಸಂದರ್ಭವನ್ನು ತಮ್ಮ ಭಾವ ಪ್ರಪಂಚದಲ್ಲಿ ದುಡಿಸಿಕೊಂಡವರು. ದಿನನಿತ್ಯ ತಮ್ಮ ಬದುಕಿನ ಸುತ್ತ ಹೆಣೆದುಕೊಂಡಿರುವ ಸಂಬಂಧಗಳು ಅವರಿಗೆ ಅವರ ಕವನಕ್ಕೆ ಸ್ಫೂರ್ತಿ. ಮಳೆಗರೆಯುವ ಮೋಡಗಳನ್ನು ಕುರಿತು ತಮ್ಮ ಮಗನ ತೋಟ (ತೇಜಸ್ವಿ ಅವರದು) ಕ್ಕೆ ಹೋಗಿ, ಅಲ್ಲಿ ಕಾಫಿ ತೋಟಕ್ಕೆ ನೀರಿನ ಅಗತ್ಯವಿದೆ ಎಂದು ಕವನದ ಮೂಲಕ ಹೇಳುತ್ತಾರೆ.

"ಓಡಿ ಮೋಡಗಳೆ ಚಿತ್ರಕೂಟಕ್ಕೆ
ಬೇಕು ಮಳೆಯ ಕೃಪೆ ಕಾಫಿ ತೋಟಕ್ಕೆ:
ಅಲ್ಲಿ ನಿಮ್ಮೊಡನೆ ಮಕ್ಕಳಾಟಕ್ಕೆ
ಇಹಳು ಸುಸ್ಮಿತಾ ಚೆಲ್ವು ನೋಟಕ್ಕೆ !"[೨]

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೯೮೮.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೩೧೦.

ಮಗ ಹೇಗೋ ಹಾಗೆ ಮಗಳು ಕೂಡ ಕವನಗಳಿಗೆ ಸ್ಫೂರ್ತಿಯೆ: ಇಂದುಕಲೆ ಮತ್ತು ತಾರಿಣಿಯರ ಮೇಲೆ ಬಹು ಸುಂದರವಾಗಿ ಕವನ ಹೆಣೆದಿದ್ದಾರೆ. ಜಗತ್ತಿನ ನಾನಾ ಕಷ್ಟ ಕೋಟಲೆಗಳನ್ನು ಕಂಡ ಕುವೆಂಪು ಅವರು ತಮ್ಮ ಮಗಳು ಇಂದುಕಲಾಳ ಜನನ ಸಂದರ್ಭದಲ್ಲಿ ಹೇಳುವ ಮಾತುಗಳು ಕವನವಾಗಿದೆ.

ಇಂದು ಕಲಾ

"ಆವ ಮುಖದಾವ ಸುಖದಾವ ದುಃಖಕೆ
ಇಂದುಕಲಾ ಬಂದಿಹೆ ನೀನಿಂದು ಪೃಥಿವಿಗೆ?
ಹಗೆತನದಾ ನೆತ್ತರಿಂದ ನಾಂದ ಪೃಥಿವಗೆ?
ಸ್ವಾಮ್ಯ ದಾಸ್ಯದಿರ್ಕುಳದಲಿ ನೊಂದ ಪೃಥಿವಿಗೆ?"[೧]

ಇಂತಹ ನೂರಾರು ಸಂದರ್ಭಗಳಲ್ಲಿ ಕವಿ ಕುವೆಂಪು ಹಲವಾರು ಕವನಗಳನ್ನು ಬಹು ಸೊಗಸಾಗಿ ರಚಿಸಿದ್ದಾರೆ. ಅಂತಹ ಒಂದೆರಡು ಸ್ವಾರಸ್ಯಗಳನ್ನು ತಾರಿಣಿಯವರ ನೆನಪಿನ ಬುತ್ತಿಯಿಂದ ಸವಿಯೋಣ.

"ತಂದೆಯವರು ವಾಕಿಂಗ್ ಮುಗಿಸಿ ಬಂದಾಗ ಇನ್ನೂ ನಾವು ಮಲಗಿದ್ದರೆ 'ಏಳಿ ಏಳಿ ಆಗಲೇ ಕಿಟಕಿಯಿಂದ ಎಳೆ ಬಿಸಿಲು ಬಂದಿದೆ. ನನ್ನ ವಾಕಿಂಗ್ ಮುಗಿಯಿತು. ಎಲ್ಲಾ ಕಾಫಿ ಕುಡಿಯೋಣ ಬನ್ನಿ' ಎಂದು ಎಚ್ಚರಿಸುತ್ತಿದ್ದರು. ಒಮ್ಮೆ ಕೂಗಿದಾಗ ನನಗೆ ಎಚ್ಚರವಾಗುತ್ತಿರಲಿಲ್ಲ. ಹಾಗೇ ಅತ್ತ ಇತ್ತ ಹೊರಳಿ ಮತ್ತೆ ನಿದ್ದೆಗೆ ಸರಿಯುತ್ತಿದ್ದೆ. ಅದನ್ನು ಗಮನಿಸಿ ಮತ್ತೆ ತಂದೆಯವರು ಎಚ್ಚರಿಸುವ ಪ್ರಯತ್ನದಲ್ಲಿ 'ನೋಡಕ್ಕಾ ಹೇಗೆ ಬಿಸಿಲು ಬಂದಿದೆ ಏಳು, ಎಂದು ಹೇಳಿ

ಕೋಟಿ ಕೋಟಿ ದೂರದಿಂದ
ಹೊಂಬಿಸಿಲಿದು ಬಂದಿದೆ;
ಸೂರ್ಯ ದೇವನಿಂದ, ಕಂದ
ಚುಂಬನವನು ತಂದಿದೆ!
ಪೂರ್ವದುದಯ ಗಿರಿಯನೇರಿ,
ಕಂದರಗಳನಿರದೆ ಹಾರಿ
ಸಾಂದ್ರ ವಿಪಿನಗಳನು ತೂರಿ

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೬೧.

ಹಸುಳೆ ಬಿಸಿಲು ಬಂದಿದೆ;
ಕಂದ, ಮಿಹಿರ ದೇವನಿಂದ,
ಮಿಸುನಿ ಕೃಪೆಯ ತಂದಿದೆ'.

ಎಂದು ರಾಗವಾಗಿ ಹೇಳುತ್ತಾ ತಮ್ಮ ಕೋಟನ್ನು ತೆಗೆದು ಅವರು ಮಲಗುವ ಮಂಚದ ಮೇಲೆ ಇಟ್ಟು, ಪಕ್ಕದಲ್ಲಿ ಇದ್ದ ದೇವರ ಮನೆಗೆ ಹೋಗಿ ಅಲ್ಲಿಯೂ ಕಿಟಕಿ ತೆರೆದು ಬಿಸಿಲು ಬೀಳುವಂತೆ ಮಾಡುತ್ತಿದ್ದರು. ಅನಂತರ ಬಂದು ಕಾಫಿಗೆ ಹೋಗಲು ಮಂಚದ ಮೇಲೆ ಇಟ್ಟಿದ್ದ ಟವೆಲ್ಲನ್ನು ತೆಗೆದುಕೊಳ್ಳುವಾಗ ನಾನು ಎಚ್ಚರಗೊಂಡನೇ ಎಂದು ಗಮನಿಸಿ, ಹಾಗೆಯೇ ಮಲಗಿದ್ದರೆ 'ಏನು ಬೆಚ್ಚಗೆ ಮಲಗಿರುವೆಯಾ ಏಳುವುದಿಲ್ಲವೇ? ಏಳಮ್ಮ ಏಳು ಓ ತಾಯಿ ಕುಂಡಲಿನಿ ಏಳು ಆನಂದ ಮಯಿ ಏಳು ಬ್ರಹ್ಮಾನಂದ ಮಯಿ' ಎಂದು ಹಾಡಿ ಎಚ್ಚರಿಸುತ್ತಿದ್ದರು."[೧] ತಾರಿಣಿಯವರು ಹಂಚಿಕೊಳ್ಳುವ ಈ ನೆನಪಿನಿಂದ ಕುವೆಂಪು ಅವರು ಸದಾ ಭಾವವಲಯದಲ್ಲೇ ವಿಹರಿಸುತ್ತಿದ್ದರೂ ಕೌಟುಂಬಿಕ ಹೊಣೆಗಾರಿಕೆಯನ್ನು ಈ ರೀತಿ ನಿರ್ವಹಿಸುವ ಜಾಣ್ಮೆ ಅವರಿಗಿತ್ತು ಎಂದು ತಿಳಿಯುತ್ತದೆ. ಮಗಳನ್ನು ಎಚ್ಚರಿಸಲು ಬೇಸರಿಸದೆ ಅಲ್ಲೇ ಒಂದು ಕವನ ಕಟ್ಟಿ ಹಾಡಿ ಆನಂದ ಪಡುತ್ತಾ ಮಗಳನ್ನು ತಾಯಿ ಎಂದು ಕರೆದು ಎಚ್ಚರಿಸುವ ಸಾಹಿತ್ಯಕ ಉಕ್ತಿಗಳು ನಾಟಕೀಯವಲ್ಲ; ಅವರ ವ್ಯಕ್ತಿತ್ವದ ಶ್ರೀಮಂತಿಕೆಗೆ ದ್ಯೋತಕ.

ಕುವೆಂಪು ಅವರದು ದೈತ್ಯ ಪ್ರತಿಭೆ. ಅವರು ಸ್ಫೂರ್ತಿಗೊಳ್ಳುವ ವಿಷಯವು ಅವರಿಗೆ ಕಿರಿದಲ್ಲ, ಅದರಲ್ಲೇ ಹಿರಿದು ಆನಂದವನ್ನು ಕಾಣುವ ಕವಿ ಹೃದಯ ಅವರದು. ಅವರು ಬಣ್ಣಿಸುವ ರೀತಿ ಕಲ್ಪನೆಯ ಹಾದಿಯಲ್ಲಿದ್ದರೂ ವಾಸ್ತವದಿಂದ ಜನ್ಮ ಪಡೆದು ಜೀವಂತವಾಗಿರುತ್ತದೆ. ಅವರ ಸಾಹಿತ್ಯವನ್ನು ಅವರು ಹೇಳಿದಂತೆಯೇ ದರ್ಶಿಸಿದರೆ ಬಹುಶಃ ಕವಿ ಹೃದಯದ ಭಾವವನ್ನು ಭಾವಿಸಲು, ಆಸ್ವಾದಿಸಲು ಕಷ್ಟವಾಗದು. ಆ ಹೃದಯದಂತೆ ಅಣುವಿನಲ್ಲಿ ಅನಂತವನ್ನು ಕಾಣುವ ಚೇತನ ನಮ್ಮದಾಗುತ್ತದೆ.

ಕವಿ ಕುವೆಂಪು ತಮ್ಮ ಮಗಳು ನೇಯ್ದ ಕಸೂತಿಯನ್ನು ಕಂಡು ಸ್ಫೂರ್ತಿಗೊಂಡು ಬರೆದ ಕವನವು ಅವರ ಆಸ್ವಾದನೆಯ ಸೂಕ್ಷ್ಮವನ್ನು ಪರಿಚಯಿಸುತ್ತದೆ. ಆ ಸಂದರ್ಭದ ಕವನವನ್ನು ತಾರಿಣಿಯವರು ಹೀಗೆ ಮೆಲುಕು ಹಾಕಿದ್ದಾರೆ. "ತಂದೆಯವರು ತಮ್ಮ ಅರವತ್ತನೆಯ ಹುಟ್ಟಿದ ಹಬ್ಬದ ಸಂದರ್ಭದಲ್ಲಿ 'ಷಷ್ಟಿ ನಮನ' ಎಂಬ ಪುಸ್ತಕ ಹೊರತಂದರು. ಆ ದಿನ ಶುಭಾಶಯ ಹೇಳಲು ಬಂದ ಸ್ನೇಹಿತರಿಗೆ, ಶಿಷ್ಯರಿಗೆ ಪುಸ್ತಕ ಕೊಟ್ಟು

---

[೧] 'ಮಗಳು ಕಂಡ ಕುವೆಂಪು', ಪುಟ ೨೭.

ಕಳುಹಿಸುತ್ತಿದ್ದರು. ಎರಡು ದಿನ ಮೊದಲು ಪುಸ್ತಕ ಅಚ್ಚಿನಿಂದ ಬಂದಾಗ ನನಗೂ ಒಂದು ಪುಸ್ತಕ ಆಶೀರ್ವಾದ ಬರೆದು ಕೊಟ್ಟಿದ್ದರು. ಅದನ್ನು ನಾನು ನನ್ನ ಅಮೂಲ್ಯ ಸಾಮಾನು ಇಟ್ಟುಕೊಳ್ಳುತ್ತಿದ್ದ, ತಂದೆಯವರೆ ಕೊಟ್ಟಿದ್ದ, ಅವರು 'ಶ್ರೀ ರಾಮಾಯಣ ದರ್ಶನಂ' ಬರೆಯುವಾಗ ಹಸ್ತಪ್ರತಿ ಇಟ್ಟುಕೊಳ್ಳುತ್ತಿದ್ದ ಸೂಟ್‌ಕೇಸ್ ಒಳಗೆ ಭದ್ರವಾಗಿ ಇಟ್ಟೆನು. ಆ ಸೂಟ್‌ಕೇಸ್ ಅಪ್ಪ ಅಮ್ಮ ಮಲಗುತ್ತಿದ್ದ ಮಂಚದ ಅಡಿ ಇಟ್ಟಿದ್ದೆ. ಹುಟ್ಟಿದ ಹಬ್ಬ ಕಳೆದು ನಾಲ್ಕೈದು ದಿನಗಳ ಮೇಲೆ ಪುಸ್ತಕ ಓದಲು ತೆಗೆದುಕೊಂಡೆ. ಮೊದಲ ಪುಟ ತೆರದದ್ದೇ ಕಾದಿತ್ತು ಒಂದು ದೊಡ್ಡ ಅಚ್ಚರಿ, ನೋಡಿ ಬೆರಗಾದೆ. ತಂದೆಯವರು ನನಗೆ ಕೊಟ್ಟ ಆ ಪುಸ್ತಕದ ಮುಂದಿನ ಪುಟದಲ್ಲಿ 'ತಾರಿಣಿಯ ಕಸೂತಿ' ಎಂಬ ಕವನ ಗುಂಡಾಗಿ ಬರೆದು ಇಟ್ಟಿದ್ದಾರೆ. ಆ ಪುಸ್ತಕ ಅಲ್ಲಿ ಇದೆ ಎಂದು ಹೇಗೆ ಪತ್ತೆ ಹಚ್ಚಿದರೋ ತಂದೆಯವರು ಗೊತ್ತಾಗಲಿಲ್ಲ. ಆ ಮೇಲೆ ತಂದೆಯವರನ್ನೇ ಕೇಳಿದಾಗ ಹೇಗೋ ನನಗೆ ಗೊತ್ತಾಯಿತು ಎಂದು ನಕ್ಕರು. ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಮುಂದೆಯೂ ಸಿಗಲಿಲ್ಲ. ಇಂದಿಗೂ ಹೇಗೆ ತಂದೆಯವರು ಗೊತ್ತಾಗದಂತೆ ಆ ಪುಸ್ತಕ ಹುಡುಕಿ ತೆಗೆದು ಯಾವಾಗ ಕವನ ಬರೆದಿಟ್ಟರು ಎಂಬ ರಹಸ್ಯ ಮರೆಯಲಾಗದ ರಹಸ್ಯವಾಗಿ ಉಳಿಯಿತು."[೧]

ತಾರಿಣಿಯ ಕಸೂತಿ

"ಸಾಗರ ಸಾಗರ ರಸದ ನಯಾಗರ
ಧುಮ್ಮಿಕ್ಕಿದ ವೋಲಾಗುತಿದೆ!
ತಾರಿಣಿಯಾ ಕುಶಲ ಕಲಾ ಕಸೂತಿಗೆ
ಸೌಂದರ್ಯ ವಿಭೂತಿಗೆ
ಸ್ವರ್ಗ ಶ್ರೀ
ಮುಡಿ ಬಾಗುತಿದೆ!
ಆಗಿದೆ ಜಗಲಿಯೆ ಹಕ್ಕಿಯ ಕಾಶಿ!
ಆಗಿದೆ ಬಾಗಿಲೆ ಹೂವಿನ ರಾಶಿ!
ಹೊಂಗನಸಿಳಿದಿದೆ ನಿಜವನೆ ಮಾಸಿ,
'ಉದಯರವಿಗೆ ನಂದನವನೆ ಬೀಸಿ!"[೨]

---

[೧] 'ಮಗಳು ಕಂಡ ಕುವೆಂಪು', ಪುಟ ೮೬.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೩೦೫.

ಕವಿ ಮನಸ್ಸು ಸುಖದಲ್ಲೂ, ದುಃಖದಲ್ಲೂ, ಹಗಲಲ್ಲೂ, ರಾತ್ರಿಯಲ್ಲೂ, ನಿರಂತರ ಮಿಡಿಯುತ್ತದೆ. ತಾನು ಆಸ್ವಾದಿಸಿದ್ದನ್ನು ಅಭಿವ್ಯಕ್ತಿ ಪಡಿಸುವ ಕಾತರದಿಂದ ನರಳುತ್ತದೆ, ಕಾಯುತ್ತದೆ. ಕುವೆಂಪು ಅವರು ತಮ್ಮ ತಂಗಿ ಮನೆಗೆ ಹೋಗಿದ್ದಾಗ ತಮ್ಮ ತಂಗಿ ಮನೆಯ ಬಗ್ಗೆಯೇ ಒಂದು ಕವನ ಬರೆದಿದ್ದು ತಂಗಿಯ ಮೇಲಿನ ಪ್ರೀತಿಯ ಪ್ರತೀಕ.

"ತಂಗಿಯ ಮನೆಃ ಏನು ತಂಪು!
ಹಸುರು ಏನೊ ಃ ಕೊಳ್ಳಿ ಬೈಲು !
ಆದರೂ
ಮನಕೆ ಮೈಗೆ ಜೀವಕೆಲ್ಲ
ನಡು ಹಗಲಲಿ ಸುಡು ಬಿಸಿಲಲಿ
ಹೊಂಗೆಯ ನೆರಳೆಂತೂ ಅಂತೆ,
ತಂಗಿಯ ಮನೆ – ತಂಪು!"[೧]

'ಉದಯರವಿ' ಮನೆ ಕವಿ ಕುವೆಂಪುವಿಗೆ ಸಾಹಿತ್ಯ ಸೃಷ್ಟಿಯ ವಲ್ಮೀಕವೇ ಆಗಿತ್ತು. ಕುವೆಂಪು ಅವರ ಜೀವನದಲ್ಲಿ 'ಉದಯರವಿ'ಯು ಒಂದು ಅನನ್ಯ ಪಾತ್ರವನ್ನೇ ವಹಿಸಿದೆ. ಅದರೊಡಲಿನ ಬಂಧುಗಳೆಲ್ಲಾ ಕುವೆಂಪು ಸಾಹಿತ್ಯ ಸೃಜನೆಯ ಸ್ಫೂರ್ತಿ ಚಿಲುಮೆಗಳು. 'ಉದಯರವಿ'ಗೆ ಶ್ರೀ ವಿನೋಬಾಜಿ ಅವರು ಬಂದಾಗ ಕುವೆಂಪು ಅವರು ಉದಯರವಿ ಮನೆ ಸಾರ್ಥಕವಾಯಿತೆಂದು ಹರುಷ ಪಟ್ಟರು. ಆ ಮಹಾತ್ಮನು ಬಂದು ಹೋದ 'ಉದಯರವಿ' ಪುಣ್ಯ ಕ್ಷೇತ್ರವೆಂದು ಕುವೆಂಪು ಅಭಿಪ್ರಾಯ

'ಉದಯರವಿ' ಯಲ್ಲಿ ಸರ್ವೋದಯ ರವಿ!

"ಹೇ ಜಗದ್ ದೀನ ಬಂಧು,
ಮನೆಯೆ ಕ್ಷೇತ್ರವಾಯಿತಿಂದು
'ಉದಯರವಿ'ಗೆ ನೀನು ಬಂದು;
ಕೆರೆಯೆ ಆಯ್ತು ಮಹಾ ಸಿಂಧು,
ಪೂಜ್ಯ ಓ ತಪೋಧನ!

ಪಾದಯಾತ್ರೆಯಮೃತ ರೇಖೆ
ಮನೆಯ ಮೇಲೆ ಹಾಯ್ದುದಕ್ಕೆ

---
[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೨೮೬.

ನಿನಗನಂತ ವಂದನಾ,

ಮುಹುರನಂತ ವಂದನಾ!"[೧]

ಕುವೆಂಪು ಜೀವನದ 'ಉದಯರವಿ' ಕುಟುಂಬಕ್ಕೆ ಸಂಬಂಧಪಟ್ಟಂತೆ ಅವರು ಇನ್ನೂ ಹಲವು ಕವನಗಳನ್ನು ಸ್ವಾರಸ್ಯಕರ ಸಂದರ್ಭಗಳಲ್ಲಿ ರಚಿಸಿದ್ದಾರೆ. ಉದಾಹರಣೆಗೆ 'ಬ್ರಾಹ್ಮ ನಾಯಿ–ಶೂದ್ರಕೋಳಿ', 'ನನ್ನ ಮನೆ', 'ಸೌಂದರ್ಯಯಾಜಿ', 'ಪುಷ್ಪಭಗವಾನ್' ಮುಂತಾದವು. ಅವರು 'ಉದಯರವಿ'ಯನ್ನು ತೀರ್ಥಕ್ಷೇತ್ರವೆಂದೇ ತಿಳಿದಿದ್ದರು. ನಿಜಕ್ಕೂ ಅದು ತೀರ್ಥ ಕ್ಷೇತ್ರವೇ ಸರಿ. ಜಗತ್ತಿನ ಎಲ್ಲಾ ಕವಿ ಮನಸ್ಸುಗಳು ಅಲ್ಲಿಗೆ ಆವಾಹನೆಯಾಗಿದ್ದವು. ಅವುಗಳ ಪುಣ್ಯ ಸಂಸರ್ಗದಿಂದ ಕುವೆಂಪು ಅವರ ಸಾಹಿತ್ಯ ಸ್ಫೂರ್ತಿಗೆ ಬಡತನವಿರಲಿಲ್ಲ.

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೪೦೭.

೫–ವಿಜ್ಞಾನ ಮತ್ತು ವೈಚಾರಿಕತೆಯ ಪಾಠ

ಮತದಿಂದ ಪಾರಾಗು: ಅಧ್ಯಾತ್ಮ ಶರಣಾಗು!

ಮೌಢ್ಯಕ್ಕೆ ದೂರಾಗು: ವಿಜ್ಞಾನ ಮತಿಯಾಗು!

ಕುವೆಂಪು ಅವರ ಆಲೋಚನೆ, ಮಾತು, ಬರವಣಿಗೆಗಳು ವಿಜ್ಞಾನ ದೃಷ್ಟಿಯನ್ನೇ ಆಧರಿಸಿರುತ್ತಿದ್ದುವು. ಅವರ ವಿವೇಚನೆ ಪ್ರಾಯೋಗಿಕ ಬದುಕಿನ ಸಾರ್ಥಕತೆಯನ್ನು ಪ್ರತಿನಿದಿಸುತ್ತಿತ್ತು. ವಿಜ್ಞಾನದ ಜೀವನ, ವೈಚಾರಿಕತೆಯ ಜೀವನವಾಗುತ್ತದೆ. ಯಾಕೆ, ಹೇಗೆ, ಎಲ್ಲಿಂದ, ಯಾರಿಂದ ಎಂಬ ಪ್ರಶ್ನೆಗಳು ಮಾನವ ಜೀವನದಲ್ಲಿ ಸದಾ ಮನೆ ಮಾಡಿರಬೇಕು. ಪ್ರಕೃತಿ ಸಂಬಂಧವಾದ ವೈಜ್ಞಾನಿಕ ತಿಳಿವಳಿಕೆ ಪ್ರತಿಯೊಬ್ಬರಿಗೂ ಅತ್ಯಗತ್ಯ ಮತ್ತು ಅನಿವಾರ್ಯ. ವಿಜ್ಞಾನದ ಕೊಡುಗೆ ಪ್ರಕೃತಿಯ ನೇರ ಕೊಡುಗೆ. ಅದರ ಸದ್ಬಳಕೆಯೆಂದರೆ ಪ್ರಕೃತಿಯೆಡೆಗೆ ನಲ್ಮೆಯ ಶುಭಾಶಯ ಹೇಳಿದಂತೆ. ಅದೇನಾದರೂ ದುರ್ಬಳಕೆಗೆ ತಿರುಗಿದರೆ ಪ್ರಕೃತಿಯ ಬಳುವಳಿಯಾದ ವಿಜ್ಞಾನದಿಂದಲೇ ಮನುಕುಲದ ಮೃತ್ಯು. ಅದಕ್ಕಾಗಲೇ ಇತಿಹಾಸದಲ್ಲಿ ಹಲವು ಉದಾಹರಣೆಗಳು ರಾರಾಜಿಸುತ್ತಿವೆ. 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬ ವಾಕ್ಯವನ್ನು ನಾವು ಎಂದೂ ಮರೆಯುವಂತಿಲ್ಲ. ವಿಜ್ಞಾನದ ಕೊಡುಗೆ ಪ್ರಕೃತಿಯ ಜೊತೆಯಲ್ಲಿ ನಡೆಯಬೇಕು. ವಿರುದ್ಧ ದಿಕ್ಕಿನಲ್ಲಲ್ಲ ಎಂಬ ಅರಿವು ನಮಗಿರಬೇಕು. ಪ್ರಕೃತಿಯ ವಿಜ್ಞಾನದ ಬಗ್ಗೆ ತಿಳಿವಳಿಕೆ ಬೇಕೇ ಬೇಕು. ಕುವೆಂಪು ಅವರು ಮಕ್ಕಳಿಗೆ ವಿಜ್ಞಾನದ ತಿಳಿವಳಿಕೆಯನ್ನು ನೀಡುತ್ತಿದ್ದುದು ಹೀಗೆ ಎಂದು ತಾರಿಣಿಯವರು ನೆನಪಿಸಿಕೊಳ್ಳುತ್ತಾರೆ.

"ಬೇಸಿಗೆಯ ಸಮಯದಲ್ಲಿ ತಣ್ಣನೆಯ ಗಾಳಿಗೆ ಸಂಜೆಯ ಹೊತ್ತು ಅಪ್ಪ ಅಮ್ಮ ಮನೆಯ ತಾರಸಿಯ ಮೇಲೆ ಕುಳಿತುಕೊಳ್ಳುತ್ತಿದ್ದರು. ತಂದೆಯವರು ಆಗ ಅನೇಕ ವಿಜ್ಞಾನದ ವಿಚಾರಗಳನ್ನು ನಮಗೆ ಹೇಳುತ್ತಿದ್ದರು. ಕತ್ತಲಾಗುತ್ತಾ ಶುಭ್ರ ಆಕಾಶದಲ್ಲಿ ನಕ್ಷತ್ರಗಳು ಚೆನ್ನಾಗಿ ಕಾಣುತ್ತಿದ್ದವು. ನಕ್ಷತ್ರಗಳು ಮತ್ತು ಗ್ರಹಗಳಿರುವ ವ್ಯತ್ಯಾಸ, ಅವುಗಳನ್ನು ಗುರುತಿಸುವ ಬಗ್ಗೆ, ಮಿಲ್ಕೀವೇ ಯಾವುದು? ಮಂಗಳ, ಬುಧ, ಶುಕ್ರ, ಗುರು ಮೊದಲಾದ ಗ್ರಹಗಳು ಎಲ್ಲಿ ಕಾಣಿಸುತ್ತವೆ. ಹೇಗೆ ಗುರುತಿಸುವುದು, ಹಾಗೆಯೇ ವೃಶ್ಚಿಕ ರಾಶಿ, ಸಪ್ತ ಋಷಿ ಮಂಡಲ, ಮೃಗಶಿರ ರಾಶಿ, ಸದರನ್ ಕ್ರಾಸ್, ಧ್ರುವ ನಕ್ಷತ್ರ ಮೊದಲಾದವನ್ನು ಗುರುತಿಸಲು ತೋರಿಸಿ ಕೊಡುತ್ತಿದ್ದರು. ಇದರೊಡನೆ ಗ್ರಹಣ ಹೇಗಾಗುವುದು? ಧೂಮಕೇತು ಎಂದರೇನು? ಇತ್ಯಾದಿ ವಿಚಾರಗಳು ಇರುತ್ತಿದ್ದವು. ಚಿಕ್ಕವರಿರುವಾಗ ಅವರು ಹೇಲಿ ಧೂಮಕೇತುವನ್ನು ನೋಡಿದ್ದನ್ನು

ಹೇಳಿದ್ದರು. ಅದು ಇಡೀ ಆಕಾಶದಲ್ಲಿ ತುಂಬ ದೊಡ್ಡದಾಗಿ ಹೇಗೆ ಕಾಣಿಸಿತು. ಅದರ ಬಾಲವಂತೂ ದಿಗಂತದಿಂದ ದಿಗಂತಕ್ಕೆ ಪೊರಕೆಯಂತೆ ಹರಡಿತ್ತು ಎಂದು ವಿವರಿಸಿದ್ದರು. ಮತ್ತೆ ನೀವೆಲ್ಲಾ ದೊಡ್ಡವರಾದಾಗ ಅರವತ್ತು ವರ್ಷಗಳ ನಂತರ ಅದು ಬಂದಾಗ ನೀವು ನೋಡಬಹುದು ಎಂದು ಹೇಳಿದ್ದರು. ಹಾಗೆಯೇ ಅರವತ್ತು ವರ್ಷದ ನಂತರ ಅದು ಕಾಣಿಸಿಕೊಂಡಾಗ ನಮ್ಮನ್ನು ರಾತ್ರಿಯಲ್ಲಿ ಎಬ್ಬಿಸಿ ತೋರಿಸಿದ್ದು, ನೆನಪಾಗುತ್ತದೆ. 'ನೋಡಿ ಈಗ ಧೂಮಕೇತು ಗಾತ್ರ ಚಿಕ್ಕದಾಗಿದೆ. ಬಾಲವಂತೂ ತುಂಬಾ ತುಂಡಾಗಿದೆ. ಇನ್ನೂ ಆಕಾಶದಲ್ಲಿ ಅಲೆಯುತ್ತಲೇ ಇದೆ.' ಎಂದು ತೋರಿಸಿದರು."[೧]

ಹೊಸ ವಿಸ್ಮಯಗಳನ್ನು ಕುರಿತು ಕುವೆಂಪು ಅವರ ಕುತೂಹಲ ಹೆಚ್ಚು ಕೆಲಸ ಮಾಡುತ್ತಿತ್ತು. ತಾವು ಕಂಡ ಪ್ರಕೃತಿ ವಿಚಿತ್ರಗಳನ್ನು ಇತರರಿಗೂ ತಿಳಿಸುವ ಕಾತರ ಅವರಲ್ಲಿ ಹೆಚ್ಚಿರುತ್ತಿತ್ತು. ಎಲ್ಲರಿಗೂ ವಿಜ್ಞಾನದ ತಿಳಿವಳಿಕೆ ಮೂಡಲಿ, ಕುತೂಹಲ ಬೆಳೆಯಲಿ ಎಂಬುದೇ ಅವರ ಆಶಯ. ವಿಜ್ಞಾನದ ತಳಹದಿಯ ಮೇಲೆ ದೇಶದ ಪ್ರಗತಿ ಆರೋಗ್ಯಕರವಾಗಿ ಸಾಗಲು ಸಾಧ್ಯವೆಂದುಕೊಂಡಿದ್ದರು. ಕುವೆಂಪು ಅವರು ಕಾಣುತ್ತಿದ್ದ ಪ್ರಕೃತಿಯಲ್ಲಿನ ಹೊಸ ವಿಚಿತ್ರಗಳನ್ನು ಕುಟುಂಬದವರೊಂದಿಗೆ ಹಂಚಿಕೊಳ್ಳುತ್ತಿದ್ದುದು ಹೀಗೆ. –"ಸಂಜೆ ಹೊತ್ತು ರತ್ನಾಕರ ಮಾವರೊಡನೆ ಸವಳಂಗ ರಸ್ತೆಯಲ್ಲಿ ಕಾಡಿನ ನಡುವೆ ಸಂಚಾರ ಹೋಗಿ ಬಂದರು. ಮನೆಯೊಳಗೆ ಬರುತ್ತಿದ್ದಂತೆ ನಮ್ಮನ್ನೆಲ್ಲಾ ಕರೆದರು. ಎರಡು ಕೈ ಸೇರಿಸಿ ಏನನ್ನೋ ಮರೆ ಹಿಡಿದು ನಿಂತಿದ್ದರು. 'ಏನೋ ತಮಾಷೆಯಿದೆ ನೋಡಿ ಬನ್ನಿ, ಏನೆಂದು ಊಹಿಸಿ? ಎಂದು ಕುತೂಹಲ ಕೆರಳಿಸಿದರು. ಯಾರೂ ಊಹಿಸಲು ಸಾಧ್ಯವಿರಲಿಲ್ಲ. ದೀಪ ಆರಿಸಿ ಕತ್ತಲೆ ಮಾಡಿ ಎಂದಾಗ ಎಲ್ಲರೂ ಮಿಣುಕುಹುಳು ಎಂದು ಕೂಗಿದೆವು. ಮಿಣುಕು ಹುಳ ಅಲ್ಲ ಎಂದು ಮರೆ ಮಾಡಿದ್ದ. ಕೈ ನಿಧಾನ ತೆಗೆದಾಗ ಸಣ್ಣ ಟಾರ್ಚ್ ಬಿಟ್ಟಂತೆ ಎರಡು ಬೆಳಕು ಹೊಳೆಯುತ್ತಿವೆ! ನಿಧಾನ ಬೆಳಕು ಕಡಿಮೆಯಾಗುತ್ತಿತ್ತು ಮತ್ತೆ ತುಂಬಾ ದೊಡ್ಡದಾಗುತ್ತಿತ್ತು. ಎಲ್ಲರೂ ಕುತೂಹಲದಿಂದ ನೋಡಿದೆವು. ಏನಿರಬಹುದೆಂದು ದೀಪ ಹಚ್ಚಿದೆವು. ನೋಡಿದಾಗ ಮೂರು ಅಂಗುಲ ಉದ್ದದ ಕಂಬಳಿ ಹುಳುವಿನಂತಹ ಹುಳ ಕಡ್ಡಿಯಲ್ಲಿರುವ ದೊಡ್ಡ ಎಲೆಯ ಮೇಲೆ ಅಂಟಿ ಕುಳಿತಿದೆ. ಅದರ ಮೈ ಮೇಲೆ ಕೂದಲು ಇರಲಿಲ್ಲ. ನೋಡಲು ವಿಕಾರವಾಗಿತ್ತು. ಕಣ್ಣು ದೊಡ್ಡ ದೊಡ್ಡದಾಗಿ ಹೊಳೆಯುತ್ತಿತ್ತು. ಅದರ ಕಣ್ಣಿಂದಲೇ ಆ ರೇಡಿಯಂ ತರದ ಬೆಳಕು ಹೊಮ್ಮುತ್ತಿತ್ತು.

[೧] 'ಮಗಳು ಕಂಡ ಕುವೆಂಪು', ಪುಟ ೧೪.

– ಹುಳು ಎಲ್ಲಿತ್ತು? ಹೇಗೆ ಸಿಕ್ಕಿತೆಂದು ಕೇಳಿದಾಗ ತಂದೆಯವರು ವಿವರಣೆ ಕೊಟ್ಟರು. 'ಸಂಚಾರ ಮುಗಿಸಿ ಹಿಂದಿರುಗುವಾಗ ಕತ್ತಲೆಯಾಯಿತು. ಕಾಡಿನ ಹತ್ತಿರ ಗಿಡದ ಒಂದು ಎಲೆಯ ಮೇಲೆ ನನಗೆ ಈ ಬೆಳಕು ಕಾಣಿಸಿತು. ನಾನು ಮೊದಲು ಮಿಣುಕು ಹುಳು ಎಂದು ಭಾವಿಸಿದೆ. ಆದರೆ ಹಾರುತ್ತಿಲ್ಲ ಕುಳಿತಲ್ಲೇ ಇದೆ ಎಂದು ಹತ್ತಿರ ಹೋದಾಗ ಈ ಹುಳದ ಕಣ್ಣಿಂದ ಬೆಳಕು ಬಂದಿದ್ದು ಗೊತ್ತಾಯಿತು. ಕಣ್ಣಿಂದ ಬೆಳಕು ಬಿಡುವ ಹುಳು ಇದುವರೆಗೂ ನಾನು ನೋಡಿಲ್ಲ. ನಿಮಗೆಲ್ಲ ತೋರಿಸೋಣವೆಂದು ಎಲೆ ಕಡ್ಡಿ ಸಮೇತ ಕಿತ್ತು ತಂದೆನು. ಎಲ್ಲರೂ ನೋಡಿದ ಮೇಲೆ ಗಿಡಕ್ಕೆ ಬಿಟ್ಟು ಬಿಡಿ' ಎಂದರು. ಮಕ್ಕಳೆಲ್ಲ ಕುತೂಹಲ ತಣಿಯುವಷ್ಟು ಹುಳುವನ್ನು ನೋಡಿದರು. ಮನೆಯಲ್ಲಿ ಎಲ್ಲರಿಗೂ ತೋರಿಸಿದರು."[೧]

ನೂತನ ಆವಿಷ್ಕಾರಕ್ಕೆ ಕುವೆಂಪು ಅವರಿಂದ ಮೆಚ್ಚುಗೆಯ ಮಾತುಗಳು ಸಿದ್ಧವಾಗಿರುತ್ತಿದ್ದವು. ಅವರ ಮನೋಭೂಮಿಕೆಯಲ್ಲಿ ಪ್ರತಿಗಾಮಿತನಕ್ಕೆ ಎಲ್ಲೂ ಎಡೆಯಿರಲಿಲ್ಲ. ವಿಜ್ಞಾನ ವಿಷಯದ ಸುದ್ದಿಗಳನ್ನು ಕುವೆಂಪು ಬಹು ಆಸಕ್ತಿಯಿಂದ ಓದುತ್ತಿದ್ದರು. ಮತ್ತು ಆಲಿಸುತ್ತಿದ್ದರು. ಈ ಬಗೆಗೆ ಅವರ ಮಗಳು ತಾರಿಣಿಯವರು ಈ ರೀತಿ ಹೇಳುತ್ತಾರೆ. "ತಂದೆಯವರು ಹಾರುವ ತಟ್ಟೆ, ಉಪಗ್ರಹ ಮುಂತಾದ ಸುದ್ದಿಗಳನ್ನು ಬಹು ಆಸಕ್ತಿಯಿಂದ ಓದುತ್ತಿದ್ದರು. ಉಪಗ್ರಹದಲ್ಲಿ ಜನರನ್ನು ಕಳುಹಿಸಿದ ಸುದ್ದಿ ಪತ್ರಿಕೆಯಲ್ಲಿ ಬಂದಿತ್ತು. ಆ ದಿನ ಅಪೋಲೋ ಹೆಸರಿನ ಜನರನ್ನು ಹೊತ್ತ ಅಮೇರಿಕಾ ಉಪಗ್ರಹ ಭೂಮಿಗೆ ಇಳಿಸುತ್ತಿದ್ದರು. ಇಳಿಯಿತೆಂದು ಸುದ್ದಿ ಓದಿದಾಗ ತಂದೆಯವರು 'ಪ್ರಪಂಚದ ಎಲ್ಲಾ ಜನರ ಪ್ರಾರ್ಥನೆ ನೆರವೇರಿತಲ್ಲಾ! ಮುಖ್ಯವಾಗಿ ಅವರ ಹೆಂಡತಿ ಮಕ್ಕಳ ಪುಣ್ಯ ಮತ್ತು ಪ್ರಾರ್ಥನೆಯಿಂದ ಕ್ಷೇಮವಾಗಿ ಹಿಂದಿರುಗಿದರು ಎಂದರು."[೨]

ಕುವೆಂಪು ಆಧುನಿಕತೆಯ ತಂತ್ರಜ್ಞಾನದ ಆಹ್ವಾನವನ್ನು ಮುಕ್ತವಾಗಿ ಸ್ವೀಕಾರ ಮಾಡುತ್ತಾರೆ ಎಂಬುದನ್ನು ಅವರ 'ಚಕ್ರ ಚರಣೆಗೆ ಸ್ವಾಗತ' ಎಂಬ ಕವನ ಸಾರುತ್ತದೆ. ಹೊಸ ಹೊಸ ಆಲೋಚನೆಗಳಿಂದ ಮಾನವ ಮನಸ್ಸು ನವೀಕರಣಗೊಳ್ಳಬೇಕು. ಸಾರ್ಥಕ ಆವಿಷ್ಕಾರಗಳನ್ನು ಒಪ್ಪಿಕೊಂಡು ಬದುಕಬೇಕು; ಅವೆಲ್ಲಾ ನಮ್ಮ ಬದುಕಿಗೆ ಹೊರತಲ್ಲ. ಹಳೆ ಚಿನ್ನದಿಂದಾದ ಹೊಸ ಒಡವೆಯಷ್ಟೇ ಅದು ಎಂಬುದು ಅವರ ಆಲೋಚನೆ. ಈ ವಿಚಾರದಲ್ಲಿ ಜರಡು ಎಂಬುದೇ ಇಲ್ಲವೆಂದು ಈ ಕವನದ ಸಾಲುಗಳನ್ನು ಪರಿಭಾವಿಸಿದರೆ ತಿಳಿಯುತ್ತದೆ.

---

[೧] 'ಮಗಳು ಕಂಡ ಕುವೆಂಪು', ಪುಟ ೩೨–೩೩.
[೨] 'ಮಗಳು ಕಂಡ ಕುವೆಂಪು', ಪುಟ ೩೪.

ಯಂತ್ರರ್ಷಿ

"ಯುಗ ಯುಗಗಳ ಜ್ಞಾನದಿಂದೆಮ್ಮನುತ್ತರಿಸಿ
ವಿಜ್ಞಾನ ವಿದ್ಯೆಯನು ನೀಡಿ ಕಾಪಾಡಿರುವ
ಓ ಮಾನವನ ಧೀರ ಮತಿಯೆ, ನೀನಿಂದೆಮಗೆ
ಆರಾಧ್ಯ ದೇವತೆಯು! ನಿನ್ನ ಪೂಜಿಪ ನರರು,
ಯಂತ್ರರ್ಷಿ ಮಾನವರೆ, ಮಂತ್ರರ್ಷಿಗಳು ನಮಗೆ!
ಹೇ ಪುಣ್ಯ ಯಂತ್ರರ್ಷಿ, ನೀನೆಮ್ಮ ವಿಜಿಗೀಷು
ಮತಿಗೆ ಪ್ರತಿನಿಧಿಯಾಗಿ ನಿಂತಿರುವೆ; ಅದರಿಂದೆ
ರಾಜ ರಾಜರ ಹೊಗಳಲಾರದೀ ಕಬ್ಬಿಗನ
ವಾಣಿ ನಿನ್ನನು ಕುರಿತು ಹಾಡುತಿದೆ! ಇನ್ನೆಲ್ಲಿ
ಭೂತಳಾದಿಪರ ನುತಿ? ಇನ್ನೆಲ್ಲಿ ಮಾನವರ
ಕೊಲೆಗೈವ ರಕ್ತದಾಹಾತುರರ ವೀರಕಥೆ!
ಜಯಮಕ್ಕೆ! ಸೊಗಮಕ್ಕೆ! ಮನುಜ ಜೀವನ ಶಾಂತಿ
ಸಂಸ್ಥಾಪನೆಗೆ ಯಶೋ ಲೋಭವಿನಿತಿಲ್ಲದೆಯೆ
ಮೂರ್ಖ ನಿಂದೆಯ ಲೆಕ್ಕಿಸದೆ ದುಡಿವ ಯಂತ್ರರ್ಷಿ
ನಿನಗೆ ಜಯವಾಗಲಿ! ಶಾಂತಿ ಸುಖವಾಗಲಿ!"[೧]

ಜ್ಞಾನ ತಂತ್ರಜ್ಞಾನಗಳ ಅರಿವನ್ನು ಸ್ವೀಕಾರ ಮಾಡದೆ ಮಾನವನ ಅಭಿವೃದ್ಧಿ ಸಾಧ್ಯವಾಗದು. ಹೊಸ ತಲೆಮಾರಿನ ವಿದ್ಯಮಾನಗಳಿಗೆ ಬೆಲೆ ಕೊಡಬೇಕು. ಅವುಗಳ ಸದ್ಬಳಕೆಗೆ ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾ ನವೀನ ಮಾರ್ಗದಲ್ಲಿ ನಡೆಯುವುದು ಬಾಳ್ವೆಯ ಏಳ್ಗೆಯ ಆಲೋಚನೆ, ಅದಲ್ಲದೆ ಸಂಕುಚಿತ ಆಲೋಚನೆಯಿಂದ ವರ್ತಿಸಿದರೆ ಜೀವನ ರಂಗದಲ್ಲಿ ಪರಾಭವ ಕಟ್ಟಿಟ್ಟ ಬುತ್ತಿ. ಕುವೆಂಪು ಅವರ ಈ ಕೆಳಗಿನ ಕವನದ ಆಶಯದಂತೆ ಹೊಸ ದೃಷ್ಟಿಗೆ ಹೊಂದಿಕೊಂಡು ಬದುಕಬೇಕು.

"ಹೋಗುತಿದೆ ಹಳೆ ಕಾಲ, ಹೊಸಕಾಲ ಬರುತಲಿದೆ
ಬರುತಲಿದೆ ಹೊಸದೃಷ್ಟಿ ಹೊಸ ಬಯಕೆಗಳಲಿ
ಹೋಗುತಿದೆ ಹಳೆಬಾಳು, ಹೊಸ ಬಾಳು ಬರುತಲಿದೆ,
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಕೇಳಿ!"[೨]

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೩೫೬.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪಟ ೩೭೦.

ಕುವೆಂಪು ಅವರು ವೈಚಾರಿಕ ದೃಷ್ಟಿಕೋನದಲ್ಲಿ ಮಿಂದವರು. ಅವರ ಕೆಲಸಗಳು ಮೌಢ್ಯಕ್ಕೆ ದೂರಾಗಿದ್ದವು. ಅವರ ಕೃತಿಗಳಲ್ಲಿಯೂ ವೈಚಾರಿಕತೆಯ ಪೂರವನ್ನೇ ಹರಿಸಿದ್ದಾರೆ. ಅವರ ಬದುಕಿನ ಸ್ವರೂಪ ಹೇಗಿತ್ತು ಎಂಬುದನ್ನು ಅವರ ಮಗಳು ತಾರಿಣಿ ಈ ರೀತಿ ಹೇಳುತ್ತಾರೆ.

"ತಂದೆಯವರದು ಶಾಂತ ಸ್ವಭಾವ, ಗಂಭೀರ ವ್ಯಕ್ತಿತ್ವ, ಮಿತಭಾಷಿ, ತೂಗಿ ತೂಗಿ ಆಡುವ ಮಾತಿನಲ್ಲಿ ಅನುಭವದ ಸಾರವಿತ್ತು. ಅವರು ತುಂಬಾ ವಿಚಾರಪರರೂ, ವೈಜ್ಞಾನಿಕ ಚಿಂತಕರೂ ಆಗಿದ್ದರು. ಮೌಢ್ಯ-ವಂಚನೆ-ರಾಹುಕಾಲ-ಗುಳಿಕಕಾಲ ಇಂತಹುದನ್ನು ಕಂಡಾಗ ಖಂಡಾ ತುಂಡವಾಗಿ ಖಂಡಿಸುತ್ತಿದ್ದರು. ಸಾಹಿತಿ ಸಿದ್ಧಲಿಂಗಯ್ಯನವರು ಹೇಳಿದಂತೆ ದೇವರು ಧರ್ಮದ ಹೆಸರಿನಲ್ಲಿ ಜನರಿಗೆ ಮೌಢ್ಯವನ್ನು ಹಬ್ಬಿಸುತ್ತಾ ಅವರ ಅಜ್ಞಾನವನ್ನು ಉಪಯೋಗಿಸಿಕೊಂಡು ತಾವು ದೊಡ್ಡವರಾಗುವ ಬುದ್ಧಿಗೆ ಅವರು ಸಿಟ್ಟಾಗುತ್ತಿದ್ದರು. ಪರನಿಂದೆ, ಪರಚರ್ಚೆ ಮಾಡಿದ್ದನ್ನು ನಾನು ಯಾವಾಗಲೂ ಕೇಳಿಲ್ಲ. ಅವರು ಏನನ್ನು ಹೇಳುತ್ತಿದ್ದರೋ ಹಾಗೆಯೇ ಜೀವನದಲ್ಲಿ ನಡೆದುಕೊಳ್ಳುತ್ತಿದ್ದುದನ್ನು ನಿರಂತರವಾಗಿ ನೋಡುತ್ತಿದೆ. ನಮಗೂ ಸ್ವಲ್ಪಮಟ್ಟಿಗೆ ವೈಚಾರಿಕ ಬುದ್ಧಿ, ವೈಜ್ಞಾನಿಕ ದೃಷ್ಟಿ ಬೆಳೆಸಿಕೊಳ್ಳಲು ತಂದೆಯವರ ಪ್ರಭಾವವೇ ಕಾರಣ."[೧]

ಪ್ರಯೋಗಶೀಲ ಬದುಕಿನಲ್ಲಿ ವಿಶ್ವಾಸವಿಟ್ಟಿದ್ದ ಕುವೆಂಪು ಅವರು ಮೌಢ್ಯಕ್ಕೆ ತಿರುಮಂತ್ರವಾಗಿದ್ದರು. ಯಾರೇ ಮೌಢ್ಯವನ್ನು, ಅಜ್ಞಾನವನ್ನು ಹರಡಿದರೂ ಅವರಿಗೆ ವೈಚಾರಿಕತೆಯ ಕಶಾದಂಡದಿಂದ ಏಟು ಬೀಳುತ್ತಿತ್ತು. ತಿದ್ದುಕೊಳ್ಳುವಷ್ಟು ಎಚ್ಚೆತ್ತು ಬದುಕುವಷ್ಟು ವಿವೇಚನೆ ನೀಡುತ್ತಿದ್ದರು. ಒಮ್ಮೆ ತಾರಿಣಿಯವರಿಗೆ ಬಾಲ್ಯದಲ್ಲಿದ್ದ ದೆವ್ವದ ಭಯವನ್ನು ಬಿಡಿಸಿದ್ದು ಹೀಗೆ. -"ಮನೆಗೆ ಹೋದ ಮೇಲೆ ನಡೆದ ವಿಷಯ ತಂದೆಯವರಿಗೆ ಹೇಳಿದೆ. ಸೀತಾ ಹೇಳಿದ ಕೊಳ್ಳಿ ದೆವ್ವ, ಮೋಹಿನಿ ದೆವ್ವದ ಕತೆ, ಪುಸ್ತಕ ಸಿಗದಿರುವುದು ಎಲ್ಲ ವಿಚಾರ ತಿಳಿಸಿದೆ. ತಂದೆಯವರು 'ಯಾವ ದೆವ್ವವೂ ಇಲ್ಲ ಏನೂ ಇಲ್ಲ. ದೆವ್ವ ಹೇಗಿರುತ್ತದೆ ಎಂದು ಅವಳನ್ನೇ ವಿಚಾರಿಸು, ನೀನೇ ಒಂದು ದೆವ್ವ ಎಂದು ಅವಳಿಗೆ ಹೇಳು. ಎಲ್ಲಾ ಕಡೆ ದೇವರೇ ಇರುವುದು. ದೆವ್ವ ಇಲ್ಲ ಅವರು ಹೇಳುವುದು ನಂಬಬೇಡ. ಮತ್ತೆ ಶಾಲೆಗೆ ಹೋದಾಗ ಪುಸ್ತಕ ಬೇಡ ಹಣ ಹಿಂದಿರುಗಿಸು ಎಂದು ಅವಳಿಗೆ ಹೇಳು' ಎಂದು ಮನಸ್ಸಿಗೆ ಧೈರ್ಯ ತುಂಬಿದರು. ಮತ್ತೆ 'ನೀನು ಸ್ವಲ್ಪ ಯೋಚಿಸಬೇಕು. ಯಾರಿಗೂ ಕಂಡಿಲ್ಲದ ದೆವ್ವ

---

೧ 'ಮಗಳು ಕಂಡ ಕುವೆಂಪು', ಪುಟ ೨೫೨.

ಸೀತಾಗೆ ಕಾಣುವುದೇ? ಎಲ್ಲರಿಗೂ ಕಂಡರೆ ದೆವ್ವ ಇದೆ ಎನ್ನಬಹುದು. ಅವಳೊಬ್ಬಳಿಗೇ ಕಾಣುವುದಾದರೆ ಅದು ಹೊರಗಡೆಯಿಂದ ಬಂದುದಲ್ಲ ಅವಳ ತಲೆಯಲ್ಲೇ ತುಂಬಿರುವ ಭ್ರಾಂತಿ? ಎಂದು ಕಟುವಾಗಿ ಹೇಳಿ ಸ್ವಲ್ಪ ವೈಚಾರಿಕ ಬುದ್ಧಿಯನ್ನು ನನ್ನ ತಲೆಗೆ ತುಂಬಿದರು. 'ಸಾವು ಎಲ್ಲರಿಗೂ ಬರುತ್ತದೆ. ಹೆದರುವ ಅಗತ್ಯವಿಲ್ಲ. ದೇಹಕ್ಕೆ ವಯಸ್ಸಾಗುತ್ತಾ ಅದು ಮಿಷನ್ನಿನಂತೆ ಕೆಲಸ ಮಾಡಿ ಮಾಡಿ ಸವೆಯುತ್ತದೆ. ಆಗ ದೇಹದ ಒಳಗಿನ ಆತ್ಮ ಈ ದೇಹವೆಂಬ ಹಳೆಬಟ್ಟೆ ತೆಗೆದು ಬೇರೆ ದೇಹವೆಂಬ ಹೊಸ ಬಟ್ಟೆ ಧರಿಸುತ್ತದೆ ಅಷ್ಟೆ. ಜನ ಸತ್ತವರ ಬಗ್ಗೆ ಗೌರವ ಸೂಚಿಸಲು ವಾದ್ಯ ಊದಿಕೊಂಡು, ಶವ ತೆಗೆದುಕೊಂಡು ಹೋಗುವರು. ಜೊತೆಗೆ ಹಿಂದಿನ ಕಾಲದಲ್ಲಿ ಪತ್ರಿಕೆ, ಫೋನ್, ಟೆಲಿಗ್ರಾಂ ಯಾವುದೂ ಇರಲಿಲ್ಲ. ಈ ವಾದ್ಯ ಶಬ್ದ ಕೇಳಿದ್ದೇ ಯಾರೋ ತೀರಿಕೊಂಡಿದ್ದಾರೆ ಎಂದು ಎಲ್ಲರಿಗೂ ತಿಳಿಯುತ್ತಿತ್ತು. ಸತ್ತ ಮೇಲೆ ಯಾರೂ ದೆವ್ವವಾಗಿಲ್ಲ. ಹೊಸ ಬಟ್ಟೆ ಧರಿಸಿದಂತೆ ಮತ್ತೆ ಇನ್ನೆಲ್ಲೊ ಹುಟ್ಟುವರು ಎಂದು ಧೈರ್ಯ ಹೇಳಿದರು."[೧]

ಬಹಳ ಹಿಂದೆ ಮತ್ತು ಪ್ರಸ್ತುತದಲ್ಲಿಯೂ ಮೂಢರು ತಮ್ಮ ಅಜ್ಞಾನವನ್ನು ಹರಡುತ್ತಾರೆ. ಅದು ವಿಶೇಷವಾಗಿ ಮಕ್ಕಳಿಗೇ ಎಂಬುದು ದುರಂತ. ಚಿಕ್ಕ ವಯಸ್ಸಿನಲ್ಲಿಯೇ ಈ ರೀತಿಯ ಅಜ್ಞಾನಕ್ಕೆ ಬಲಿಯಾಗುತ್ತಾರೆ. ತಿಳಿದವರು ಈ ಮೌಢ್ಯವನ್ನು ಮಕ್ಕಳಿಂದ ಬಹಳ ವಿವೇಚನೆಯಿಂದ ಹೊರಹಾಕಬೇಕು. ತಮಗೆ ಅರಿವಿಲ್ಲದಿದ್ದರೆ, ಅರಿವಿದ್ದವರರಿಂದ ಅರಿವು ಪಡೆಯಬೇಕು. ಬೇಕೆಂತಲೇ ತಮ್ಮ ಸ್ವಾರ್ಥಕ್ಕಾಗಿ ಮೌಢ್ಯವನ್ನು ಹಂಚುವ ಅನ್ಯಾಯಿಗಳಿಗೆ ತಕ್ಕ ಮರ್ಯಾದೆ ಮಾಡಿಸಬೇಕು. ತಮ್ಮ ಹೆಣ್ಣು ಮಕ್ಕಳಿಬ್ಬರಿಗೂ ಮೂಢರು ಹಂಚಿದ್ದ ಗರುಡಗಂಬ, ಕನ್ನಂಬಾಡಿ ಕಟ್ಟೆ, ಪಾಸುಫೇಲು ವಿಚಾರಗಳ ಮೌಢ್ಯವನ್ನು ಕುವೆಂಪು ಈ ರೀತಿಯಾಗಿ ದೂರ ಮಾಡುತ್ತಾರೆ. "ತಂದೆಯವರು ಜೋರಾಗಿ ನಗುತ್ತಾ 'ಒಳ್ಳೆ ಬೆಪ್ಪುಗಳಾದರಲ್ಲ ಎಲ್ಲರೂ! ಕನ್ನಂಬಾಡಿ ಕಟ್ಟೆ ನೀರು ಸೋರುವುದಕ್ಕೂ ಮಕ್ಕಳನ್ನು ಹಿಡಿದುಕೊಂಡು ಹೋಗುವುದಕ್ಕೂ ಏನು ಸಂಬಂಧ? ಕಟ್ಟೆಗೆ ಮಕ್ಕಳನ್ನು ಇಟ್ಟು ಕಟ್ಟಿದರೆ ನೀರು ಸೋರುವುದು ನಿಲ್ಲುವುದೇ? ಅಂತಹ ಪೆದ್ದರಲ್ಲ ಕಟ್ಟೆ ಕಟ್ಟಿದ ವಿಶ್ವೇಶ್ವರಯ್ಯನವರು. ಹಾಗೆ ಮಾಡಿದ್ದರೆ ಇಷ್ಟು ಹೊತ್ತಿಗೆ ಜೈಲು ಸೇರುತ್ತಿದ್ದರು. ಯಾರೋ ಕಳ್ಳರು ಮಕ್ಕಳನ್ನು ಅಪಹರಿಸಿರಬೇಕು ಅದಕ್ಕೆ ಈ ಕತೆಹುಟ್ಟಿದೆ. ಇನ್ನು ಬಲಿಕೊಟ್ಟರೆ ಗರುಡಗಂಬ ನಿಲ್ಲುವಂತಿದ್ದರೆ ಇಷ್ಟು ಹೊತ್ತಿಗೆ ಸಾವಿರಾರು ಹೆಣ ಅಲ್ಲಿ ಬಿದ್ದಿರುತ್ತಿತ್ತು. ಯಾರಿಗೋ ಸರಿಯಾಗಿ ಕಂಬ ನಿಲ್ಲಿಸಲು ಬರುತ್ತಿಲ್ಲ. ಅದಕ್ಕೆ ಹೀಗೆ ಕತೆ ಹುಟ್ಟಿಸುವುದು. ತಮ್ಮ ಅಜ್ಞಾನಕ್ಕೆ ಮೌಢ್ಯದ ಮುಖವಾಡ ಬೇರೆ ಹಾಕುತ್ತಾರೆ. ಪಾಸೋ

---

[೧] 'ಮಗಳು ಕಂಡ ಕುವೆಂಪು', ಪುಟ ೨೫೫.

ಫೇಲೋ ಕೇಳುವುದು ದೊಡ್ಡ ವಿಚಾರವೇ ನೀವೇ ಹೇಳಿ? ಚೀಟಿ ಬರೆದು ನೀವೇ ದೇವರ ಮನೆಯಲ್ಲಿಟ್ಟು ಪ್ರಾರ್ಥಿಸಿ ಎತ್ತಿದರೆ ನಮ್ಮ ದೇವರು ಪಾಸು ಫೇಲು ಹೇಳುತ್ತಾನೆ, ಅದರಲ್ಲೇನು ವಿಶೇಷ? ಅದನ್ನೆಲ್ಲಾ ನಂಬಬೇಡಿ. ಈ ರೀತಿ ಅವಿವೇಕ, ಮೌಢ್ಯ ಹೇಳುವವರಿಗೆ ನಾನು ಹೇಳಿದ್ದನ್ನೆಲ್ಲಾ ಹೇಳಿ, ಬೀದಿಯಲ್ಲಿ ಯಾರಾದರೂ ಅಪರಿಚಿತರು ಮಾತಾಡಿಸಿದರೆ ಮಾತಾಡಬೇಡಿ. ಅವರು ಕೊಟ್ಟ ಚಾಕಲೇಟು, ಸಿಹಿತಿಂಡಿ ತಿನ್ನಬೇಡಿ, ಅವರು ಕರೆದರೆ ಅವರೊಡನೆ ಹೋಗಬೇಡಿ, ಎಂದು ನಮಗೆ ಜ್ಞಾನವನ್ನು ತುಂಬಿದರು."[೧]

ಹೀಗೆ ಬಹಳಷ್ಟು ಮೌಢ್ಯದ ವಿರುದ್ಧ ಪಾಠವನ್ನು ಕುವೆಂಪು ಹೇಳುತ್ತಾರೆ. ಮೌಢ್ಯವನ್ನು ಹಂಚುವವರನ್ನು ಕಟುವಾಗಿ ಟೀಕಿಸುತ್ತಿದ್ದರು. ಏನು ತಿಳಿಯದವರನ್ನು ತಿದ್ದುವುದು ಸುಲಭ. ಎಲ್ಲವೂ ತಿಳಿದು ಮೂಢರಾಗುವವರನ್ನು 'ಜ್ಞಾನೋತ್ತರ ಮೌಢ್ಯ'ದವರೆಂದು ಕರೆಯುತ್ತಾರೆ.

ಓ, ಬನ್ನಿ, ಸೋದರರೆ, ಬೇಗ ಬನ್ನಿ

"ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳ ಬನ್ನಿ,
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯಬನ್ನಿ,
ಓ, ಬನ್ನಿ, ಸೋದರರೆ, ಬೇಗ ಬನ್ನಿ!

ಅದೊ ನೋಡಿ, ರಷ್ಯಾ ಜಪಾನು ತುರ್ಕಿಗಳೆಲ್ಲ
ಪರೆಗಳಚಿ ಹೊರಟಿಹವು ಹೊಸ ಪಯಣಕೆ.
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆ ಕೊಳಕು ಬಣಗು ತೃಣಕೆ
ಓ, ಬನ್ನಿ, ಸೋದರರೆ, ರಾಷ್ಟ್ರರಣಕೆ!"[೨]

---

[೧] 'ಮಗಳು ಕಂಡ ಕುವೆಂಪು', ಪುಟ ೨೫೬.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೩೭೨.

೩-ಸೂಕ್ಷ್ಮ ಸಂವೇದಿ

ನಮ್ಮ ಸಾಮಾಜಿಕ ಬದುಕಿನಲ್ಲಿ ಹಲವಾರು ಆಗು-ಹೋಗುಗಳಿರುತ್ತವೆ. ಅವು ಎಲ್ಲರ ಗಮನಕ್ಕೂ ಬಂದಿರದೆ ಇರಬಹುದು. ಸಂದಿಗ್ಧ ಪರಿಸ್ಥಿತಿಯನ್ನು ಗ್ರಹಿಸುವ ಮನಸ್ಸಿರುವುದು ಸೂಕ್ಷ್ಮ ಸಂವೇದಿ ವ್ಯಕ್ತಿತ್ವ ಇರುವವರಿಗೆ ಮಾತ್ರ. ಆಧುನಿಕ ಪ್ರಪಂಚ ಚಿಕ್ಕದಾಗಿದೆ. ಎಲ್ಲರಲ್ಲಿಯೂ ತರಾತುರಿ ವ್ಯವಹಾರ. ತಮ್ಮ ಬದುಕಿನ ಭೋಗವನ್ನು ಪೂರೈಸುವುದರಲ್ಲಿಯೇ ಅವರೆಲ್ಲರ ಗುರಿಯಿರುತ್ತದೆ. ಈ ಮಧ್ಯೆದಲ್ಲಿ ಕಮರಿಹೋಗುವ ವಿಸ್ಮಯ ವಿಷಯಗಳೆಷ್ಟೊ, ಮುಚ್ಚಿ ಹೋಗುವ ದೈತ್ಯ ಪ್ರತಿಭೆಗಳೆಷ್ಟೊ, ನಿರಾಶೆಗೊಳ್ಳುವ ಮುಗ್ಧ ಹೃದಯಗಳೆಷ್ಟೋ, ನೊಂದುಕೊಳ್ಳುವ ಪುಟಾಣಿಗಳೆಷ್ಟೊ ಲೆಕ್ಕ ಇಟ್ಟವರ್ಯಾರು? ಅವರನ್ನು ಗಮನಿಸಿ ಪ್ರೋತ್ಸಾಹಿಸಿ, ಬೆನ್ನುತಟ್ಟುವವರು ಬೆರಳೆಣಿಕೆಯಷ್ಟಿದ್ದಾರೆ. ಅದಕ್ಕಾಗಿ ನಮ್ಮ ನಡುವೆ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವಗಳ ಅಗತ್ಯವಿದೆ.

ಕುವೆಂಪುರವರನ್ನು ದರ್ಶನಕವಿಯೆಂದೇ ಲೋಕ ಗುರುತಿಸಿಕೊಂಡಿದೆ. ಅದು ಮಹಾಸತ್ಯ! ದರ್ಶನದ ಮೊದಲ ಹಂತವೇ ಸೂಕ್ಷ್ಮ ಸಂವೇದನೆ. ಸೂಕ್ಷ್ಮ ಸಂವೇದನೆಯಿಲ್ಲದೇ ಆದರ್ಶದ ಮಾನದಂಡ ಲೋಕದಲ್ಲಿಲ್ಲ. ಕುವೆಂಪುರವರ ಬದುಕು-ಬರಹಗಳೆರಡೂ ಸೂಕ್ಷ್ಮ ಸಂವೇದನೆಯಿಂದ ತುಂಬಿದೆ. ಬಹುಶಃ ಅವರಲ್ಲಿ ಈ ಗುಣವಿಲ್ಲದಿದ್ದರೆ ಅವರ ಕೃತಿಗಳ ಮೌಲ್ಯ ಕಡಿಮೆಯಾಗುತ್ತಿತ್ತು. ಸೂಕ್ಷ್ಮ ಸಂವೇದನೆಯು ಏಕೆ ಅಗತ್ಯವೆಂದು ಕುವೆಂಪು ಹೇಳುವುದು ಹೀಗೆ – "ಒಬ್ಬ ಕಾದಂಬರಿಕಾರನು ತನ್ನ ಸುತ್ತಮುತ್ತಲ ವಿಚಾರವನ್ನು ಸೂಕ್ಷ್ಮವಾಗಿ ಗಮನಿಸಿರುವುದೇ ಕಾದಂಬರಿಯಲ್ಲಿ ಚಿತ್ರಿತವಾಗುತ್ತದೆ. ಬರಹಗಾರ ಸೂಕ್ಷ್ಮ ಸಂವೇದನಾಶೀಲನಾದಾಗ ಮಾತ್ರ ಉತ್ತಮ ಕೃತಿ ಬರಲು ಸಾಧ್ಯ. ನನ್ನ ಕಾದಂಬರಿಗೆ ಎಲ್ಲವೂ ಅಗತ್ಯ"[೧]

ಕುವೆಂಪು ಅವರ ಸೂಕ್ಷ್ಮ ಸಂವೇದನಾಶೀಲ ಗುಣವನ್ನು ಕಂಡುಕೊಂಡ ಮಗಳು ತಾರಿಣಿಯವರು ಒಂದೆರಡು ಘಟನೆಯನ್ನು ನೆನಪಿಸಿಕೊಳ್ಳುವ ಮೂಲಕ ನಮ್ಮ ಮುಂದಿಡುತ್ತಾರೆ. – "ಒಮ್ಮೆ ಇಬ್ಬರು ಪುಟ್ಟ ಮಕ್ಕಳು ನಮ್ಮ ಮನೆ ಮುಂದೆ ಹೋಗುವಾಗ ಮನೆಯನ್ನೂ, ತಂದೆಯವರನ್ನೂ ನೋಡುತ್ತಾ ಹೋಗುತ್ತಿದ್ದರು. 'ಉದಯರವಿ' ಮನೆ ಎರಡು ರಸ್ತೆ ಸೇರುವ ಮೂಲೆಯಲ್ಲಿದೆ ಆ ಮಕ್ಕಳು ಮನೆ ಮುಂದಿನ ಐದನೇ ಮುಖ್ಯ ರಸ್ತೆಯಲ್ಲಿ ಬಂದು ಮನೆ ಪಕ್ಕದ ಹನ್ನೆರಡನೆಯ ಅಡ್ಡರಸ್ತೆಯಲ್ಲಿ ತಿರುಗಿ ಹೋಗುತ್ತಿದ್ದರು. ಇದೇ ರೀತಿ ನಾಲ್ಕೈದು ದಿನ

---

[೧] 'ಮಗಳು ಕಂಡ ಕುವೆಂಪು', ಪುಟ ೧೪೫.

ನಡೆಯಿತು. ತಂದೆಯವರ ಗಮನಕ್ಕೂ ಇದು ಬಂದಿತ್ತು. ಊಟಕ್ಕೆ ಕುಳಿತಾಗ ಹೇಳಿದರು, ಯಾರೋ ಇಬ್ಬರು ಪುಟ್ಟ ಹುಡುಗಿಯರು ನಮ್ಮ ಮನೆ ಕಡೆ ದೃಷ್ಟಿ ಇಟ್ಟವರು ಪಕ್ಕದ ರಸ್ತೆಗೆ ತಿರುಗಿ ಮನೆ ಕಾಣುವವರೆಗೂ ದೃಷ್ಟಿ ತೆಗೆಯದೇ ನೋಡುತ್ತಲೇ ಹೋಗುವರು. ಪ್ರತಿ ದಿನ ಇದೇ ನಡೆಯುತ್ತಿದೆ ಎಂದಿದ್ದರು. ಮಾರನೆಯ ದಿನ ತಂದೆಯವರು ಉದ್ಯಾನದಲ್ಲಿ ಓಡಾಡುವಾಗ ದನ ಗಿಡ ತಿನ್ನುವುದೆಂದು ಓಡಿಸಲು ದೊಡ್ಡ ಗೇಟಿನ ಬಳಿ ನಿಂತಿದ್ದರು. ಆ ಹುಡುಗಿಯರು ಗೇಟಿನ ಬಳಿಯೆ ನಿಂತು ದನ ಹೋದ ಮೇಲೆ ತಂದೆಯವರಿಗೆ 'ನಮಸ್ಕಾರ ತಾತ' ಎಂದು ಹೇಳಿ ಹೋದರು. ಹೀಗೆ ಪ್ರತಿದಿನ ತಂದೆಯವರು ದೊಡ್ಡ ಗೇಟಿನ ಬಳಿ ಬರುವುದು, ಮಕ್ಕಳು ಕಾದು ನಿಂತು 'ನಮಸ್ಕಾರ ತಾತ' ಎನ್ನುವುದು ನಡೆಯುತ್ತಿತ್ತು. ತಂದೆಯವರು ಅದನ್ನು ನಮಗೆ ಹೇಳುತ್ತಿದ್ದರು. ಇನ್ನೊಮ್ಮೆ ಮಕ್ಕಳು ನಮಸ್ಕಾರ ಹೇಳಿದಾಗ, ತಂದೆಯವರಿಗೂ ಕುತೂಹಲವಾಗಿ, ಯಾರು ನೀವು? ಎಲ್ಲಿರುವಿರಿ? ಎಲ್ಲಿ ಓದುವಿರಿ? ಎಂದು ವಿಚಾರಿಸಿದರು. ದೊಡ್ಡ ಹುಡುಗಿ ನನ್ನ ಹೆಸರು ಮನೋನ್ಮಣಿ. ನಮ್ಮ ತಂದೆಗೆ ಈ ವರ್ಷ ಮೈಸೂರಿಗೆ ವರ್ಗವಾಯಿತು. ಮನೆ ಜಯಲಕ್ಷ್ಮಿಪುರದಲ್ಲಿದೆ. ನಾನು ಮಾತೃಮಂಡಲಿ ಶಾಲೆಯಲ್ಲಿ ನಾಲ್ಕನೇ ತರಗತಿಲ್ಲಿ ಓದುತ್ತಿದ್ದೇನೆ. (ಮಾತೃಮಂಡಲಿ ಶಾಲೆ ಉದಯರವಿ ಮನೆಗೆ ಒಂದು ಕಿಲೋ ಮೀಟರ್ ದೂರದಲ್ಲಿದೆ) ನಮಗೆ ಪಠ್ಯ ಪುಸ್ತಕದಲ್ಲಿ ಕುವೆಂಪು ಅವರ ಕವನವಿದೆ. ಕುವೆಂಪು ಮನೆ ಹತ್ತಿರದಲ್ಲಿದೆ ಎಂದು ಮೇಡಂ ಹೇಳಿದರು. ಬೇರೆ ರಸ್ತೆಯಲ್ಲಿ ನೇರ ಮನೆಗೆ ಹೋಗಬಹುದು. ಆದರೆ ನಾನು ನಿಮ್ಮನ್ನು ನೋಡಬೇಕೆಂದು ನಿಮ್ಮ ಮನೆ ಎದುರಿನ ರಸ್ತೆಯಿಂದ ಮನೆಗೆ ಹೋಗುವೆ. ಇನ್ನೊಬ್ಬಳು ನನ್ನ ಸ್ನೇಹಿತೆ. ಮೂರನೇ ತರಗತಿಯಲ್ಲಿ ಓದುತ್ತಾಳೆ ಎಂದು ಹೇಳಿದಳು. ಇನ್ನು ಕೆಲವು ದಿನಗಳಾದ ಮೇಲೆ ತಂದೆಯವರಿಗೆ ನಮಸ್ಕಾರ ಹೇಳಿ, ತಾತ ನಿಮ್ಮ ಮೇಲೆ ಪದ್ಯಬರೆದಿರುವೆ ತಂದು ತೋರಿಸಲೆ ಎಂದು ಕೇಳಿದಳು. ತಂದೆಯವರು ಒಪ್ಪಿಗೆ ಕೊಟ್ಟರು. ನನಗೆ ಭಾನುವಾರ ರಜವಿದೆ. ಆಗ ಬರುತ್ತೇನೆ. ಎಷ್ಟು ಹೊತ್ತಿಗೆ ಬರಲಿ ಎಂದು ಸಮಯ ಕೇಳಿದಾಗ ತಂದೆಯವರು 'ಹತ್ತು ಗಂಟೆಗೆ ಬಾ, ಇಲ್ಲೇ ವರಾಂಡದಲ್ಲಿ ಕುಳಿತಿರುವೆ' – ಎಂದರು. ಮನೋನ್ಮಣಿ ಹತ್ತುಗಂಟೆಗೆ ಬಂದು ತಂದೆಯವರಿಗೆ ಪದ್ಯ ಬರೆದ ಒಂದು ಹಾಳೆ ಕೊಟ್ಟು ಹೋದಳು."[೧]

ಕುವೆಂಪು ಅವರ ಈ ರೀತಿಯ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವ ಎಲ್ಲರಿಗೂ ಲಭಿಸದು. ಆಲೋಚನಾ ಸಂಸ್ಕಾರದ ವೈಪರೀತ್ಯಗಳು ಸೂಕ್ಷ್ಮ ಸಂವೇದನೆಯ ಮೇಲೆ ಗುರುತರ ಪ್ರಭಾವವನ್ನು ಬೀರುತ್ತವೆ. ಇಂತಹ ವೈಪರೀತ್ಯಗಳಿಗೆ ಕುವೆಂಪು ತಕ್ಕ ತರ್ಕವನ್ನೊಡ್ಡಿ

---

[೧] 'ಮಗಳು ಕಂಡ ಕುವೆಂಪು', ಪುಟ ೧೨೯-೩೦.

ದೂರವಿಡುತ್ತಿದ್ದರು. ಒಟ್ಟಾರೆ ಸೂಕ್ಷ್ಮ ಸಂವೇದನೆಯಿಂದ ಹೊಸ ಮನಸ್ಸುಗಳ ಆಲೋಚನೆಯೊಂದಿಗೆ ಸಂಪರ್ಕ ಹೊಂದಬಹುದು. ಒಂದು ವೇಳೆ ಕುವೆಂಪು ಆ ಪುಟ್ಟ ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸದೆ ಇದ್ದಿದ್ದರೆ ಆ ಮಕ್ಕಳು ಧೈರ್ಯ ಮಾಡದೆ ಹೆದರಿಕೊಂಡು ಇವರನ್ನು ಮಾತನಾಡಿಸಲು ಸಾಧ್ಯವಾಗದೆ ಅನುಭವಿಸುವ ನೋವು ಅಪಾರ. ಅದು ಅವರ ಹೃದಯದ ದೊಡ್ಡ ದುರಂತವೇ ಆಗುತ್ತದೆ ಎಂದು ಸೂಕ್ಷ್ಮ ಮನಸ್ಸಿನ ಕುವೆಂಪು ಆ ಮಕ್ಕಳನ್ನು ಮಾತನಾಡಿಸಿದ್ದರಿಂದ ಅವರಿಗೆ ದೊರೆತ ಆನಂದಕ್ಕೆ ಸರಿದೂಗುವ ಮತ್ತೊಂದು ವಸ್ತುವಿಲ್ಲ. ಆ ಮೂಲಕ ಮಕ್ಕಳು ಹೊಸ ಚೈತನ್ಯವನ್ನು ಉತ್ಸಾಹವನ್ನು ಪಡೆದಿರುತ್ತವೆ. ಹೀಗೆ ನಮ್ಮ ಮಧ್ಯೆ ಈ ರೀತಿಯ ಮನಸ್ಸುಗಳಿರುತ್ತವೆ ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಮತ್ತೊಂದು ಸಂದರ್ಭವನ್ನು ತಾರಿಣಿಯವರು ನೆನಪಿಸಿಕೊಂಡು ಕುವೆಂಪು ಅವರ ಸೂಕ್ಷ್ಮ ಸಂವೇದನೆಯ ವ್ಯಕ್ತಿತ್ವವನ್ನು ಹೊರಗಿಡುತ್ತಾರೆ.

"ಒಮ್ಮೆ ಪೊರಕೆ ಮಾರುವವಳು ಮನೆಗೆ ಬಂದು ಪೊರಕೆ ಬೇಕೆ ಎಂದು ಕೇಳಿದಳು. ಸಾಮಾನ್ಯವಾಗಿ ಅಮ್ಮ ಅವಳ ಹತ್ತಿರ ಪೊರಕೆ ಕೊಳ್ಳುತ್ತಿದ್ದರು. ಆ ದಿನವೂ ಅಮ್ಮ ಪೊರಕೆ ಕೊಳ್ಳುತ್ತಿದ್ದರು. ನಾನು, ಅಕ್ಕ ಸರಿಯಾದ ಪೊರಕೆ ಆಯ್ಕೆ ಮಾಡಲು ಅಮ್ಮನಿಗೆ ಸಹಾಯ ಮಾಡುತ್ತಿದ್ದೆವು. ಅಮ್ಮ ಅವಳ ಹತ್ತಿರ ಚೌಕಾಸಿ ವ್ಯಾಪಾರ ಮಾಡುತ್ತಿದ್ದರು. ಇನ್ನೂ ಒಂದು ಪೊರಕೆ ಹೆಚ್ಚಾಗಿ ಕೊಡು ಎಂದು ಕೇಳುತ್ತಿದ್ದರು. ತಂದೆಯವರು ನಮ್ಮ ವ್ಯಾಪಾರವನ್ನು ವರಾಂಡದಲ್ಲಿ ಕುಳಿತು ಗಮನಿಸುತ್ತಿದ್ದರು. ಪೊರಕೆ ತೆಗೆದುಕೊಂಡ ಮೇಲೆ ಅಮ್ಮ ಹಣ ತರಲು ಒಳಗೆ ಬಂದಾಗ ತಂದೆಯವರು 'ಅವಳು ಹೇಳಿದಷ್ಟಕ್ಕೆ ಕೊಳ್ಳಬಾರದೆ, ಅವಳ ಬಡಸ್ಥಿತಿ, ಕಷ್ಟ ನೋಡಿದರೆ ಕನಿಕರವಾಗುತ್ತದೆ. ಸ್ವಾತಂತ್ರ್ಯ ಬಂದ ಮೇಲೂ ಸಾಮಾನ್ಯ ಜನರ ಸ್ಥಿತಿ ಏನೂ ಉತ್ತಮಗೊಂಡಂತೆ ಕಾಣುವುದಿಲ್ಲ? ಎಂದು ಚಿಂತಿಸಿದರು. ಅಮ್ಮ ಪೊರಕೆ ಮಾರುವವಳಿಗೆ ಅವಳು ಹೇಳಿದಷ್ಟೇ ಹಣ ಕೊಟ್ಟು ಕಳುಹಿಸಿದರು."[೧]

ಹೀಗೆ ಕುವೆಂಪು ತಮ್ಮ ಜೀವನದ ಪ್ರತಿ ಸಂದರ್ಭದಲ್ಲಿಯೂ ಸೂಕ್ಷ್ಮ ಸಂವೇದಿಯಾಗಿದ್ದರಿಂದ ಇತರರಿಗೆ ಹೊಳೆಯದಿದ್ದ ವಿಚಾರಗಳು ಅವರಿಗೆ ಹೊಳೆಯುತ್ತಿತ್ತು. ಮನಸ್ಸು ಪರರ ಕಷ್ಟಗಳಿಗಾಗಿ ನೋಯುತ್ತಿತ್ತು. ಅದರ ಪರಿಹಾರಕ್ಕಾಗಿ ಆಲೋಚಿಸುತ್ತಿತ್ತು.

---

[೧] 'ಮಗಳು ಕಂಡ ಕುವೆಂಪು', ಪುಟ ೧೮೬.

೭- ಹಾಸ್ಯ ದೃಷ್ಟಿ

ಭುವನದ ಸೃಷ್ಟಿಯಲ್ಲಿ ಸಂತೋಷ ಎಂಬುದು ಪ್ರತಿಯೊಂದು ಜೀವಿಯಲ್ಲಿಯೂ ಅಡಕವಾಗಿರುವ ಸಾರ್ವತ್ರಿಕ ಪ್ರಕ್ರಿಯೆ. ಇದರಿಂದ ಮುಕ್ತವಾದ ಪ್ರಾಣಿಯಿಲ್ಲವಷ್ಟೇ. ಮುಖ್ಯವಾಗಿ ನಾವು ಮಾನವನ ಸಂತೋಷದ ಬಗ್ಗೆ ಮಾತನಾಡೋಣ. ಮಾನವನಿಗೆ ನಾನಾ ಕಾರಣಗಳಿಗೆ ಸಂತೋಷವಾಗುತ್ತದೆ. ಸಂತೋಷವನ್ನುಂಟು ಮಾಡುವ ಒಂದು ಜೈವಿಕ ಕ್ರಿಯೆ ಹಾಸ್ಯ. ಹಾಸ್ಯ ಪ್ರವೃತ್ತಿ ಮಾನವನಲ್ಲಿರುವವರೆಗೆ ಆತನಿಗೆ ನಗು ಎಂಬುದು ಜೇಬಿನಲ್ಲಿರುವ ಹಣ. ನಗಬೇಕು, ನಗಿಸಬೇಕು. ಡಿ.ವಿ.ಜಿಯವರು ನಗುವಿನ ಬಗ್ಗೆ ಹೇಳುವ ಮಾತು ಶ್ಲಾಘನೀಯ

ನಗುವು ಸಹಜ ಧರ್ಮ; ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ.

ಕುವೆಂಪು ಅವರು ಋಷಿಕವಿ, ದರ್ಶನಕವಿ, ಯುಗದಕವಿ, ಜಗದಕವಿ, ಎಂಬುದೇನೇ ಇರಲಿ ಅವರಿಗೆ ಅದ್ಭುತವಾದ ಹಾಸ್ಯ ಪ್ರಜ್ಞೆಯಿತ್ತು ಎಂಬುದು ವಿಶಿಷ್ಟ. ಕುವೆಂಪುರವರನ್ನು ಗಂಭೀರ ದಾರ್ಶನಿಕ ತತ್ತ್ವ ಮೀಮಾಂಸಕರಾಗಿ ನಾವುಗಳು ಗುರುತಿಸಿಕೊಂಡಿದ್ದೇವೆ. ಅಂತೆಯೇ ಅವರೊಬ್ಬ ಉತ್ತಮೋತ್ತಮ ಹಾಸ್ಯಪ್ರಜ್ಞೆವುಳ್ಳವರು ಎಂಬುದು ಸತ್ಯದ ಸಂಗತಿ. ಅವರ ಕಾದಂಬರಿಗಳಲ್ಲಿ ಬಂದಿರುವ ಹಾಸ್ಯ ಪ್ರಸಂಗಗಳು ಹೊಟ್ಟೆ ಹುಣ್ಣು ಮಾಡುತ್ತವೆ ಎಂಬುದನ್ನು ಮರೆಯುವಂತಿಲ್ಲ. ಅವರ ಹರಟೆ ಪ್ರಬಂಧಗಳಾದ 'ಮಲೆ ನಾಡಿನ ಚಿತ್ರಗಳು' ಸಂಕಲನದಲ್ಲಿ 'ಹಾಸ್ಯ ಚಟಾಕಿ' ಎಂದೇ ತಲೆ ಬರಹದ ಪ್ರಬಂಧವಿದೆ. ಅಂತೆಯೇ 'ಈಶ್ವರನೂ ನಕ್ಕಿರಬೇಕು' ಎಂಬ ಕಥೆ ಹಾಸ್ಯದ ಬುಗ್ಗೆಯನ್ನೇ ಎಬ್ಬಿಸುತ್ತದೆ. ಅವರ ಮಹಾ ಕಾವ್ಯದಲ್ಲಿಯೂ ಹಾಸ್ಯ ದೃಷ್ಟಿಕೋನಕ್ಕೇನೂ ಕೊರತೆ ಮಾಡಿಲ್ಲ. ಪ್ರಸಂಗ ಮತ್ತು ಔಚಿತ್ಯವನ್ನರಿತು ಹಾಸ್ಯದ ಹೊಳೆಯನ್ನೇ ಹರಿಸಿದ್ದಾರೆ. ಅದು ಅವರ ಅಪೂರ್ವವಾದ ಹಾಸ್ಯ ಪ್ರವೃತ್ತಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

“ಕರೆದನರ್ಧಾಂಗಿಯಂ,
ಕಾಣದಿರೆ ಹೊಗೆಯ ಹೊಟ್ಟೆಯೊಳಿರ್ದು ಓ ಕೊಂಡಳಂ
ಕುರಿತು ಬಿನದಕೆ: ಪಸಿದೆನ್ ಆನುಣಲ್ವೇಳ್ಕುಮೆನೆ;
ಮಡದಿ : ಪಸಿಸೌದೆಯಿಂದಡುಗೆಯಂತಪ್ಪುದಯ್?
ಪೊಗೆಯನುಣಿಮೆನೆ; ರಾಮನಾಕೆಯಂ ಬಳಿಸಾರ್ದು,
ಮಸಿಯಿಡಿದು ನಲ್ಮೊಗಂ ಮುಸುಡಿಯವತಾರಂ
ತಾಳ್ದಿರ್ದುದು ಕಂಡು, ನಗೆ ತಡೆಯಲಾರದೆಯೆ
ಹೊರಗೆ ಬಂದಳ್ಗೆ ಬಿರಿವಿರಿಯೆ ನಗೆ ತೊಡಗಿದನ್,
ಬಂದ ಲಕ್ಷ್ಮಣನಣ್ಣನಾ ಪರಿಗೆ ಬೆರಗಾಗಲಾ
ರಾಮನೆಂದನ್: “ನೋಡು, ನಡೆ ಒಳಗೆ, ಅತ್ತಿಗೆಗೆ
ಬದಲೊರ್ವವಾನರಿಯ . . . ” ಎಂದರ್ದವಾಕ್ಯದೊಳೆ
ಗಹಗಹಿಸಿ ನಗುತಿರೆ, ...”[೧]

ಕುವೆಂಪು ಅವರ ಕೌಟುಂಬಿಕ ಜೀವನಕ್ಕೆ ಹೊಂದಿಕೊಂಡಂತೆ ಅವರ ಹಾಸ್ಯ ದೃಷ್ಟಿಯಾವಾಗಲೂ ಚುರುಕಾಗಿ ಕೆಲಸ ಮಾಡುತ್ತಿತ್ತು. ಹಾಸ್ಯದ ಸಂದರ್ಭವನ್ನು ಗುರುತುಹಚ್ಚಿ ಹಾಸ್ಯ ಮಾಡಿ ನಗಿಸಿ, ನಕ್ಕು ಬಿಡುತ್ತಿದ್ದರು. ಅವರ ನಗು ತಿಳಿ ಹಾಸ್ಯದಿಂದ ನವಿರಾಗಿರುತ್ತಿತ್ತು. ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಬಂಧುಗಳು, ಯಾರೇ ಇರಲಿ ನಗಿಸಿ ಬಿಡುತ್ತಿದ್ದರು. ಕುವೆಂಪು ಮಿತಭಾಷಿ; ಸತ್ಯ, ಆದರೆ ಹಾಸ್ಯ ಪ್ರಸಂಗದಲ್ಲಿ ಮೂಢಿಯಾಗಿ ನಡೆದುಕೊಳ್ಳುವ ರಸಹೀನ ಗುಣದವರಾಗಿರಲಿಲ್ಲ.

ಕುವೆಂಪು ಅವರು ಹಲವು ಸಂದರ್ಭದಲ್ಲಿ ಹಾಸ್ಯ ಮಾಡಿ ಮನೆ ಮಂದಿಯನ್ನು ನಗಿಸುತ್ತಿದ್ದುದು ಅದು ಹೆಚ್ಚು ಅಡುಗೆ ಊಟದ ಸಂದರ್ಭದಲ್ಲೇ. ಮಡದಿ ಮಕ್ಕಳನ್ನು ಪ್ರೋತ್ಸಾಹಿಸುತ್ತ ಹಾಸ್ಯ ಚಟಾಕಿಯನ್ನು ಹಾರಿಸುತ್ತಿದ್ದುದು ಹೀಗೆಂದು ತಾರಿಣಿಯವರು ನೆನಪಿಸಿಕೊಳ್ಳುತ್ತಾರೆ. “ತಂದೆಯವರಿಗೆ ಊಟ ತಿಂಡಿಯ ಪದಾರ್ಥಗಳು ಮೇಲೆ ಬಹಳ ಆಸಕ್ತಿ. ಎಲ್ಲವನ್ನು ಗಮನಿಸುತ್ತಿದ್ದರು. ತಿನ್ನುವಾಗ ಪದಾರ್ಥಗಳ ಅದು ರುಚಿಯಿಲ್ಲ ಇದು ರುಚಿಯಿಲ್ಲ ಎಂಬುದು ಅವರ ಬಾಯಿಂದ ಕೇಳಿಲ್ಲ. ಸ್ವಲ್ಪ ಉಪ್ಪು ಕಡಿಮೆ ಇದ್ದರೂ ರುಚಿ ಬಂದಿದೆ ಎಂದೇ ಶ್ಲಾಘಿಸುತ್ತಿದ್ದರು. ನಾವು ಅಡಿಗೆ ಕಲಿಯುವಾಗ ಹೇಗೆ ತಯಾರಿಸಿದರೂ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು. ಒಂದು ದಿನ ಆಹಾರ ಸಂಶೋಧನಾಲಯದವರು ಕಂಡುಹಿಡಿದ

[೧] ‘ಶ್ರೀರಾಮಾಯಣ ದರ್ಶನಂ’, ಪುಟ ೧೬೦.

ಮ್ಯಾಕರೋನಿ (ಶ್ಯಾವಿಗೆ ಪದಾರ್ಥ) ಹೊಸದಾಗಿ ಮಾರುಕಟ್ಟೆಗೆ ಬಂದಿತ್ತು. ಅಮ್ಮ ಅಡುಗೆ ಮಾಡಿ ನೋಡಲು ತಂದಿದ್ದರು. ಅಕ್ಕ, ಅಮ್ಮ ಸೇರಿ ಅದರಲ್ಲಿ ಉಪ್ಪಿಟ್ಟು ತಯಾರಿಸಿದರು. ತುಂಬ ರುಚಿಯಾಗಿತ್ತು. ಉಪ್ಪಿಟ್ಟು ತಿನ್ನುತ್ತಾ ತಂದೆಯವರು ತುಂಬಾ ರುಚಿಯಾಗಿದೆ ಎಂದು ಹೇಳಿ ಅಲ್ಲಿಯೇ ಒಂದು ಅಣುಕು ಕವನ ಕಟ್ಟಿದರು. "ಮಾನವನಾಗಿ ಹುಟ್ಟಿದ ಮ್ಯಾಲೆ ಏನೇನು ತಿಂದೀ? ಜಾಮೂನು, ಜಿಲೇಬಿ, ಮ್ಯಾಕರೋನಿ, ಬಾಸುಂದಿ ತಿಂದಿ" ಎಂದು ಹೇಳುತ್ತಾ ಉಪ್ಪಿಟ್ಟು ತಿಂದರು. ಹೀಗೆ ಅಪ್ಪ ತಿನ್ನುವ ಪದಾರ್ಥಗಳನ್ನು ತುಂಬ ಆಸ್ವಾದಿಸುತ್ತಾ ತಿನ್ನುತ್ತಿದ್ದರು. ಅವರ ಹಾಡಿನಲ್ಲಿ ಅವರಿಗೆ ಇಷ್ಟವಾದ ಜಾಮೂನು, ಜಿಲೇಬಿ ಬಾಸುಂದಿ ತಿಂಡಿಗಳು ಸೇರಿದ್ದವು. ಅಮ್ಮ 'ಸಾಕು ನಿಮ್ಮ ಪದ್ಯ, ತಿನ್ನುವ ಕಡೆ ಗಮನವಿರಲಿ, ತುಂಬ ಸತ್ವಯುತವಾದದ್ದು ಮ್ಯಾಕರೋನಿ ಮಿತವಾಗಿ ತಿನ್ನಿ, ಎಂದು ಎಚ್ಚರಿಕೆ ಹೇಳಿದರು."[೧]

ಇದೇ ರೀತಿಯ ಹಾಸ್ಯ ಪ್ರಸಂಗಗಳಿಗೆ ಕುವೆಂಪು ಅವರ ಬದುಕಿನಲ್ಲಿ ಕೊರತೆಯಿರಲಿಲ್ಲ. ಕುವೆಂಪು ಬಹಳ ಗಂಭೀರರೂ ಅವರು ಮಾತನಾಡುವುದೆಯಿಲ್ಲ ಇನ್ನು ಹಾಸ್ಯ ಮಾಡುವುದೆಲ್ಲಿ ಎಂದು ಹಲವರ ತಿಳಿವಳಿಕೆ. ಇದಕ್ಕೆ ಅಪವಾದವೆಂಬಂತೆ ಕುವೆಂಪು ಸನ್ನಿವೇಶ ಸಂದರ್ಭಗಳ ಹದವನ್ನರಿತು ಹಾಸ್ಯ ಮಾಡುತ್ತಿದ್ದರು. ಅವರ ಮಾತುಗಳು ನಗುವನ್ನು ಉಕ್ಕಿಸುತ್ತಿದ್ದವು ಎಂಬುದರಲ್ಲಿ ಮಿಥ್ಯವಿಲ್ಲ. ಮತ್ತೊಂದು ಸಂದರ್ಭದ ಅಪ್ಪನ ಹಾಸ್ಯ ಪ್ರವೃತ್ತಿಯನ್ನು ತಾರಿಣಿಯವರು ಹೇಳುವುದು ಹೀಗೆ, "ಕೆಲವು ಸಾರಿ ನಾನು ಕಲಾ ತಿಂಡಿ ಮಾಡುವಾಗ ತಂದೆಯವರು ಭಾಗವಹಿಸಿದ್ದು ಬಹಳ ತಮಾಷೆಯಾಗಿತ್ತು. ಆ ದಿನ ಅಮ್ಮ ನಿಪ್ಪಟ್ಟು ಮಾಡುತ್ತಿದ್ದರು. ನಮ್ಮ ಮನೆಯಲ್ಲಿ ಜನ ಜಾಸ್ತಿ ಎಂದು ಯಾವಾಗಲೂ ತಿಂಡಿಗಳ ಪ್ರಮಾಣ ಹೆಚ್ಚಾಗಿ ಮಾಡುತ್ತಿದ್ದರು. ಆ ದಿನವೂ ನಿಪ್ಪಟ್ಟು ಮಾಡಲು ಸಣ್ಣ ಬೆಟ್ಟದಷ್ಟು ಹಿಟ್ಟು ಕಲಿಸಿ ಇಟ್ಟಿದ್ದರು. ನಾನು ಕಲಾ ನಿಪ್ಪಟ್ಟು ಮಾಡುವುದು. ಅಮ್ಮ ಎಣ್ಣೆಗೆ ಹಾಕಿ ಕರಿಯುವುದು ನಡೆಯುತ್ತಿತ್ತು. ಅಪ್ಪ ಬಂದವರು ನಾನು ಮಾಡುವೆ ಎಂದು ನಮ್ಮೊಡನೆ ಕುಳಿತರು. ಹಿಂದೆ ಒಮ್ಮೆ ಕೋಡುಬಳೆ ಹೀಗೆ ನಮ್ಮೊಡನೆ ಮಾಡಿದ್ದರು. ಅಮ್ಮ ತಂದೆಯವರಿಗೆ ಮಾಡಲು ತಟ್ಟೆ, ಹಿಟ್ಟು ಇತ್ಯಾದಿ ಒದಗಿಸಿದರು. ನಾನು ಕಲಾ ಮಾಡುವುದನ್ನು ತೋರಿಸಿಕೊಟ್ಟೆವು. ತಂದೆಯವರು ನಿಧಾನ ಹಿಟ್ಟು ಉಜ್ಜಿ ಉಂಡೆ ಮಾಡಿಕೊಂಡು ತಟ್ಟಿ ಆಕಾರ ಮಾಡುತ್ತಿದ್ದರು. ಅವರು ಒಂದು ಮಾಡುವುದರಲ್ಲಿ ನಾವು ಆರು, ಎಂಟು ನಿಪ್ಪಟ್ಟು ಮಾಡುತ್ತಿದ್ದೆವು. ಇಪ್ಪತ್ತೈದು ಮೂವತ್ತು ನಿಪ್ಪಟ್ಟು ಮಾಡಿ ಸಾಕಾಯಿತೆಂದು ಎದ್ದು ಹೋದರು. ಆಕಾರ ಮಾಡುವಾಗ ಅಮ್ಮ ಬೇಯಿಸಿದ ನಿಪ್ಪಟ್ಟು ತಿಂದಿದ್ದರು. ಮತ್ತೆ ಕಾಫಿ ಕುಡಿಯುವಾಗಲೂ ನಿಪ್ಪಟ್ಟು ತಿಂದರು. ಮರುದಿನ ಬೆಳಿಗ್ಗೆ

---

[೧] 'ಮಗಳು ಕಂಡ ಕುವೆಂಪು', ಪುಟ ೬೭.

ಕಾಫಿಗೆ ಕುಳಿತಾಗ ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ ಎಂದರು. ಅಮ್ಮ 'ಏಕೆ?' ಎಂದರು. ಅಪ್ಪ ರಾತ್ರಿಯೆಲ್ಲಾ ಹೊಟ್ಟೆಯಲ್ಲಿ ನಿಪ್ಪಟ್ಟಿನ ಹಾವಳಿ' ಎಂದಾಗ ಎಲ್ಲರೂ ನಕ್ಕೆವು. ಅಮ್ಮ ನಾನು ನಿಮಗೆ ಹೇಳಿದೆ ಕರಿದಿರುವುದು ಹೆಚ್ಚು ತಿನ್ನಬೇಡಿ ಎಂದು. ನೀವು ಕೇಳಲಿಲಿಲ್ಲ ಎಂದರು. ಏನು ಮಾಡಲಿ ನಾಲಿಗೆಯ ಸಂಯಮ ಸಾಲದು. ಇನ್ನೂ ಸಂಯಮ ಸಾಧಿಸಬೇಕು ಎಂದರು. ತಂದೆಯವರಿಗೆ ಅರವತ್ತೈದನೆಯ ವಯಸ್ಸಿನ ಅನಂತರ ಅಮ್ಮ ಕರಿಯುವ ಪದಾರ್ಥ ಮಾಡುವುದು ಕಡಿಮೆ ಮಾಡಿದರು. ಆದರೂ ಕೆಲವು ಸಮಯ ಹಪ್ಪಳ, ಸಂಡಿಗೆ ಕರಿದಾಗ ತಂದೆಯವರು 'ಊಟದಲ್ಲಿ ಇವತ್ತು ಹಪ್ಪಳ ವಿದೆಯೆ? ಮೊಸರನ್ನಕ್ಕೆ ಹಪ್ಪಳ ಉಪ್ಪಿನಕಾಯಿ ತಿನ್ನಬೇಕು. ಹಪ್ಪಳ ಸಂಡಿಗೆ ತುಪ್ಪದಲ್ಲಿ ಕರೆದರೆ ಎಪ್ಪತ್ತಾದರೂ ಹೊಡೆದೇನು? ಎಂದರು. ಕೂಡಲೇ ಅಮ್ಮ 'ಸಧ್ಯ ಆ ಕೆಲಸ ಮಾಡಬೇಡಿ. ಬೆಳಿಗ್ಗೆ ಎದ್ದು ರಾತ್ರಿಯೆಲ್ಲಾ ಹೊಟ್ಟೆಯಲ್ಲಿ ಹಪ್ಪಳದ ಹಾವಳಿ' ಅಂತ ಹಾಡುವಿರಿ ಎಂದು ಎಲ್ಲರನ್ನೂ ನಗಿಸಿದ್ದರು. ಈ ತರಹದ ಸ್ವಾರಸ್ಯಕರವಾದ ಮಾತುಗಳನ್ನು ಸವಿಯುತ್ತಾ ನಮ್ಮ ಊಟ, ತಿಂಡಿಗಳು ಸಾಗುತ್ತಿತ್ತು."[೧]

ಕುವೆಂಪು ಹಾಸ್ಯ ಮಾಡುತ್ತಿದ್ದರು. ಹಾಸ್ಯಕ್ಕೆ ಆಹಾರವಾಗುತ್ತಿದ್ದರು. ಅವರು ಹಾಸ್ಯ ಮಾಡುವಾಗ ಎಚ್ಚರಿಕೆಯನ್ನು ವಹಿಸುತ್ತಿದ್ದರು. ನಾವು ಮಾಡುವ ಹಾಸ್ಯ ಇತರರಿಗೆ ನೋವುಂಟು ಮಾಡಬಾರದೆಂಬ ಕಳಕಳಿಯಿಂದ ಕುವೆಂಪು ಹಾಸ್ಯ ಪ್ರಯೋಗ ಮಾಡುತ್ತಿದ್ದರು. ಹಾಸ್ಯ ಮಾನವ ಬದುಕಿನಲ್ಲಿ ಪ್ರಮುಖ ರಸವೆಂದು ಕುವೆಂಪು ನಂಬಿದ್ದರು. ಬಾಪೂಜೀ ಮಹಾತ್ಮಗಾಂಧೀ ಅವರು ಹಾಸ್ಯದ ಬಗ್ಗೆ ಹೀಗೆ ಹೇಳುತ್ತಾರೆ. 'ನನ್ನಲ್ಲಿ ಹಾಸ್ಯ ಪ್ರವೃತ್ತಿಯಿಲ್ಲದಿದ್ದರೆ ನಾನು ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ!' ಗಾಂಧೀಜಿಯವರ ಈ ಮಾತು ಹಾಸ್ಯದ ಮಹತ್ವವನ್ನು ತಿಳಿಸುತ್ತವೆ. ಜೀವನದ ನಾನಾ ಬಾಧೆಯನ್ನು ನಗುತ್ತಾ ದೂರ ಮಾಡಿಕೊಳ್ಳುವುದು ಜಾಣತನ. ಬದುಕನ್ನು ಹಗುರವಾಗಿ ಪರಿಗಣಿಸಿದಾಗ ಭೂಮ ಸಮಸ್ಯೆಗಳು ಜರಡು ಕಾಯಿಗಳಾಗುತ್ತವೆ. ಕುವೆಂಪು ತಮ್ಮ ಜೀವನವನ್ನು ನಡೆಸಿದ್ದು ಅಂತೆಯೇ. ಹಾಸ್ಯ ಅವರ ಬದುಕಿನ ಕೊನೆಯವರೆಗೂ ಹಾಸು ಹೊಕ್ಕಾಗಿತ್ತು. ಅವರ ಹಾಸ್ಯವನ್ನು ನೇರವಾಗಿ ಕಂಡುಂಡವರೇ ಪುಣ್ಯವಂತರು. ಅದರ ಭಾಗಶಃ ಪಾಲು ಅವರ ಸಾಹಿತ್ಯವನ್ನುಂಡವರಿಗೆ ಲಭ್ಯವಷ್ಟೇ.

[೧] 'ಮಗಳು ಕಂಡ ಕುವೆಂಪು', ಪುಟ ೬೮.

೮-ಪ್ರತಿಕ್ಷಣದ ವಿಶ್ವಮಾನವ

ಮಾನವ ಬದುಕಿನ ಅಸಮತೆಗಳು, ತರತಮಗಳು, ಯಾರಿಂದ, ಯಾಕೆ ಹುಟ್ಟಿದವು ಎಂಬುದು ಚರ್ಚೆಯ ವಿಷಯವಾಗಿದೆ. ಇದು ಹುಟ್ಟಿರುವುದು ಸ್ವಾರ್ಥಪರರಿಂದ ಇದರ ಪರಿಣಾಮ, ನಿರಂತರ. ಅಸಮಾನತೆಯ ಗೊಡ್ಡು ಸಂಪ್ರದಾಯಗಳ, ಮತ ಭ್ರಾಂತಿಯ ಪಾಲನೆ. ಇದರ ನಿರ್ಮೂಲನೆಗೆ ಪ್ರಪಂಚದ ಪ್ರತಿಯೊಬ್ಬನೂ ಕಂಕಣ ಬದ್ಧನಾಗಬೇಕಿದೆ. 'ನಾನು' ಎನ್ನುವ ಬದಲು 'ನಾವು' ಎನ್ನುವ ವಿಶಾಲ ಮನಸ್ಸನ್ನು ಹೊಂದಬೇಕಿದೆ. ಹುಟ್ಟಿದ ಪ್ರತಿಯೊಬ್ಬನೂ ಸಚೇತನನಾಗಿರುತ್ತಾನೆ. ತನ್ನ ಬುದ್ಧಿಭಾವಗಳಿಗೆ, ಮತ, ಜಾತಿ, ಗಡಿ, ಬಣ್ಣ ಮುಂತಾದವುಗಳ ಸೋಂಕನ್ನು ಪಡೆದು ಸಾಂಕ್ರಾಮಿಕ ರೋಗಿಯಾಗುತ್ತಾನೆ. ಇದಕ್ಕೆ ಪರಿಹಾರ, ಈ ಎಲ್ಲಾ ದುಷ್ಟ ಸೋಂಕುಗಳು ಕ್ಷಯವಾಗುವ ಪರಿಸರದ ಸೃಷ್ಟಿ ಮಾಡಿಕೊಳ್ಳುವುದು. ಹುಟ್ಟುವ ಮಗುವಿನ ಬುದ್ಧಿ ಭಾವವನ್ನು ಭಾವೈಕ್ಯದ ಸಾರದಲ್ಲಿ ಮುಳುಗಿಸಬೇಕು. ಸತ್ಯ, ಧರ್ಮ, ಅಹಿಂಸೆ, ಉಪಕಾರ, ಪ್ರಾಮಾಣಿಕತೆಗಳ ಮಹತ್ವವನ್ನು ತಿಳಿಸಬೇಕು. ಹಾಗಿದ್ದಲ್ಲಿ ಮಾತ್ರ ಬುದ್ಧ, ಬಸವ, ಗಾಂಧೀ, ಲೋಹಿಯಾ, ಅಂಬೇಡ್ಕರ್ ಮೊದಲಾದ ಭ್ರಾತೃತ್ವ ತತ್ತ್ವದ ಅನುಷ್ಠಾನದ ಹರಿಕಾರರ ಕನಸು ನನಸಾಗುತ್ತದೆ.

ಈ ಮಹಾತ್ಮರ ಕನಸನ್ನು ನನಸು ಮಾಡುವ ಹಾದಿಯಲ್ಲಿ ತಮ್ಮನ್ನು ತಾವು ದುಡಿಸಿಕೊಂಡವರು ಮಹಾಕವಿ ಕುವೆಂಪು. ಅವರು "ಮನುಷ್ಯ ಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಿದ ವಿಶಾಲ ಹೃದಯಿ ತಮ್ಮ ಬದುಕು ಬರವಣಿಗೆಯಲ್ಲಿ 'ವಿಶ್ವಮಾನವ' ಸಂದೇಶವನ್ನು ಸಾರುತ್ತಾ ವಿಶ್ವ ಭ್ರಾತೃತ್ವವನ್ನು ಗಟ್ಟಿಗೊಳಿಸಿದ ಮೇರು ವ್ಯಕ್ತಿತ್ವ ಅವರದು. ಮಗಳು ತಾರಿಣಿ ತಾನು ಕಂಡ ಅಪ್ಪನ ವಿಶ್ವಮಾನವ ಪ್ರಜ್ಞೆಯನ್ನು ತಮ್ಮ ಸ್ಮೃತಿ ಪಟಲದಿಂದ ಅನಾವರಣಗೊಳಿಸುವುದು ಹೀಗೆ. "ಅಮೆರಿಕಾ ಅಧ್ಯಕ್ಷ ನಿಕ್ಸನ್ ವಿಯಟ್ನಾಂನಲ್ಲಿ ಬಾಂಬ್ ದಾಳಿ ಮಾಡಿದ ಸುದ್ದಿ ದೊಡ್ಡದಾಗಿ ಬಂದಿತ್ತು. ತಂದೆಯವರು ಓದಿ ಪ್ರಕ್ಷುಬ್ಧರಾದರು. ನಿಕ್ಸನ್ ಹಿಟ್ಲರ್‌ಗಿಂತ ಭಯಂಕರ ಕೊಲೆಯಲ್ಲಿ ತೊಡಗಿದ್ದಾನೆ ಎಂದು ಉದ್ಗರಿಸಿದರು. ಅಲ್ಲಿಯ ಚುನಾವಣೆಗೆ ನಿಕ್ಸನ್ ಎದುರು ಇನ್ನೊಬ್ಬರು ಸ್ಪರ್ಧಿಸುವ ಸುದ್ದಿ ಓದುತ್ತಾ 'ದೇವರೆ ನಿಕ್ಸನ್ ಸೋಲಲಿ, ವಿಯಟ್ನಾಂ ಕೊಲೆ ನಿಲ್ಲಲಿ ಎಂದು ಪ್ರಾರ್ಥಿಸುವೆ, ಎನ್ನುತ್ತಾ ಪತ್ರಿಕೆಯು ತುಂಬಾ ಕೊನೆ ಮುಟ್ಟದ ಸಮಸ್ಯೆಗಳಿಂದ ತುಂಬಿದೆ"[೧] ಎಂದು ನೊಂದುಕೊಳ್ಳುತ್ತಿದ್ದರು.

---

[೧] 'ಮಗಳು ಕಂಡ ಕುವೆಂಪು', ಪುಟ ೩೫.

ಹೀಗೆ ಕುವೆಂಪು ಅವರು ವಿಶ್ವಮಾನವ ಪ್ರಜ್ಞೆಯನ್ನು ನಿಶಿತಮತಿಯಾಗಿ ಬಳಸಿಕೊಂಡಿದ್ದರು. ಈ ತತ್ತ್ವವನ್ನು ಸಾರುವುದು, ಅದರಂತೆ ನಡೆಯಲು ಸಹೃದಯರಿಗೆ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುವುದು, ಅದಕ್ಕಾಗಿ ಹಂಬಲ ಪಡುತ್ತಿದ್ದುದು ಅಷ್ಟಿಷ್ಟಲ್ಲ. "ನನ್ನ ಎಲ್ಲ ಬರವಣಿಗೆಯನ್ನು ಮರೆತರೂ ತೊಂದರೆ ಇಲ್ಲ, ನನ್ನ ವಿಶ್ವಮಾನವ ಸಂದೇಶವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ; ಇತರರಿಗೂ ಸಂದೇಶವನ್ನು ಹಂಚಿ."[೧] ಎಂದು ಕುವೆಂಪು ಅಭಿಪ್ರಾಯಪಡುತ್ತಿದ್ದರು. ಸರ್ವರಿಗೂ, ಒಳಿತಾಗಲಿ, ಸರ್ವೋದಯವಾಗಲಿ, ಸರ್ವರಿಗೂ ಶಾಂತಿ ಲಭಿಸಲಿ ಎಂಬ ಅವರ ಹಾರೈಕೆ ವಿಶ್ವಭಾವನೆಯುಳ್ಳದ್ದು. ಕುವೆಂಪು ಅವರ ಹಾರೈಕೆ ಊರ್ಧ್ವಗಾಮಿಯಾದದ್ದು. ವಿಶಾಲವಾದದ್ದು. ಸಕ್ರಿಯ ಜೀವನದ ಆರೋಗ್ಯ ಚಿಂತನೆಯದ್ದು.

ಕುವೆಂಪು ಅವರ ಆಲೋಚನೆ ಪ್ರಪಂಚ ಸುಖವನ್ನು ಸ್ಥಿರಗೊಳಿಸುವಂತದ್ದು ಬಾಳ ಬಟ್ಟೆಯಲ್ಲಿ ಹಳ್ಳ ದಿಣ್ಣೆಗಳಿಂದ ಮುಕ್ತವಾದದ್ದು; ಸರ್ವರ ಬದುಕು ಶಾಂತಿಮಯವಾಗಲಿ, ಅವರ ಮನಸ್ಸು ಮತರಹಿತವಾಗಲಿ, ಜಾತಿರಹಿತವಾಗಲಿ, ವೈಷಮ್ಯರಹಿತವಾಗಲಿ ಎಂದು ಶ್ರೀ ಗುರುವಿನಲ್ಲಿ ಯಾಚಿಸುವಂಥದ್ದು, ಈ ಮುಕ್ತ ಹೃದಯಿಗೆ ಮತ ಪ್ರಚಾರದ ಬಗ್ಗೆ ತಿಳಿ ಹೇಳಿಕೆ ಹೇಳಲು ಬಂದ ಪಾದ್ರಿಗೆ ಸಿಕ್ಕ ಪಾಠದ ಪೂರ್ಣ ಸಾರಾಂಶ 'ವಿಶ್ವಮಾನವ ಸಂದೇಶ'ದ ಭಾಗವೇ ಆಗಿದೆ. ಆ ಸಂದರ್ಭವು ತಾರಿಣಿಯವರ ನೆನಪಿನಲ್ಲಿ ಉಳಿದಿರುವುದು ಹೀಗೆ – "ಏತಕ್ಕಾಗಿ ಇನ್ನೂ ಈಗಿನ ಕಾಲದಲ್ಲಿ ಈ ರೀತಿ ಮತಪ್ರಚಾರ ಮಾಡುವಿರಿ? ಈ ಕಾಲದಲ್ಲಿ ಎಲ್ಲರೂ ವಿದ್ಯಾಭ್ಯಾಸ ಪಡೆದು ಅವರವರಿಗೆ ಬೇಕಾದ ದೃಷ್ಟಿ ಅವರವರೆ ಬೆಳೆಸಿಕೊಳ್ಳುತ್ತಾರೆ. ಏಸುಕ್ರಿಸ್ತ ಎಲ್ಲರನ್ನೂ ತಮ್ಮ ಮತಕ್ಕೆ ಸೇರಿಸಿ ಎಂದು ಹೇಳಿರುವನಾ? ಅವನು ಎಷ್ಟು ಉದಾತ್ತ ಭಾವನೆಗಳನ್ನು ಹೇಳಿರುವನು. ಅದನ್ನಾದರೂ ಓದಿರುವಿರಾ? ಇದನ್ನೆಲ್ಲಾ ನನಗೆ ಹೇಳಲು ಬಂದಿರುವಿರಾ? ನಾನು ಓದಿರುವುದರಲ್ಲಿ ಕಾಲು ಅಂಶವಾದರೂ ನೀವು ಓದಿರುವಿರಾ? ಎಲ್ಲಾ ಪಂಗಡಗಳ, ಜಾತಿ ಧರ್ಮದ ಕಚ್ಚಾಟ ಹೋಗಲಾಡಿಸಲೇ ಶ್ರೀ ರಾಮಕೃಷ್ಣರು ಈ ಯುಗದಲ್ಲಿ ಬಂದಿದ್ದು, ಅವರ ವಿಚಾರವಾಗಿ ನಿಮಗೇನಾದರೂ ತಿಳಿದಿದೆಯೇ? ವಿವೇಕಾನಂದರು ಚಿಕಾಗೋದಲ್ಲಿ ಭಾಷಣ ಮಾಡಿದ್ದು ಗೊತ್ತಿದೆಯೇ ಅವರನ್ನು ಇಡೀ ಪ್ರಪಂಚವೇ ಕೊಂಡಾಡಿರುವುದು ನಿಮಗೂ ಗೊತ್ತಿರಬೇಕು ಅಲ್ಲವೇ? ಈಗ ಜನಕ್ಕೆ ಬೇಕಾಗಿರುವುದು ಉತ್ತಮ ಬದುಕು, ಉದಾತ್ತ ತತ್ತ್ವಗಳು, ಮನುಜ ಮತ ಮತ್ತು ವಿಶ್ವಪಥ, ಮತಾಂತರವಲ್ಲ. ಬರೀ ಬಾಯಲ್ಲಿ ಹೇಳುತ್ತಾ ಹೋದರೆ ಏನು ಪ್ರಯೋಜನ? ಸ್ವಲ್ಪವಾದರೂ ಏಸು ಹೇಳಿದ ಕೆಲಸವನ್ನಾದರೂ ಮಾಡಿರುವಿರಾ? ನಮಗೆ ಉಪದೇಶ ಕೊಡುವ ಅಗತ್ಯವಿಲ್ಲ. ನೀವು ಶ್ರೀ

---

[೧] 'ಮಗಳು ಕಂಡ ಕುವೆಂಪು', ಪುಟ ೪೩೯.

ರಾಮಕೃಷ್ಣ ವಿವೇಕಾನಂದರ ಸಾಹಿತ್ಯ ಓದಿ ವಿಶಾಲ ಮನಸ್ಸು, ಒಳ್ಳೆಯ ಭಾವನೆಗಳನ್ನು ಬೆಳೆಸಿಕೊಳ್ಳಿ. ಇಲ್ಲೆ ಹತ್ತಿರದಲ್ಲಿ ರಾಮಕೃಷ್ಣ ಆಶ್ರಮ ಇದೆ. ಅಲ್ಲಿಗೆ ಹೋಗಿ, ಪುಸ್ತಕ ವಿಭಾಗದಲ್ಲಿ ಪುಸ್ತಕಗಳು ಮಾರಾಟಕ್ಕೆ ದೊರೆಯುತ್ತದೆ. ನಿಮಗೆ ಬೇಕಾದ ಪುಸ್ತಕ ತೆಗೆದುಕೊಂಡು ಓದಿ, ನಿಮ್ಮ ಮನಸ್ಸು, ಹೃದಯ ವಿಶಾಲ ಮಾಡಿಕೊಳ್ಳಿ. ವಿಶ್ವಮಾನವರಾಗಿ, ನನ್ನ ವಿಶ್ವಮಾನವ ಸಂದೇಶವನ್ನು ಕೊಡುವೆನು. ಓದಿ ವೈಚಾರಿಕ ಬುದ್ಧಿ ಬೆಳೆಸಿಕೊಳ್ಳಿ. ಹುಟ್ಟುತ್ತಲೆ. ಎಲ್ಲರೂ ವಿಶ್ವಮಾನವರು ಬೆಳೆಯುತ್ತಾ ನಾವೇ ಅವರನ್ನು ಅಲ್ಪ ಮಾನವರನ್ನಾಗಿ ಮಾಡುತ್ತೇವೆ. ಜಾತಿ, ಮತ, ವರ್ಗ, ಪಂಗಡ ಎಂದು ಹೊಡೆದಾಡುವುದು ಬಡಿದಾಡುವುದು ಜಾಸ್ತಿಯಾಗುತ್ತಿದೆ. ಈ ಅಲ್ಪ ಮಾನವನ್ನನ್ನು ವಿಶ್ವಮಾನವನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯ ಎಂದು ಹೇಳಿ 'ವಿಶ್ವಮಾನವ ಸಂದೇಶದ ಬಗ್ಗೆಯೂ ಆ ಪಾದ್ರಿಗೆ ಮಾತಾಡಲು ಅವಕಾಶವಿಲ್ಲದಂತೆ ಸಾಕಷ್ಟು ವಿವರಿಸಿದರು. ಪಾದ್ರಿಯೂ ಕಂಗಾಲಾಗಿ ಏನೂ ಮಾತಾಡಲೂ ತೋಚದೆ ಸುಮ್ಮನೆ ಕುಳಿತಿದ್ದರು."[೧]

ಹೀಗೆ ಕುವೆಂಪು ಅವರು ತಿಳಿವಳಿಕೆಗೆ ನೀಡಿದ 'ವಿಶ್ವಮಾನವ ಸಂದೇಶ'ದ ಪ್ರತಿಯನ್ನು ಆ ಪಾದ್ರಿ ಬಿಸಾಡಿ ಹೋಗಿದ್ದು ಬೇರೆ ವಿಷಯ. ಒಳ್ಳೆಯ ವಿಷಯಗಳು ಮಂದ ಮತಿಗಳಿಗೆ ಬಹುಬೇಗ ಜೀರ್ಣವಾಗುವುದಿಲ್ಲ. ಅವರ ದರ್ಶನ ದರ್ಪಣ ಧೂಳು ಹಿಡಿದಿರುತ್ತದೆ ಎಂಬುದು ಆ ಪಾದ್ರಿಯಿಂದ ನಿದರ್ಶಿತವಾಗುತ್ತದೆ.

> "ಅನ್ನವನು ಇಕ್ಕುವುದು ನನ್ನಿಯನು ನುಡಿಯುವದು
> ತನ್ನಂತೆ ಪರರ ಬಗೆದಡೆ ಕೈಲಾಸ
> ಬಿನ್ನಾಣವಕ್ಕು . . . . "

ಎಂದು ಹೇಳಿರುವ ಸರ್ವಜ್ಞನ ತತ್ತ್ವವನ್ನು ಅಳವಡಿಸಿಕೊಂಡರೆ ವಿಶ್ವ ಭ್ರಾತೃತ್ವವನ್ನು ತಡೆಯಿಲ್ಲದೆ ಪಾಲಿಸಬಹುದು. ಆದರೆ ಜನ ಸಮುದಾಯ 'ತನ್ನಂತೆ ಪರರನ್ನು' ಭಾವಿಸುವುದು ತೀರಾ ವಿರಳತಮ. ಎಲ್ಲರಲ್ಲೂ ತರತಮಭಾವಗಳು ಬೇರುಬಿಟ್ಟಿವೆ. ಅವು ಬಲಿಯುವ ಮುನ್ನವೇ ಅದನ್ನು ಕಿತ್ತಿಡುವ 'ವಿಶ್ವಮಾನವ ಸಂದೇಶ'ದ ವಿವೇಕ ವ್ಯಾಖ್ಯಾನದ ಅಗತ್ಯ ಮಾನವನ ಬದುಕಿಗಿದೆ. ಅದಕ್ಕಾಗಿಯೇ ಕುವೆಂಪುರವರು ತಮ್ಮಲ್ಲಿನ ಯಾವುದೇ ರೀತಿಯ ಜಾಡ್ಯಕ್ಕೂ ಜಯಸಿಗದೆ ಇರಲಿ ಎಂದು ಪ್ರಾರ್ಥಿಸುತ್ತಾರೆ. ಉದಾಹರಣೆಗೆ ತಮ್ಮ ಸೊಸೆಯರ ವಿಷಯವಾಗಿ "ನನ್ನ ಹೆಣ್ಣು ಮಕ್ಕಳನ್ನು ಹೇಗೆ ನೋಡುವೆನೋ ಹಾಗೆ ಸೊಸೆಯನ್ನೂ ಮಗಳಂತೆ ನೋಡುವ

---

[೧] 'ಮಗಳು ಕಂಡ ಕುವೆಂಪು', ಪುಟ ೩೦೯.

ಬುದ್ಧಿ, ಮನಸ್ಸು ಕೊಡು ಎಂದು ಶ್ರೀಮಾತೆಯನ್ನು ದಿನಾ ಪ್ರಾರ್ಥಿಸುವೆ ಎಂದರು."[೧] ಎಂದು ಮಗಳು ತಮ್ಮ ತಂದೆಯ ವಿಶ್ವಮಾನವ ಹೃದಯವನ್ನು ತೆರೆದಿಡುತ್ತಾರೆ.

ಕುವೆಂಪು ವಿಶ್ವಮಾನವ ಬದುಕನ್ನು ಬದುಕಿದವರು ಅದರ ಪೂರ್ಣಾನಂದವನ್ನು ಉಂಡವರು. ಅವರ ಬದುಕಿನ ಕೊನೆಯಲ್ಲಿ ವಿಶ್ವಮಾನವತೆಯನ್ನೇ ಮೆರೆದರು. ಬೇರೆ ಯಾವ ಉಪಾಧಿಯನ್ನು ಹಚ್ಚಿಕೊಳ್ಳದ ಮುಕ್ತ ಸ್ಥಿತಿಯನ್ನು ಅವರು ಪಡೆದಿದ್ದರು.

ವಿಶ್ವಮಾನವ ಗೀತೆ – ಅನಿಕೇತನ

"ಓ ನನ್ನ ಚೇತನ,
ಆಗು ನೀ ಅನಿಕೇತನ!

ರೂಪ ರೂಪಗಳನು ದಾಟಿ
ನಾಮ ಕೋಟಿಗಳನು ಮೀಟಿ
ಎದೆಯ ಬಿರಿಯೆ ಭಾವದೀಟಿ

ಓ ನನ್ನ ಚೇತನ,
ಆಗು ನೀ ಅನಿಕೇತನ!

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,

ಓ ನನ್ನ ಚೇತನ,
ಆಗು ನೀ ಅನಿಕೇತನ!

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;
ಓ ಅನಂತವಾಗಿರು!

ಓ ನನ್ನ ಚೇತನ,
ಆಗು ನೀ ಅನಿಕೇತನ!

ಅನಂತತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತವಾಗು
ಆಗು, ಆಗು, ಆಗು, ಆಗು;

ಓ ನನ್ನ ಚೇತನ,
ಆಗು ನೀ ಅನಿಕೇತನ!"[೨]

---

[೧] 'ಮಗಳು ಕಂಡ ಕುವೆಂಪು', ಪುಟ ೧೫೪.
[೨] ಕುವೆಂಪು ಸಮಗ್ರ ಕಾವ್ಯ, ಸಂ. ೨ ಪುಟ ೮೯೩

೯–ಉದಯರವಿಯಲ್ಲಿ ಬಂಧು–ಮಿತ್ರರೊಡನೆ ಕುವೆಂಪು

ಕುವೆಂಪು ಅವರದು ಸ್ಥಾವರ ವ್ಯಕ್ತಿತ್ವ; ಗಂಭೀರ ನಡಾವಳಿ, 'ಉದಯರವಿ' ಮನೆಯನ್ನು ಬಿಟ್ಟು ಅವರು ಆಚೀಚೆ ಹೋಗುತ್ತಿದ್ದದ್ದೆ ವಿರಳ. ಅವರನ್ನೇ ಹುಡುಕಿಕೊಂಡು ಬರುತ್ತಿದ್ದ ಜನಸಂಖ್ಯೆ ಹೇರಳ. ಕುವೆಂಪು ಅವರ ವ್ಯಕ್ತಿತ್ವದ ಬಗ್ಗೆ ಒಂದು ಆಕ್ಷೇಪಣೆಯಿದೆ. ಅದೇನೆಂದರೆ ಅವರು ಯಾರೊಡನೆಯೂ ಸರಿಯಾಗಿ ಮಾತನಾಡುವುದಿಲ್ಲ. ಗಂಭೀರವಾದಿ, ಮಿತಭಾಷಿ, ನಿಷ್ಠುರವಾದಿಯೆಂದು. ಹೌದು, ಈ ಎಲ್ಲಾ ಗುಣಗಳು ಕುವೆಂಪು ಅವರಲ್ಲಿ ಉಚಿತ ರೀತಿಯಲ್ಲಿರುತ್ತಿದ್ದವೇ ಹೊರತು ಅನೌಚಿತ್ಯದಿಂದಲ್ಲ. ಅವರು ಪ್ರಸಿದ್ಧಿಗೆ ಬಂದಂತೆ ಅವರನ್ನು ನೋಡಲು ಬರುವವರ ಸಂಖ್ಯೆ ಅಧಿಕವಾಗತೊಡಗಿದಾಗ; ಅವರ ಸಾಹಿತ್ಯ ಸೃಜನೆ ಮತ್ತು ಓದಿಗೆ ಅಡಚಣೆಯಾದ ಸಂದರ್ಭದಲ್ಲಿ ಅವರ ಮನಸ್ಸು ಇರುಸು–ಮುನಿಸಿನಿಂದ ವರ್ತಿಸಿದೆ, ಇಲ್ಲವೆಂದಲ್ಲ ಆದರೆ ಅದು ಅನಿವಾರ್ಯವೇ ಅಲ್ಲವೇ? ಇಂಥ ಸಂದರ್ಭಗಳನ್ನು ನೇಪಥ್ಯಕ್ಕೆ ಸರಿಸಿದರೆ ಅವರಷ್ಟು ಆತ್ಮೀಯವಾಗಿ ಬಂಧು–ಮಿತ್ರರೊಡನೆ ಕಾಲ ಕಳೆಯುವವರು ಮತ್ತೊಬ್ಬರಿಲ್ಲ ಎಂದು ನಮಗನ್ನಿಸಿದ್ದರೆ ಆಶ್ಚರ್ಯವಿಲ್ಲ. ಬಸವಣ್ಣನವರ ತತ್ತ್ವ ಸಿದ್ಧಾಂತದಂತೆಯೇ ಶ್ರೀ ಕುವೆಂಪು ಅವರ ಮನೋಧೋರಣೆಯಿತ್ತು; ಎಂಬುದರಲ್ಲಿ ಅನುಮಾನವಿಲ್ಲ.

> "ಏನುಬಂದಿರಿ, ಹದುಳವಿದ್ದಿರಿ, ಎಂದರೆ ನಿಮ್ಮ ಮೈಸಿರಿ ಹಾರಿ
> ಹೋಹುದೇ? ಕುಳ್ಳಿರಿ ಎಂದರೆ ನೆಲಕುಳಿಹೋಹುದೇ? ಒಡನೆ ನುಡಿದರೆ
> ಶಿರಹೊಟ್ಟೆ ಒಡೆವುದೇ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದರೆ
> ಮೂಗ ಕೊಯ್ಯದೆ ಮೊಣ್ಣನೇ ಕೂಡಲ ಸಂಗಯ್ಯ."

ಬಸವಣ್ಣನವರ ಈ ವಚನದ ಹೂರಣವನ್ನು ಕುವೆಂಪು ಅವರು ಚೆನ್ನಾಗಿ ಬಲ್ಲವರಾಗಿದ್ದರು. ಅವರೆಂದೂ ಬಂಧು–ಮಿತ್ರರನ್ನು ಕಡೆಗಣಿಸಿಲ್ಲ. ಒಂದು ಸಂದರ್ಭದಲ್ಲಿ ಮಗಳು ತಾರಿಣಿಯವರೊಂದಿಗೆ ಕುವೆಂಪು ಅವರಾಡಿದ ಮಾತುಗಳು ತುಂಬ ಮಹತ್ವದವು. "ನೋಡಕ್ಕಾ ಅವೆಲ್ಲಾ ನನಗೆ ಬಂದಿರುವ ಕಾಗದಗಳು. ನೆನಪಿನ ದೋಣಿ ಬರೆಯುವಾಗ ಅವುಗಳಿಂದ ಅನೇಕ ಪತ್ರಗಳು ಬೇಕಾಯಿತು. ನನ್ನ ಮದುವೆ ಸಮಯದ ಪತ್ರಗಳೂ ಇದ್ದವು. ಇವೆಲ್ಲಾ ಯಾರೋ ಯಾರೋ ನನಗೆ ಬರೆದಿರುವುದು. ಏಕೆ ಸಿಕ್ಕಿಸಿಟ್ಟಿರುವೆ ಗೊತ್ತೆ? ಮುಂದೆ ನೂರು ಇನ್ನೂರು ವರ್ಷಗಳ ನಂತರ ಇವುಗಳಿಗೆ ಮಹತ್ವವಿದೆ. ಒಬ್ಬ ಮಹಾಕವಿಯ ಮೇಲೆ ರಿಸರ್ಚ್ ಮಾಡುವಾಗ ಇವೆಲ್ಲಾ ಅಗತ್ಯವಾಗುತ್ತದೆ. ಕವಿಯ ಜೀವನ ಹೇಗಿತ್ತು? ಎಂದು ತಿಳಿಯಲು

ಸಹಾಯಕವಾಗುತ್ತದೆ. ಮಹಾಕವಿಯಾದಾಗ ಬರಿಯ ಕಾವ್ಯ ಬರೆಯುತ್ತಾ ಇದ್ದ ಎಂದು ಅನೇಕರು ಭಾವಿಸುವರು. ಅವರಿಗೆ ಕವಿ ಹೇಗೆ ಜನರೊಂದಿಗೆ, ಜನ ಜೀವನದೊಂದಿಗೆ ಬೆರೆತಿರುವನು ಎಂಬುದು ಈ ಪತ್ರಗಳಿಂದ ತಿಳಿಯುವುದು. ಆಗಲೇ ಪುಡಿಪುಡಿಯಾದ ಪತ್ರಗಳನ್ನು ತೆಗೆದುಹಾಕು. ಉಳಿದವು ಹಾಗೇ ಇಟ್ಟಿರು ಎಂದು ಮೌನವಾದರು. ಅವರ ಮಾತು ಕೇಳಿ ವಿಸ್ಮಿತಳಾದೆ."[೧]

ಕುವೆಂಪು ಅವರ ಸಹಚರ್ಯೆಯುಲ್ಲಿದ್ದವರು ಅನೇಕ ಮಂದಿ. ಗುರುಗಳಾಗಿ, ಬಂಧುಗಳಾಗಿ, ಶಿಷ್ಯರಾಗಿ, ಸ್ನೇಹಿತರಾಗಿ, ಅಭ್ಯಾಗತರಾಗಿ ಕುವೆಂಪು ಅವರ 'ಉದಯರವಿ' ಮನೆ ಹೊಕ್ಕವರಿಗೆ ಲೆಕ್ಕವಿಲ್ಲ. ಅವರಿಗೆಲ್ಲಾ ಕುವೆಂಪುವೆಂದರೆ ಬಹಳ ಪ್ರೀತಿ, ಗೌರವ, ಕುವೆಂಪು ಅವರಿಗೂ ಅಷ್ಟೇ ಗುರುಗಳು, ಬಂಧುಗಳು, ಶಿಷ್ಯ ವರ್ಗದವರೆಂದರೆ ತುಂಬು ಪ್ರೀತಿ. 'ಉದಯರವಿ' ಮನೆಗೆ ಯಾರೇ ಬಂದರೂ ಅವರಿಗೆ ಪ್ರೀತಿಯ ಮಾತುಗಳು ಕುವೆಂಪು ಕುಟುಂಬ ವರ್ಗದವರಿಂದ ಸಿಗುತ್ತಿದ್ದವು. ಕೆಲವು ವೇಳೆ ಕುವೆಂಪುವೇ ಮನೆಯ ಗೇಟಿನವರೆಗೂ ಹೋಗಿ ಬಂಧು-ಮಿತ್ರರನ್ನು ಕರೆದುಕೊಂಡು ಬರುತ್ತಿದ್ದರು. ಅವರ 'ನೆನಪಿನ ದೋಣಿ', 'ಮಲೆನಾಡಿನ ಚಿತ್ರಗಳು', 'ಮುನ್ನುಡಿ ತೋರಣ', ಹಾಗೂ ಸಂದರ್ಶನ ಕೃತಿಗಳನ್ನು ಓದಿದರೆ ಆ ವಿಚಾರಗಳು ನಮಗೆ ದೊರೆಯುತ್ತವೆ. ಪ್ರಸ್ತುತದಲ್ಲಿ ಅವರ ಮಗಳು ಬರೆದಿರುವ 'ಮಗಳು ಕಂಡ ಕುವೆಂಪು', ಕೃತಿ ಕುವೆಂಪು ಬಂಧು-ಮಿತ್ರರೊಡನೆ ಹೇಗೆ ಒಡನಾಡಿದ್ದಾರೆ ಎಂಬುದರ ಬಗೆಗೆ ಹಲವು ಸ್ವಾರಸ್ಯಕರ ವಿಷಯಗಳನ್ನು ಬಯಲು ಮಾಡುತ್ತದೆ. ಮನೆಗೆ ಬಂದ, ಬಂಧುಗಳನ್ನೊ, ಸ್ನೇಹಿತರನ್ನೊ, ಗುರುಗಳನ್ನೊ, ಉಪಚರಿಸುವುದು ಸಾಮಾನ್ಯ; ಆದರೆ ಕುವೆಂಪು ಅವರು ಅತಿಥಿ ಅಭ್ಯಾಗತರನ್ನೂ ಕೂಡ ಕಾಣುತ್ತಿದ್ದ ರೀತಿ, ಪ್ರೀತಿ ಶ್ಲಾಘನೀಯ. ಆ ರೀತಿಯ ಒಂದು ಸಂದರ್ಭವನ್ನು ಮಗಳು ತಾರಿಣಿ 'ಬಿಜಾಪುರದ ಅಜ್ಜ' ಎಂಬ ನೆನಪಿನ ಅಧ್ಯಾಯದಲ್ಲಿ ತುಂಬಾ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಈ ಹಿಂದೆ ಎಂದೂ ನೋಡದ ಒಬ್ಬ ಇಳಿವಯಸ್ಸಿನ ಮುದುಕ ಕುವೆಂಪು ಅವರನ್ನು ನೋಡಲು ಬಂದು ಅವರ ಮುಂದೆಯೇ ಮನೆಯಲ್ಲಿ ಕುಳಿತು ಬಿಡುತ್ತಾರೆ. ಅವರನ್ನೇ ನೋಡುವೆ, ಧ್ಯಾನ ಮಾಡುವೆ, ಅವರೇ ದೇವರು ಎಂದೆಲ್ಲಾ ಮಾತನಾಡುತ್ತಾ ಇರುತ್ತಾರೆ. ಬಿಜಾಪುರದಿಂದ ಬಂದ ಅವರಿಗೆ ಹಿಂದಿರುಗಿ ಹೋಗಲು ಹಣ ಸಾಲದೆ ಬಂದಾಗ ಅವರ ಕಷ್ಟವನ್ನು ತಿಳಿದು ಕುವೆಂಪು ಅವರು ಸ್ಪಂದಿಸುವುದನ್ನು ತಾರಿಣಿಯವರು ಈ ರೀತಿ ನೆನಪು ಮಾಡಿಕೊಂಡಿದ್ದಾರೆ. "ತಂದೆಯವರು ಬಿಜಾಪುರದಿಂದ ಇಲ್ಲಿಗೆ ಬರಲು ಪ್ರಯಾಣಕ್ಕೆ ಎಷ್ಟು ಖರ್ಚು ಮಾಡಿರುವಿರಿ' ಎಂದು

[೧] 'ಮಗಳು ಕಂಡ ಕುವೆಂಪು', ಪುಟ ೨೫೦.

ವಿಚಾರಿಸಿದರು. ಅಜ್ಜ ಇನ್ನೂರರ ಹತ್ತಿರ ಖರ್ಚಾಯಿತು ಎಂದು ಹೇಳಿದ ನೆನಪು. ಅಜ್ಜನಿಗೆ ನಾಯಿ ಇದೆ ಎಂದು ಹೇಳಿದ್ದು, ಜೊತೆಗೆ ನಾಯಿಯ ಬೊಗಳುವಿಕೆ ಕೇಳಿ 'ಓಹೊ ನಾಯಿ ಇದೆಯೇ? ನಿಮ್ಮ ಮನೆಯಲ್ಲಿ', ಎಂದು ಮೇಲೆದ್ದರು. ತಂದೆಯವರು ನನ್ನನ್ನು ಕರೆದು ಇನ್ನೂರ ಐವತ್ತು ರೂಪಾಯಿ ಅವರ ಕೊಠಡಿಯ ಡ್ರಾಯರ್‌ನಿಂದ ತರಲು ಹೇಳಿದರು. ಅಜ್ಜನಿಗೆ ನನ್ನ ಹತ್ತಿರವೇ ಹಣಕೊಡಿಸಿ 'ಕ್ಷೇಮವಾಗಿ ನಿಮ್ಮೂರು ಸೇರಿಕೊಳ್ಳಿ. ನಿಮ್ಮ ಮಕ್ಕಳು ನಿಮಗಾಗಿ ಕಾಯುತ್ತಿರುವರು. ಎಲ್ಲಿ ಹೋಗಿರುವಿರಿ ಎಂದು ಅವರಿಗೇನು ಗೊತ್ತು? ನೀವು ಹೇಳದೆ ಬಂದಿರುವಿರಿ. ನಿಮಗೆ ದೇವರು ಒಳ್ಳೆಯದು ಮಾಡಲಿ. ಎಂದು ನಿಧಾನ ಕುರ್ಚಿಯಿಂದ ಎದ್ದು ಸ್ನಾನಕ್ಕೆ ಒಳಗೆ ಹೊರಟರು. ಅಜ್ಜನಿಗೆ ತಂದೆಯವರು ಹಣ ಕೊಡಿಸಿದ ಮೇಲೆ ಸಂತೋಷದಿಂದ 'ಆಯಿತು, ಊರಿಗೆ ಹೋಗುವೆ ಬಹುಠಾಣಿ, ಸ್ವಾಮಿಯವರನ್ನು ಝುಳಕಕ್ಕೆ ಕರೆದೊಯ್ಯಿರಿ' ಎಂದು ಹೇಳಿ ತಮ್ಮ ಬುತ್ತಿಯನ್ನು ಕೋಲಿಗೆ ಸಿಕ್ಕಿಸಿ, ಕೋಲನ್ನು ಹೆಗಲ ಮೇಲೆ ಹೊತ್ತುಕೊಂಡು ಚಪ್ಪಲಿ ಮೆಟ್ಟಿಕೊಂಡು ಬಗಲಿಗೆ ಚೀಲ ನೇತು ಹಾಕಿಕೊಂಡು ಮೆಟ್ಟಿಲಿಳಿದು ಹೊರಟರು.''[೧]

ಕುವೆಂಪುರವರು ಅಧಿಕಾರದಲ್ಲಿದ್ದಾಗ ಬಂದು–ಮಿತ್ರರೊಡನೆ ಸರಿಯಾಗಿ ಕಾಲ ಕಳೆಯಲು ಆಗುತ್ತಿರಲಿಲ್ಲ. ಬಹಳ ರಸ ನಿಮಿಷಗಳನ್ನು ಅವರು ಆ ವೇಳೆಯಲ್ಲಿ ಕಳೆದುಕೊಂಡರು. ಅದರಿಂದ ಹೊರಹೊಮ್ಮಿದೆ 'ಕುಲಪತಿಗೆ ಹಕ್ಕಿಯ ಹರಕೆ' ಎಂಬ ಕವನದಲ್ಲಿ ಹೇಳಿಕೊಂಡಿದ್ದಾರೆ. ಕುವೆಂಪು ಅವರು ಯಾರೊಡನೆಯೂ ಜಗಳವಾಡಿದವರಲ್ಲ. ಜಗಳ, ಗಲಾಟೆ ಎಂದರೆ ಕುವೆಂಪುರವರಿಗೆ ಅದೊಂದು ಕಿರಿಕಿರಿ, ಕೌಟುಂಬಿಕ ವರ್ಗದವರೊಡನೆ ವಿಹಾರ ಹೋಗುವುದೆಂದರೆ ಬಲು ಇಷ್ಟದ ಕೆಲಸವಾಗಿತ್ತು. ಅವರಿಗೆ ಮಲೆನಾಡಿನ ಮಡಿಲಿನಲ್ಲಿ ಸ್ನೇಹಿತರೊಡನೆ ಬಂಧುಗಳೊಡನೆ ಬೇಟೆಗೆ ಹೋಗುವುದೆಂದರೆ ಅವರಿಗೆ ಮೆಚ್ಚಿನ ಕೆಲಸವಾಗಿತ್ತು. ಅದರೊಟ್ಟಿಗೆ ಮೀನು ಹಿಡಿಯುವುದೆಂದರೆ ಸಾಕು ಅವರಿಗೆ ಎಲ್ಲಿಲ್ಲದ ಉತ್ಸಾಹ. ಹೀಗೆ ಕುವೆಂಪು ಅವರು ಸ್ನೇಹಿತರೊಡನೆ ಬಂಧುಗಳೊಡನೆ ಕಾಲ ಕಳೆಯುತ್ತಿದ್ದರು. ನಾಲ್ಕು ಗೋಡೆಗಳ ಮಧ್ಯವೇ ಹೊತ್ತು ಕಳೆಯಲು ಬಯಸಿದವರಲ್ಲ. ಸಾಹಿತ್ಯ ಸೃಷ್ಟಿ ಕಾರ್ಯ ಸಂದರ್ಭದಲ್ಲಿ ಮಾತ್ರ ಗೋಡೆಗಳ ಮಧ್ಯೆ ತಮ್ಮ ಇರವನ್ನು ಬಯಸುತ್ತಿದ್ದರು. ಉಳಿದಂತೆಲ್ಲಾ ಹೊರಮುಖಿಯಾಗಿಯೇ ಅವರ ಮನಸ್ಸಿರುತ್ತಿತ್ತು. ಬಹುಮುಖ್ಯವಾಗಿ ಅವರು ಬಂಧು ಮಿತ್ರರನ್ನು ಭೇಟಿ ಮಾಡುತ್ತಿದ್ದ ಸಮಯವೆಂದರೆ ಮುಂಜಾನೆಯ ವಿಹಾರದಲ್ಲಿ. ಅನೇಕ ಜನ

[೧] 'ಮಗಳು ಕಂಡ ಕುವೆಂಪು', ಪುಟ ೨೪೦.

ಸ್ನೇಹಿತರೊಡನೆ ಆ ಸಮಯದಲ್ಲಿ ವಿಚಾರ ವಿನಿಮಯ ಮಾಡಿಕೊಂಡು ಆರೋಗ್ಯಕರ ಸಾಮರಸ್ಯವನ್ನು ಸಾಧಿಸಿದ್ದರು.

ಕುವೆಂಪು ಅವರು ಅಧ್ಯಾತ್ಮದ ನೆಲೆಯಲ್ಲಿ ಗುರುವನ್ನೊ, ಸ್ನೇಹಿತರನ್ನೊ, ಅಭ್ಯಾಗತರನ್ನೊ ಪ್ರೀತಿಯಿಂದ, ವಿನಮ್ರತೆಯಿಂದ 'ಉದಯರವಿ'ಗೆ ಸ್ವಾಗತಿಸುವುದು ಹೀಗೆ-

ತೆರೆದಿದೆ ಮನೆ, ಓ, ಬಾ, ಅತಿಥಿ!

"ತೆರೆದಿದೆ ಮನೆ, ಓ, ಬಾ ಅತಿಥಿ!
ಹೊಸ ಬೆಳಕಿನ ಹೊಸಗಾಳಿಯ ಹೊಸಬಾಳನು ತಾ, ಅತಿಥಿ!

ಎಲ್ಲಾ ಇದೆ ಇಲ್ಲಿ;
ಉಲ್ಲಾಸವೆ ಹಾ ಕುಡಿ ಮುರುಟಿದ ಬಳ್ಳಿ!
ದೈನಂದಿನ ಪರಿಚಯ ಮಂದತೆಯನು ತಳ್ಳಿ
ಬಾ, ಚಿರನೂತನತೆಯ ಕಿಡಿ ಚೆಲ್ಲಿ,
ಓ ನವ ಜೀವನ ಅತಿಥಿ!
ಆವ ರೂಪದೊಳು ಬಂದರೂ ಸರಿಯೆ
ಬಾ ಅತಿಥಿ!
ಆವ ವೇಷದಲಿ ನಿಂದರೂ ಸರಿಯೆ
ನೀತಿಥಿ!
ನೇಸರುದಯದೊಲು ಬಹೆಯಾ? ಬಾ, ಅತಿಥಿ!
ತಿಂಗಳಂದದಲಿ ಬಹೆಯಾ? ಬಾ, ಅತಿಥಿ!
ಇಷ್ಟ ಮಿತ್ರರೊಲು? ಬಂಧು ಬಳಗದೊಲು?
ಸುಸ್ವಾಗತ ನಿನಗತಿಥಿ!
ಕಷ್ಟದಂದದಲಿ? ನಷ್ಟದಂದದಲಿ!
ಸ್ವಾಗತವದಕೂ ಬಾ, ಅತಿಥಿ!

ಇಂತಾದರು ಬಾ; ಅಂತಾದರು ಬಾ;
ಎಂತಾದರು ಬಾ; ಬಾ, ಅತಿಥಿ!
ಬೇಸರ ವಿದನೋಸರಿಸುವ ಹೊಸ ಬಾಳುಸಿರಾಗಿ,
ಬಾ, ಅತಿಥಿ!
ಹಾಡುವ ಹಕ್ಕಿಯ ಗೆಲುವಾಗಿ,

ಬಾ ಅತಿಥಿ!

ಮೂಡುವ ಚುಕ್ಕಿಯ ಚೆಲುವಾಗಿ,
ಬಾ ಅತಿಥಿ!
ಕಡಲಾಗಿ,
ಬಾನಾಗಿ,
ಗಿರಿಯಾಗಿ,
ಕಾನಾಗಿ

ಚಿರನವ ಚೇತನ ಝುರಿಯಾಗಿ
ಬೇಸರವನು ಕೊಚ್ಚುತೆ ಬಾ, ಅತಿಥಿ!
ಉಲ್ಲಾಸದ ರಸ ಬುಗ್ಗೆಯ ಚಿಮ್ಮಿಸಿ ಬಾ, ಅತಿಥಿ!
ವಿಷಣ್ಣತೆಯನು ಪರಿಹರಿಸಿ
ಪ್ರಸನ್ನತೆಯಾ ಸೊಡರುರಿಸಿ,
ಮನ ಮಂದಿರದಲಿ ಮಧುರತಿಯಾರತಿಯೆತ್ತುತೆ
ಬಾ ಅತಿಥಿ!

ತೆರೆದಿದೆ ಮನೆ, ಓ ಬಾ ಅತಿಥಿ!
ಹೊಸತಾನದ ಹೊಸಗಾನದ ರಸ ಜೀವವ ತಾ, ಅತಿಥಿ!"[೧]

[೧] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೮೨೪.

೧೦– ಸಾತ್ವಿಕ ಅಹಂ ಮತ್ತು ಕುವೆಂಪು

"ಗರ್ವದಿಂದೆನ್ನ ಶಿರ ನಿಮಿರಿ ನಿಲ್ಲಲು, ದೇವ,
ನಿನ್ನ ಗದೆಯಾಘಾತ ಬಂದೆರಗಲಿ.
ದುಃಖದಿಂದೆನ್ನೆದೆಯು ನೊಂದು ಮೊರೆಯಿಡೆ, ಗುರುವೆ,
ನಿನ್ನೊಲ್ಮೆ ಬಂದದನು ಸಂತೈಸಲಿ.
ಮಾಯ ಮುಕುರದ ಮೋಹದಲಿ ಮನವು ಮುಳುಗುತಿರೆ
ನಿನ್ನ ಕೈ ಕನ್ನಡಿಯ ಪುಡಿಗೈಯಲಿ.
ಸರ್ವಜ್ಞನೆಂದೆದೆಯು ಸಂಕುಚಿತವಾಗುತಿರೆ
ನಿನ್ನ ಮೈಮೆಯ ಬೆಳಕು ಮೈದೋರಲಿ."[೧]

ಮನುಷ್ಯನಾಗಿ ಹುಟ್ಟಿದ ಮೇಲೆ ಅರಿಷಡ್ವರ್ಗಗಳಿಗೆ ಒಂದಲ್ಲ ಒಂದು ರೀತಿಯಲ್ಲಿ ಆಶ್ರಯ ನೀಡಿರಲೇ ಬೇಕಾಗುತ್ತದೆ. ಅದರಿಂದ ಮುಕ್ತರಾಗುವುದು ಬಹುಶಃ ಕನಸಿನ ಮಾತೆಂದೇ ತೋರುತ್ತದೆ. ಆದರೆ ಒಂದು ಉಪಾಯವಿದೆ. ಅದೇನೆಂದರೆ ಇವುಗಳನ್ನು ಆರೋಗ್ಯಕರವಾಗಿ ದುಡಿಸಿಕೊಳ್ಳುವುದು; ಆ ಮೂಲಕ ಅವುಗಳ ಆಶ್ರಯವನ್ನು ಒಪ್ಪಿಕೊಳ್ಳುವುದು, 'ಋಷಿ ಪುರುಷರು', ವಿಭೂತಿ ಪುರುಷ'ರು ಇವುಗಳ ಇರವನ್ನು ಒಪ್ಪಿಕೊಂಡು ಊರ್ಧ್ವಗಾಮಿಗಳಾಗಿದ್ದು ಹೀಗೆಯೇ. ಅರಿಷಡ್ವರ್ಗವನ್ನು ಸುಮಾರ್ಗದಲ್ಲಿ ನಡೆಸಿಕೊಳ್ಳುವ ಧೀಮಂತ ವ್ಯಕ್ತಿತ್ವವನ್ನು ಎಲ್ಲರೂ ಸಾಧಿಸಿರಲಾರರು. ಅನೇಕರು ಅವುಗಳಿಗೆ ಆವಾಸಸ್ಥಾನವಾಗಿ, ಋಜುಮಾರ್ಗ ತಪ್ಪಿರುತ್ತಾರೆ. ಎಲ್ಲಾ ಸಾಧುಗುಣಗಳಿಗೆ ವಿರುದ್ಧ ದಿಕ್ಕಿನಲ್ಲಿ ಮುಖ ಮಾಡಿ ಜೀವನ ಮಾಡುತ್ತಾರೆ.

ಕುವೆಂಪು ಅವರು ತಮ್ಮ ಬದುಕಿನಲ್ಲಿ ಅರಿಷಡ್ವರ್ಗವನ್ನು ಸಾತ್ವಿಕವಾಗಿ ದುಡಿಸಿಕೊಂಡು ಸಾರ್ಥಕ ಜೀವನ ನಡೆಸಿದವರು. ಆದರೆ ತಾರಿಣಿಯವರು ಹಂಚಿಕೊಳ್ಳುವ ತಮ್ಮ ತಂದೆಯ ಆಪ್ತ ನೆನಪುಗಳ ಆಧಾರದ ಮೇಲೆ, ಕುವೆಂಪು ಅವರು ಸಾತ್ವಿಕ ಅಹಂನ್ನು ಹೊಂದಿದ್ದರು ಎಂದು ನನ್ನ ಅಭಿಮತ. ಸಿ.ಪಿ.ಕೆ.ಯವರು ಒಮ್ಮೆ ಕುವೆಂಪು ಅವರನ್ನು ಸಂದರ್ಶನ ಮಾಡಿದಾಗ ಕುವೆಂಪುರವರು ಹೇಳಿದ ಮಾತು ಗಮನಾರ್ಹ. "ನಾನು ಹಿಮಾಲಯದ ಮೇಲೆ ನಿಂತಿದ್ದೇನೆ ಎಂದು ಕುವೆಂಪು ಹೇಳಿದರೆಂದು ವೇದ ಮೆಹ್ತಾ ಅವರ ಒಂದು ಪುಸ್ತಕದಲ್ಲಿ ದಾಖಲಾಗಿದ್ದು, ಆ ಬಗ್ಗೆ 'ಕುವೆಂಪು ಅವರಿಗೆ ಅಹಂಕಾರ' ಎಂಬರ್ಥದ ಪ್ರತಿಕ್ರಿಯೆ 'ವಾಚಕರವಾಣಿ'ಯಲ್ಲಿ ಪ್ರಕಟವಾಗಿತ್ತು. ಅದನ್ನು ನಾನು ಪ್ರಸ್ತಾಪಿಸಿ, "ಅದು

[೧] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೧೦೮.

ಅಹಂಕಾರದ ಮಾತೇನೂ ಅಲ್ಲವಲ್ಲ!" ಎಂದುದಕ್ಕೆ ವ್ಯಗ್ರವಾಗಿ ಕೇಳಿದರು: ನಾನೇಕೆ ಅಹಂಕಾರ ಪಡಬಾರದು?"[೧]

ಕುವೆಂಪು ಅವರು ಕೇಳುವ ಈ ಪ್ರಶ್ನೆಯ ಬಗೆಗೆ ನಾವು ಕೊಂಚ ತಬ್ಬಿಬ್ಬಾಗುವ ಪ್ರಮೇಯವಿದೆ. ನಾವು ಒಬ್ಬ ಮಹಾ ಕವಿಯನ್ನೊ, ಆದರ್ಶ ಪುರುಷನನ್ನೊ ಆರಿಸುವಲ್ಲಿ ನಮ್ಮೊಳಗೆ ಕೆಲವು ಮಾನದಂಡಗಳನ್ನು ವಿಧಿಸಿ ಕೊಂಡಿರುತ್ತೇವೆ. ಅವುಗಳಿಗೆ ವಿರುದ್ಧ ಗುಣಗಳನ್ನು ಅವರಿಗೆ ಆರೋಪಿಸಲು ನಾವು ಒಪ್ಪುವುದಿಲ್ಲವಷ್ಟೆ. ಕುವೆಂಪು ಅವರು ಎಲ್ಲಾ ಗುಣಗಳನ್ನು ಆರೋಗ್ಯಪೂರ್ಣವಾಗಿ ದುಡಿಸಿಕೊಂಡವರು. ಮಗಳು ತಾರಿಣಿಯವರು ನಮಗೆ ಬಿತ್ತರಿಸುವ ನೆನಪಿನ ಪುಟಗಳಿಂದ ಕುವೆಂಪು ಅವರ ಬಳಿಯಿದ್ದ ಸಾತ್ತ್ವಿಕ ಅಹಂನ್ನು ಗುರುತಿಸಿಕೊಳ್ಳಬಹುದು. "ತಾಯಿಯವರು ಮಾತಾಡುತ್ತಾ ನಾವು ಮಕ್ಕಳನ್ನು ಸರಿಯಾಗಿ ಬೆಳೆಸಿಲ್ಲ ಎಂದು ಕೆಲವರ ಅಭಿಪ್ರಾಯ. ಅದರಿಂದ ಬೇರೆ ದೇಶಕ್ಕೆ ಮಕ್ಕಳು ಹೋದಾಗ ಅದರಲ್ಲೂ ಹೆಣ್ಣು ಮಕ್ಕಳಿಗೆ ಕಷ್ಟವಾಗುವುದು ಎಂಬ ಅರ್ಥದಲ್ಲಿ ಮಾತಾಡಿದರು. ಜೊತೆಗೆ ವಿಜ್ಞಾನದ ವಿಚಾರವಾಗಿ ಉನ್ನತ ವ್ಯಾಸಂಗ ಮಾಡುವುದು ಹಿರಿಮೆಯ ವಿಚಾರ ಎಂಬ ಅಭಿಪ್ರಾಯಕ್ಕೆ ಈಗ ಮನ್ನಣೆ ಜಾಸ್ತಿಯಾಗುತ್ತಿದೆ ಎಂಬುದಾಗಿ ಹೇಳಿದರು. ನಾವು ನಾಲ್ಕು ಮಕ್ಕಳಲ್ಲಿ ಮೂರು ಜನರು ಕಲಾ ವಿಭಾಗದಲ್ಲಿ ಓದಿದವರಾಗಿದ್ದೆವು. ಅಕ್ಕ ಮತ್ತು ಅಣ್ಣ ಚೈತ್ರ ಹೊರ ದೇಶದಲ್ಲಿದ್ದರು. ತಂದೆಯವರಿಗೆ ಹೆಣ್ಣು ಮಕ್ಕಳ ಬಗ್ಗೆ ಈ ಅಭಿಪ್ರಾಯ ತುಂಬ ಅಸಮಾಧಾನ ತಂದಿತು. ಅಮ್ಮನ ಕಡೆ ತಿರುಗಿ ಕಲಾ ತಾರಿಣಿಯರ ಸಂಸ್ಕಾರದ ನೂರರಲ್ಲಿ ಒಂದು ಪಾಲು ಹಾಗೆ ಟೀಕೆ ಮಾಡುವವರಿಗಿಲ್ಲ' ಎಂದರು. ಸ್ವಲ್ಪ ಹೊತ್ತು ಎಲ್ಲರೂ ಮೌನವಾಗಿ ಊಟ ಮಾಡುತ್ತಿದ್ದೆವು. ತಂದೆಯವರು ನನ್ನ ಕಡೆಗೆ ತಿರುಗಿ 'ನೀನು ಮಹಾಕವಿಯೊಬ್ಬನಿಗೆ ಮಗಳು ಎಂದು ತಲೆ ಎತ್ತಿ ನಡೆ, ಅಭಿಮಾನದಿಂದ' ಎಂದು ಹೇಳಿ ಊಟ ಮುಗಿಸಿದರು." ಈ ಸಂದರ್ಭದಲ್ಲಿ ಬರೆದ ಕವನವು ಮಹತ್ವದ್ದು.

"ನೀ ಜಗತ್ತಿನ ಮಹಾಕವಿಯೊಬ್ಬನಿಗೆ ಪುತ್ರಿ
ಎಂಬ ಅಭಿಮಾನದಿಂ ನಡೆ, ಮಗಳೆ, ತಲೆ ಎತ್ತಿ!
ಬೇಡ ಷೋಕಿ, ಇರಲಿ ಸೌಂದರ್ಯ;
ಬೇಡಗರ್ವ, ಇರಲಿ ಗಾಂಭೀರ್ಯ
ನಿನಗಿಹುದು ಇಡಲು ಮುಡಿ!
ಶ್ರೀಮಾತೆಯಲರ ಅಡಿ!"[೨]

---

[೧] ಕುವೆಂಪು ಸಂದರ್ಶನ – ಸಿ.ಪಿ.ಕೆ. ಪುಟ ೩೦.
[೨] 'ಮಗಳು ಕಂಡ ಕುವೆಂಪು', ಪುಟ ೧೧೨-೧೩.

ಈ ಕವನದಲ್ಲಿ ಕುವೆಂಪು ಅವರು ಮಗಳು ತಾರಿಣಿಗೆ ಧೈರ್ಯ ತುಂಬುವುದರ ಜೊತೆಗೆ ಹೇಳುವ ಆಶೀರ್ವಾದದ ಮಾತುಗಳು ತುಂಬಾ ಚೆನ್ನಾಗಿವೆ. ಈ ಕವನದಲ್ಲಿ 'ನೀ ಜಗತ್ತಿನ ಮಹಾಕವಿಯೊಬ್ಬನಿಗೆ ಪುತ್ರಿ' ಎಂಬ ಸಾಲಿನಲ್ಲಿ ಕುವೆಂಪು ಅವರ ಸಾತ್ತ್ವಿಕ ಅಹಂ ಎದ್ದು ಕಾಣುತ್ತದೆ.

ತಾರಿಣಿಯವರು ನಮ್ಮೊಂದಿಗೆ ಹಂಚಿಕೊಳ್ಳುವ ಮತ್ತೊಂದು ಸಂದರ್ಭದ ಸ್ವಾರಸ್ಯವನ್ನು ತಿಳಿಯೋಣ. "ತಂದೆಯವರಿಗೆ ವಯಸ್ಸು ಎಂಬತ್ತರ ಮೇಲಾಗಿತ್ತು. ಅವರು ಊಟ ಮುಗಿಸಿ ಆಗತಾನೆ ಮಲಗಿದ್ದರು. ನಾನು ಅವರಿಗೆ ತೊಂದರೆ ಮಾಡಲು ಇಚ್ಛಿಸದೆ ತಂದೆಯವರು ಮಲಗಿರುವರು ನಾಲ್ಕು ಗಂಟೆಗೆ ನೋಡಬಹುದು ಎಂದು ತಿಳಿಸಿದೆ ಉಪಾಧ್ಯಾಯರು ನಾವು ಈಗಲೇ ಹಿಂದಕ್ಕೆ ಹೊರಟಿದ್ದೇವೆ. ಎರಡೇ ನಿಮಿಷ ನೋಡಿ ಹೋಗುವೆವು ಎಂದರು. ತಂದೆಯವರಿಗೆ ನಿದ್ರೆ ಬಂದಿದೆ ನಾನು ಎಬ್ಬಿಸಲು ಆಗುವುದಿಲ್ಲ ಎಂದು ಹೇಳಿ ಅವರ ನಿದ್ರೆಗೆ ಭಂಗ ಉಂಟು ಮಾಡಲಿಲ್ಲ. ಇನ್ನೊಮ್ಮೆ ಬರುವಾಗ ಮೊದಲೇ ಸಮಯ ತಿಳಿದು ಬನ್ನಿ ಎಂದು ಹೇಳಿ ಕಳುಹಿಸಿದೆ. ತಂದೆಯವರು ಎದ್ದ ಮೇಲೆ ಶಾಲಾ ಮಕ್ಕಳು ಬಂದಿದ್ದು ತಿಳಿಸಿದೆ ಆಗ ಅವರು ಇದೇನು ಮೃಗಾಲಯದಲ್ಲಿ ಸಹ ಹುಲಿ, ಕರಡಿ ನೋಡಲು ನಿಗದಿತ ಸಮಯವಿದೆ. ಇವರಿಗೆ ರಾಷ್ಟ್ರಕವಿ ನೋಡಲು ವೇಳೆ ಅವೇಳೆ ಏನೂ ಇಲ್ಲವೆ? ಉಪಾಧ್ಯಾಯರು ಸರಿಯಾಗಿ ವ್ಯವಸ್ಥೆ ಮಾಡಿಕೊಂಡು ಮಕ್ಕಳನ್ನು ಕರೆದುಕೊಂಡು ಬರಬೇಕು. ಮುಂದಿನ ಸಾರಿ ಸಮಯ ತಿಳಿದು ಕಾರ್ಯಕ್ರಮ ಹೊಂದಿಸಿ ಬರಲಿ. ನೀನು ನನ್ನನ್ನು ಎಬ್ಬಿಸದೆ ಇದ್ದುದು ಒಳ್ಳೆಯದಾಯಿತು ಎಂದರು."[೧]

ರಾಷ್ಟ್ರಕವಿ - ಎಂಬ ಮಾತಿನಲ್ಲಿ ಸಾತ್ತ್ವಿಕ ಅಹಂ ತುಂಬಿತ್ತೇನೋ? ಎಂಬ ತುಂಬು ಭರವಸೆಯ ನಂಬಿಕೆ ನನ್ನದು.

ತಾರಿಣಿಯವರು ಮೆಲುಕು ಹಾಕುವ ಮತ್ತೊಂದು ಸನ್ನಿವೇಶದ ಕುವೆಂಪು ವರ್ತನೆಯಲ್ಲಿ ಅವರ ಸಾತ್ತ್ವಿಕ ಅಹಂ ವ್ಯಕ್ತವಾಗುತ್ತದೆ. 'ತಂದೆಯವರಿಗೆ ರೇಡಿಯೋ ಕೇಳುವ ಅಭ್ಯಾಸ. ಅವರು ವಯಸ್ಸಾದ ಮೇಲೆಯೂ ಆಸಕ್ತಿಯಿಂದ ರೇಡಿಯೋ ಕೇಳುತ್ತಿದ್ದರು. ಬೆಳಿಗ್ಗೆ ಆರು ಗಂಟೆಗೆ ಸಂಜೆ ಆರುಗಂಟೆಗೆ ಸುದ್ದಿಯನ್ನು ಅವರು ಕೇಳಲೇಬೇಕು. ಅದರ ಜೊತೆಗೆ ಒಳ್ಳೆಯ ಸಂಗೀತ, ನಾಟಕ, ಭಾವಗೀತೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳನ್ನು ಕೇಳುತ್ತಿದ್ದರು. ವಾರದ ಹೊಸ ಹಾಡನ್ನೂ ಕೂಡ ತಪ್ಪಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಭಾವಗೀತೆ ಪ್ರಸಾರವಾದಾಗ

---

[೧] 'ಮಗಳು ಕಂಡ ಕುವೆಂಪು', ಪುಟ ೧೮೩.

ಇನ್ನಾರದ್ದೊ ಹಾಡನ್ನು ಕುವೆಂಪು ಅವರ ಗೀತೆ ಎಂದು ತಪ್ಪಾಗಿ ಪ್ರಸಾರ ಮಾಡಿದರು. ತಂದೆಯವರು ತುಂಬಾ ಸಿಟ್ಟುಗೊಂಡು ಅವಿವೇಕಿಗಳು ಮೂರನೆ ದರ್ಜೆ ಕವನಕ್ಕೂ ಕುವೆಂಪು ಅವರದ್ದು ಎಂದು ಹೇಳಿದ್ದಾರೆ ಎಂದು ಬೈದದ್ದೂ ಉಂಟು. ಹಾಗೆ ಹೇಳಿ ಸುಮ್ಮನಾಗುತ್ತಿರಲಿಲ್ಲ. ತಕ್ಷಣ ಆಕಾಶವಾಣಿಗೆ ಇಂತಹ ದಿನ, ಇಷ್ಟು ಗಂಟೆಗೆ ಪ್ರಸಾರವಾದ ಕಾರ್ಯಕ್ರಮದಲ್ಲಿ ಕವನ ರಚಿಸಿದವರ ಹೆಸರು ತಪ್ಪಾಗಿ ಹೇಳಿರುವಿರಿ. ಅದನ್ನು ಸರಿಪಡಿಸಿಕೊಳ್ಳಿ ಎಂದು ಕಾಗದ ಬರೆದು ಹಾಕುತ್ತಿದ್ದರು. ಆಕಾಶವಾಣಿಯವರು ಅದನ್ನು ಸರಿಪಡಿಸುತ್ತಿದ್ದರೊ ಇಲ್ಲವೋ ತಿಳಿಯುತ್ತಿರಲಿಲ್ಲ."[೧]

ತಮ್ಮ ಕವನಗಳು ಪ್ರಥಮ ದರ್ಜೆಯವು ಎಂಬ ಸಾತ್ತ್ವಿಕ ಅಹಂನ್ನು ಕುವೆಂಪು ಹೊಂದಿದ್ದರೆಂದೇ ಹೇಳಬೇಕು. ಕೆಲವೊಮ್ಮೆ ಅಪ್ರಜ್ಞಾಪೂರ್ಣವಾಗಿ ಅಹಂಕಾರ ಪಡುತ್ತಿದ್ದರೇನೋ, ಏಕೆಂದರೆ ಅವರು ದೇವರಲ್ಲಿ ಮೊರೆಯಿಡುವ ಈ ಕವನವನ್ನು ನಾವು ಗ್ರಹಿಸಿದಾಗ ಅದರ ಅರಿವಾಗುತ್ತದೆ. ತಮ್ಮ ಅಹಂಕಾರವನ್ನು ತಗ್ಗಿಸುವಂತೆ ಬೇಡುವ ರೀತಿ ಇಲ್ಲಿ ಪ್ರಾಮಾಣಿಕವಾಗಿದೆ.

ಎನ್ನನತಿ ಕಿರಿದು ಮಾಡಲು, ದೇವ, ನೀನು

"ಎನ್ನನತಿ ಕಿರಿದು ಮಾಡಲು, ದೇವ, ನೀನು
ಉನ್ನತಾಕಾಶವನು ಸೃಷ್ಟಿಸಿರುವೆ
ಎನ್ನಹಂಕಾರವನು ಹಂಗಿಸಲು ನೀನು
ನಿನ್ನಹಂಕಾರವನು ತೋರುತಿರುವೆ.

ಅತಿಜಾಣನೆಂದು ನಾಗರ್ವಿಸದ ತೆರದಿ
ಮತಿಗೆ ಮೀರಿಹ ಕಾರ್ಯವೆ ಸಗುತಿರುವೆ;
ಹಿತಕಾರಿ ನಾನೆಂಬ ಹೆಮ್ಮೆಯನು ಮುರಿಯ
ಪತಿತ ಪಾವನನಾದೆ ಲೋಕವರಿಯೆ

ಎನ್ನಹಂಕಾರವದು ತೊಲಗಿದಂತೆಲ್ಲ
ನಿನ್ನಹಂಕಾರವೂ ಜಾರುತಿಹುದು;
ಎನ್ನಹಂಕಾರ ಸಂಪೂರ್ಣಮಾಗಳಿಯೆ
ನಿನ್ನೊಳಾನಿಳಿವೆನ್ನೈ ನೀನೆಯಾಗಿ,"[೨]

---

೧ 'ಮಗಳು ಕಂಡ ಕುವೆಂಪು', ಪುಟ ೧೮೪–೮೫.
೨ ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೬೨.

೧೧-ಉದಯರವಿಯ ಪಕ್ಷಿಕಾಶಿ

'ತನ್ನನ್ನು ಪ್ರೀತಿಸಿದ ಹೃದಯವನ್ನು ಪ್ರಕೃತಿ ಎಂದೂ ಕೈ ಬಿಟ್ಟಿಲ್ಲ!'

– ವರ್ಡ್ಸ್‌ವರ್ತ್

ಮನುಷ್ಯನ ಸಾತ್ತ್ವಿಕ ಗುಣಗಳಲ್ಲಿ ಪ್ರಕೃತಿ ಪ್ರೀತಿ ಉನ್ನತೋನ್ನತವಾದದ್ದು. ಮನುಷ್ಯನ ಬದುಕು ಪ್ರಕೃತಿಯ ಅವಿಭಾಜ್ಯ ಅಂಗದಂತೆ. ಪ್ರಕೃತಿಯ ಅನುಪಸ್ಥಿತಿಯಲ್ಲಿ ಮನುಷ್ಯ ಜೀವನ ಅರೆಗಳಿಗೆಯೂ ಜೀವಂತವಾಗಿರಲಾರದು. ಈ ರೀತಿಯ ಪ್ರಾಮುಖ್ಯತೆಯುಳ್ಳ ಪ್ರಕೃತಿ ದೇವತೆಯನ್ನು ನಾಶ ಮಾಡುತ್ತಿರುವುದು ನಮ್ಮ ವಿನಾಶದ ಸಂಕೇತ. ಬಹುತೇಕ ಮನುಷ್ಯ ಜೀವನ ಆ ಹಾದಿಯಲ್ಲಿ ಕಾಲಿಟ್ಟಾಗಿದೆ; ಅದರ ಪರಿಣಾಮವಾಗಿಯೇ ಬರ, ಭೂಕಂಪ, ಜಲಪ್ರಳಯ, ಅನಿಲ ಪ್ರಳಯಗಳ ಫಲವನ್ನು ಗತ್ಯಂತರವಿಲ್ಲದೆ ಉಣ್ಣುತ್ತಿರುವುದು. ಮನುಷ್ಯ ಇಂದು ತಾಂತ್ರಿಕವಾಗಿ ಎಷ್ಟೇ ಮುಂದುವರೆದಿದ್ದರೂ ಅದು ಪ್ರಕೃತಿಯಿತ್ತ ಒಂದು ಸಣ್ಣ ಪ್ರಮಾಣದ ವರವಷ್ಟೇ. ಮನುಷ್ಯ ಪ್ರಯತ್ನಗಳು ಪ್ರಕೃತಿಯ ಜೊತೆ ಜೊತೆಯಲ್ಲಿಯೇ ಸಾಗಿದರೆ ಅದು ಸಾಧು ಬೆಳವಣಿಗೆ, ಮೀರಿದರೆ ಪ್ರಕೃತಿಯ ವೈಪರೀತ್ಯಗಳಿಗೆ ತುತ್ತಾಗದೆ ವಿಧಿಯಿಲ್ಲ. ಮನುಷ್ಯನ ಈ ವಿಪರೀತ ವಿದ್ಯಮಾನಗಳ ನಡುವೆ ಪ್ರಕೃತಿಯನ್ನು ದೇವರೆಂದು ಪೂಜಿಸುವ ಆರಾಧಿಸುವ 'ವಿಭೂತಿ ಪುರುಷರು' ಉಂಟು. ಬಹುಶಃ ಆ ಮಹಾತ್ಮರ ಪ್ರಾರ್ಥನೆಯಿಂದಲೇ ಆರಾಧನೆಯಿಂದಲೇ ಪ್ರಕೃತಿ ದೇವತೆ ಪರಿಪೂರ್ಣ ಪ್ರಳಯಕ್ಕೆ ಮನಸ್ಸು ಮಾಡದೆ, ಒಳಗೊಳಗೇ ನೋವು ಪಡುತ್ತಿದ್ದಾಳೆ. ಆದರೂ ಎಲ್ಲದಕ್ಕೂ ಒಂದು ಸೀಮೆಯಿದೆ. ಅದು ಮೀರಿದಾಗ ವಿಭೂತಿ ಪುರುಷರ ಪ್ರಾರ್ಥನೆಯು ವೈಫಲ್ಯವನ್ನು ಕಾಣಬಹುದಲ್ಲವೆ? ಆದ್ದರಿಂದ ಮನುಷ್ಯನ ವಾಮ ಪ್ರಯತ್ನಗಳು ಅಂತ್ಯಕಂಡು ಪ್ರಕೃತಿ ದೇವತೆಯನ್ನು ಆರಾಧಿಸುವ ದಿನಮಾನಗಳು ಹುಟ್ಟಬೇಕಿದೆ.

ಪ್ರಕೃತಿಯಲ್ಲಿ ದೇವರನ್ನು ಕಂಡು ಧ್ಯಾನಿಸಿದ ಮಹಾತ್ಮರಲ್ಲಿ ಕುವೆಂಪು ಒಬ್ಬರು. ಅದಕ್ಕೇ ಅವರಿಗೆ ಬಾನಾಡಿಗಳ ಸಾಲು ದೇವರ ರುಜುವಿನಂತೆ ಕಂಡದ್ದು. ಅವರ ಅಂತಃ ಚಕ್ಷು ಅತೀತವಾದ ದರ್ಶನವುಳ್ಳದ್ದು. ಅವರು ನಿರಾಕಾರವನ್ನು ಧ್ಯಾನಿಸುವ ಸಮರ್ಥ ಅವಧಾನವುಳ್ಳವರು. ಮಲೆನಾಡಿನ ಬದುಕನ್ನು ಮೈಗೂಡಿಸಿಕೊಂಡ ಕುವೆಂಪು ಅದೇ ಪರಿಸರದಲ್ಲಿ ಬದುಕಲು ಉದಯರವಿಯಲ್ಲಿ ತಮ್ಮದೇ ರೀತಿ ಪಕ್ಷಿಕಾಶಿಯನ್ನು ಸೃಷ್ಟಿಸಿಕೊಂಡವರು. ಉದಯರವಿಯ ಪಕ್ಷಿಕಾಶಿಯ ನಿರ್ಮಾಣದಲ್ಲಿ ಮಡದಿ ಹೇಮಾವತಿಯವರ

ಪಾತ್ರ ಅನನ್ಯ. ಅವರನ್ನು ಬಿಟ್ಟು ಆ ವಿಚಾರವನ್ನು ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿಲ್ಲವೆಂದೇ ನನ್ನ ಅನಿಸಿಕೆ. ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಸೇರಿ ಬೆಳೆಸಿ ಪೋಷಿಸಿದ ಉದ್ಯಾನವನ ನಿಜಕ್ಕೂ ಕುವೆಂಪು ಪಾಲಿಗೆ ಮಲೆನಾಡ ಪಕ್ಷಿ ಕಾಶಿಯೇ ಆಗಿತ್ತು. ಈ ವಿಚಾರವನ್ನು ಸಿ.ಪಿ.ಕೆ.ಯವರು ಹಂಚಿಕೊಂಡಿರುವುದು ಹೀಗೆ – "ಅದು ಬರಿ ಮನೆಯೇ? ಮಲೆನಾಡನ್ನು ನೆನಪಿಸುವಂತೆ ಸುತ್ತಲೂ ಗಿಡ ಮರ ಬಳ್ಳಿಗಳಿಂದ ತುಂಬಿದ, ಹೂವು ಹಸುರು ಕಂಗೊಳಿಸುವ ಋಷ್ಯಾಶ್ರಮ!"[೧]

ಅಪ್ಪನ ಪ್ರಕೃತಿ ಪ್ರೀತಿಯನ್ನು ಮಗಳು ಬಹು ಸೂಕ್ಷ್ಮವಾಗಿ ಸೆರೆ ಹಿಡಿದಿದ್ದಾರೆ. ಅಣ್ಣ ತೇಜಸ್ವಿಗೆ ಗೋಚರಿಸದ ಅಪ್ಪನ ಎಷ್ಟೋ ಸೂಕ್ಷ್ಮಗಳನ್ನು ಮಗಳು ತಾರಿಣಿ ಕಂಡುಕೊಂಡಿದ್ದಾರೆ. ಉದಯರವಿ ಉದ್ಯಾನದ ಆರಂಭದ ಮಾತುಗಳನ್ನು ತಾರಿಣಿಯವರು ಹೇಳುವುದು ಹೀಗೆ. "ಉದಯರವಿ ಮನೆ ಮುಂದೆ ಉದ್ಯಾನ ಬೆಳೆಸಲು ಅನುಕೂಲವಾಗುವಂತೆ ತಂದೆಯವರು ಸಾಕಷ್ಟು ಜಾಗಬಿಟ್ಟು ಮನೆ ಕಟ್ಟಿಸಿರುವರು. ಅಪ್ಪ ಅಮ್ಮ ಇಬ್ಬರಿಗೂ ಗಿಡಗಳ ಬಗ್ಗೆ ಸಾಕಷ್ಟು ಆಸಕ್ತಿ. ತಂದೆಯವರ ಇಚ್ಛೆಯನ್ನು ಗಮನದಲ್ಲಿಟ್ಟುಕೊಂಡು ಅಮ್ಮ ಸುಂದರ ಉದ್ಯಾನವನ್ನು ರೂಪಿಸಿದರು. ತಂದೆಯವರ ಅನೇಕ ಕವನಗಳಿಗೆ ಈ ಉದ್ಯಾನವೇ ಸ್ಫೂರ್ತಿ. ಅಮ್ಮ ಬೆಳೆದಿದ್ದ ಹೂವುಗಳನ್ನು ಕುರಿತಂತೆ ಸಾಕಷ್ಟು ಕವನಗಳು ಹೊಮ್ಮಿವೆ. ನಮ್ಮ ಮನೆ ಕಟ್ಟಿದಾಗ ಈಗಿನಂತೆ ಹೂಗಿಡಗಳು, ಹಣ್ಣಿನ ಗಿಡಗಳು ದೊರೆಯುವ ನರ್ಸರಿಗಳಾಗಲಿ, ಮಾರಾಟ ಮಾಡುವ ಸಂಸ್ಥೆಗಲಾಗಲಿ ಇರಲಿಲ್ಲ. ಆದರೂ ಅಪ್ಪ ಅಮ್ಮ ಎಲ್ಲೆಲ್ಲಿಂದಲೋ ಗಿಡಗಳನ್ನು ತಂದು ನೆಡುತ್ತಿದ್ದರು. ಅವರು ನೆಟ್ಟಿರುವ ಗಿಡಗಳೆಲ್ಲಿ ಹಾಗೆಯೇ ಉಳಿದಿದ್ದರೆ ಉದಯರವಿ ಮನೆಯ ಸುತ್ತ ದೊಡ್ಡ ಕಾಡೇ ಬೆಳೆಯಬೇಕಿತ್ತು. ನಾವು ಚಿಕ್ಕವರಾಗಿದ್ದಾಗ ಮನೆಯಲ್ಲಿ ತೆಂಗು, ಬಾದಾಮಿ, ನೆಲ್ಲಿ, ಸೀಬೆ, ಬೆಟ್ಟದ ನೆಲ್ಲಿ, ಬಾಳೆ, ಸಪೋಟಾ, ಹಿಪ್ಪುನೇರಳೆ, ಸುರಹೊನ್ನೆ, ಪನ್ನೇರಳೆ, ಅಂಜೂರ, ಮಾವು, ಹಲಸು, ನುಗ್ಗೆ, ಸಂಪಿಗೆ ಕಂಚಿಗಿಡ, ಚಕ್ಕೋತ, ನಿಂಬೆ, ರಾಂಫಲ, ಸೀತಾಫಲ ಮೊದಲಾದ ಮರಗಿಡಗಳು ತುಂಬಿದ್ದವು."[೨]

ಈ ಪಕ್ಷಿಕಾಶಿಯಲ್ಲಿ ಕವಿ, ಕವಿಮಡದಿ, ಕವಿ ಮಕ್ಕಳು, ಕವಿ ಬಾಂಧವರು ಹಾಡಿ ನಲಿದು ಸಂತೋಷಪಟ್ಟಿದ್ದಕ್ಕೆ ಲೆಕ್ಕವೇ ಇಲ್ಲ. ತಮ್ಮಂತೆಯೇ ಹಾಡಿ ನಲಿಯಲು ಕವಿ ಕುವೆಂಪು ದೇವತೆಗಳನ್ನು ಪ್ರೀತಿಯಿಂದ ತಮ್ಮ ತೋಟಕ್ಕೆ ಆಹ್ವಾನಿಸುವುದು ಹೀಗೆ –

---

[೧] ಕುವೆಂಪು ಸಂದರ್ಶನ, ಸಿ.ಪಿ.ಕೆ. ಪುಟ ೫.

[೨] 'ಮಗಳು ಕಂಡ ಕುವೆಂಪು', ಪುಟ ೩೩೯.

ಸೌಂದರ್ಯಯಾಜಿ

"ಬನ್ನಿ, ಓ ಬಾನಲೆವರೆ, ನಮ್ಮ ತೋಟಕೆ
ನಂದನವನೆ ಮೀರಿಸುವೀ ದಿವ್ಯ ನೋಟಕೆ
ಬನ್ನಿ ಸೌಂದರ್ಯ ರಸದ ಅಮೃತದೂಟಕೆ
ಅಲೋಕ ಸುಖವನೀವ ಈ ಲೋಕ ಪೀಠಕೆ:"[೧]

ಋಷಿಕವಿ ಕುವೆಂಪು ವನವಾಸಿ. ಆದ್ದರಿಂದಲೇ ಅವರ ಕಾವ್ಯದ ರಾಮ 'ಗಿರಿವನ ಪ್ರಿಯ', ಶಾಂತಿ ಸೌಹಾರ್ದ ಪ್ರೀತಿಗಳು ಅವರಲ್ಲಿ ಮೇಳವಿಸಿದ್ದವು. ಕ್ರೌರ್ಯಕ್ಕೆ ಅವರೆಂದೂ ಮನಸ್ಸು ಮಾಡಿದವರಲ್ಲ. ಒಮ್ಮೆ ಕುವೆಂಪು ಅವರು ಮಡದಿ ಮಕ್ಕಳೊಂದಿಗೆ ದ್ರಾಕ್ಷಿ ಗಿಡವನ್ನು ಬೆಳೆದಿರುತ್ತಾರೆ. ಅದರಲ್ಲಿ ಬಿಟ್ಟಿರುವ ದ್ರಾಕ್ಷಿ ಹಣ್ಣುಗಳನ್ನು ಪಕ್ಷಿ ಸಮೂಹವು ತಿಂದು ನಲಿಯುತ್ತಿರುತ್ತವೆ. ಇದನ್ನು ಹೋಗಲಾಡಿಸಲು ಕೆಲಸದವನು ಒಂದು ಅಳಿಲನ್ನು ಹೊಡೆದು ನೇತು ಹಾಕಿದರೆ ಇವುಗಳ ಹಾವಳಿ ನಿಲ್ಲುತ್ತದೆಂದು ಹೇಳಿದಾಗ ಕುವೆಂಪು ಅವರಾಡಿದ ಪಕ್ಷಿ ಪ್ರೀತಿಯ ಮಾತುಗಳನ್ನು ಮಗಳು ತಾರಿಣಿಯವರು ಬಹು ಅಕ್ಕರೆಯಿಂದ ಗ್ರಹಿಸಿ ನೆನಪಿನಾಳದಿಂದ ಹೇಳುವುದು ಹೀಗೆ – "ಅಳಿಲು, ಹೊರಸಲುಹಕ್ಕಿ, ಟುವ್ವಿಹಕ್ಕಿ, ಮೈನಾ, ಪಿಕಳಾರ, ಎಲ್ಲಾ ನಮ್ಮ ಉದ್ಯಾನದ ಪ್ರಜೆಗಳು".[೨]

ಹಕ್ಕಿಗಳನ್ನು ಪ್ರಜೆಗಳೆಂದು ಪ್ರೀತಿಸುವ ಕುವೆಂಪು ಹೃದಯ ಒಳಗೊಂದು, ಹೊರಗೊಂದು ಎನುವ ಭೇದವಿಲ್ಲದ್ದು, ಅವರು ಹಕ್ಕಿಗಳನ್ನು ಬಹು ಪ್ರೀತಿಯಿಂದ ಕಾಣುತ್ತಿದ್ದರು. ಅವುಗಳಿಗೆ ನೋವಾದರೆ ಅವರೆಂದೂ ಸಹಿಸುತ್ತಿರಲಿಲ್ಲ. ಅವುಗಳ ಜೀವನಕ್ಕೆ ತೊಂದರೆಯಾಗದಂತೆ ತಮ್ಮ ತೋಟವನ್ನು ಪಾಲಿಸುತ್ತಿದ್ದರು. ಮಡದಿಗೆ, ಮಕ್ಕಳಿಗೆ, ಕೆಲಸದವರಿಗೆ ಪಕ್ಷಿಗಳ ಇರುವಿಕೆಯನ್ನು ಗಮನಕ್ಕೆ ತಂದು ಎಚ್ಚರದಿಂದ ಕೆಲಸ ನಿರ್ವಹಿಸಲು ಕಟ್ಟಪ್ಪಣೆ ಮಾಡುತ್ತಿದ್ದರು. ಅವುಗಳ ಜೀವನಕ್ಕೆ ರಕ್ಷಣೆಯಾಗಿದ್ದರು. ಆದರೂ ಅವರ ಕೈಮೀರಿ ನಡೆದುಹೋದ ಅಚಾತುರ್ಯಕ್ಕೆ ಕುವೆಂಪು ನೊಂದುಕೊಳ್ಳುವುದು ಅವರಲ್ಲಿನ ಅತೀವ-ಪಕ್ಷಿ ಪ್ರೀತಿಯನ್ನು ತೋರಿಸುತ್ತದೆ. ಆ ಒಂದು ಸಂದರ್ಭವನ್ನು ತಾರಿಣಿಯವರು ಮೆಲುಕು ಹಾಕುವುದು ಹೀಗೆ – "ದ್ರಾಕ್ಷಿ ಬಳ್ಳಿ ಸೊಂಪಾಗಿ ಬೆಳೆದು ದೊಡ್ಡದಾಯಿತು. ಅದರಲ್ಲಿಯೂ ಹಕ್ಕಿಗಳ ವಾಸ ಪ್ರಾರಂಭವಾಯಿತು. ಸಾಮಾನ್ಯವಾಗಿ ಪಿಕಳಾರ, ಹೊರಸಲು ಹಕ್ಕಿಗಳು ಪದೇ ಪದೇ ಗೂಡು ಕಟ್ಟಿ ಮೊಟ್ಟೆ ಇಡುತ್ತಿದ್ದವು. ಕೆಲವೇ ದಿನಗಳಲ್ಲಿ ಕಾಗೆಯೋ, ಬೆಕ್ಕೋ,

---

೧ ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೧೭೧.
೨ 'ಮಗಳು ಕಂಡ ಕುವೆಂಪು', ಪುಟ ೩೫೮.

ಕೋಗಿಲೆಯೋ, ಮೊಟ್ಟೆ ಕದ್ದು ತಿನ್ನುತ್ತಿದ್ದವು. ದ್ರಾಕ್ಷಿ ಹಣ್ಣು ಉಳಿಸಿಕೊಳ್ಳಲು ಗಿಡಕ್ಕೆ ಪದೇ ಪದೇ ಔಷಧಿ ಹೊಡೆಯಬೇಕಾಗುತ್ತಿತ್ತು. ಹಕ್ಕಿಗಳು ಗೂಡು ಕಟ್ಟಿದ್ದರೆ ನಮಗೆ ಕಷ್ಟವಾಗುತ್ತಿತ್ತು. ಔಷಧಿ ಹೊಡೆಯದಿದ್ದರೆ ದ್ರಾಕ್ಷಿ ರೋಗಕ್ಕೆ ತುತ್ತಾಗಿ ಉಳಿಯುವಂತಿಲ್ಲ. ಒಮ್ಮೆ ಹೂವಿನ ಹಕ್ಕಿ ಗೂಡುಕಟ್ಟಿ ಮರಿ ಮಾಡಿತ್ತು. ಯಾರಿಗೂ ಗೊತ್ತಿರಲಿಲ್ಲ. ತೋಟಗಾರಿಕೆ ಇಲಾಖೆಯವರು ಬಂದು ಆಗಾಗ್ಗೆ ಬಳ್ಳಿಗೆ ಔಷಧಿ ಹೊಡೆಯುತ್ತಿದ್ದರು. ಒಂದು ದಿನ ಔಷಧಿ ಹೊಡೆದು ಹೋದ ಮೇಲೆ ಮೂರು ಹುವ್ವಿನ ಹಕ್ಕಿ ಮರಿಗಳು ಗೂಡಿನಿಂದ ಹೊರಗೆ ಬಿದ್ದು ಸತ್ತವು. ತಂದೆ ತಾಯಿ ಹಕ್ಕಿ ಬಂದು ರೋಧಿಸುತ್ತಿದ್ದವು. ಅದನ್ನು ನೋಡಿದ ತಂದೆಯವರು ತುಂಬ ಸಂಕಟ ಪಟ್ಟರು. "ಛೇ ಈ ಹಕ್ಕಿಗೂಡು ಕಟ್ಟಿರುವುದು ಗೊತ್ತೆ ಇರಲಿಲ್ಲ. ಹೇಗೋ ಬೇರೆ ಪ್ರಾಣಿಗಳಿಂದ ಉಳಿದಿದ್ದರೆ ನಮ್ಮಿಂದ ಸಾಯುವಂತಾಯಿತಲ್ಲಾ. ಇನ್ನು ಮೇಲೆ ಹಕ್ಕಿ ಗೂಡು ಕಟ್ಟಿದಾಗ ಔಷಧಿ ಹೊಡೆಯುವುದೇ ಬೇಡ. ಹಣ್ಣು ಹೋದರೆ ಹೋಗಲಿ" ಎಂದರು. ಇನ್ನೊಮ್ಮೆ ಹುವ್ವಿಹಕ್ಕಿ ಗೂಡು ಕಟ್ಟಿದಾಗ ಬಹಳ ಎಚ್ಚರಿಕೆ ವಹಿಸಿ ತಂದೆಯವರೇ ನಿಂತು ಈ ಭಾಗದ ಬಳ್ಳಿಗೆ ಔಷಧಿ ಹೊಡೆಯಬೇಡಿ ಎಂದು ಹಕ್ಕಿ ಗೂಡಿಗೆ ಔಷಧಿ ಬೀಳದಂತೆ ನೋಡಿಕೊಂಡರು. ಆ ಸಾರಿ ಹಕ್ಕಿ ಮರಿ ಮಾಡಿ ಏನೂ ತೊಂದರೆ ಇಲ್ಲದೆ ಮರಿ ಹಾರಿಸಿಕೊಂಡು ಹೋಯಿತು. ಸಂತೋಷಗೊಂಡ ತಂದೆಯವರು: 'ಸಧ್ಯ ನಮ್ಮ ಜವಾಬ್ದಾರಿ ಮುಗಿಯಿತು' ಎಂದರು".[೧]

ಕುವೆಂಪು ಅವರ ಈ ಪಕ್ಷಿ ಮಮತೆ ನಿಜಕ್ಕೂ ಅಚ್ಚರಿ ಮೂಡಿಸುವಂಥದ್ದು. ತಮ್ಮ ಸ್ವಂತ ಮಗಳಿಗೆ ಬಾಣಂತನ ಮಾಡಿ ಸುಖವಾಗಿ ಮಗಳು, ಮೊಮ್ಮಗುವನ್ನು ಗಂಡನ ಮನೆಗೆ ಬೀಳ್ಕೊಟ್ಟಷ್ಟು ಸಂಭ್ರಮ ಕುವೆಂಪು ಅವರದು. ಅವರ ಪಕ್ಷಿ ಕಾಳಜಿ ಸಾಮಾನ್ಯರಾದ ನಮಗೆ ವಿಚಿತ್ರವೆಂದೇ ತೋರುತ್ತದೆ. ಒಂದು ಹಕ್ಕಿಯ ಪ್ರಾಣ ನಮಗೆ ಕೇವಲವೆನಿಸಿದರೆ, ಕುವೆಂಪು ಅವರಿಗೆ ಅದೇ ಮಹತ್ತು. ಅವರ ಈ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಗ್ರಹಿಸಿ ನಮಗೆ ಕಟ್ಟಿಕೊಟ್ಟಿದ್ದಾರೆ ತಾರಿಣಿಯವರು.

ಪ್ರಕೃತಿ ಕವಿ ಕುವೆಂಪುವಿಗೆ ಮುಂಜಾನೆಯ ಮಂಜುಮುಸುಕಿರುವ ಹಸಿರನ್ನು ಕಣ್ತುಂಬಿಕೊಂಡು ಸಂತೋಷಿಸುವುದು ದಿನನಿತ್ಯದ ಖುಷಿ ಕೆಲಸ. ಅವರಿಗೆ ಹಸಿರು ಹುಲ್ಲು ಹಾಸಿನ ಮೇಲೆ ಬಿದ್ದ ಮಂಜು ದಿನಕರನ ಎಳೆ ರಶ್ಮಿಯಲ್ಲಿ ಮಿನುಗುತ್ತಿರುವ ಸೌಂದರ್ಯದ ರಸವನ್ನು ಸವಿಯುವುದೆಂದರೆ ನವ ಚೇತನವನ್ನು ಆವಾಹನೆ ಮಾಡಿಕೊಂಡಂತೆ. ಬಹುಶಃ ಅವರ

೧ 'ಮಗಳು ಕಂಡ ಕುವೆಂಪು', ಪುಟ ೩೫೯.

‘ಶ್ರೀ ರಾಮಾಯಣ ದರ್ಶನಂ’ ಕೃತಿಯಲ್ಲಿ ಬರುವ ಹಸಿರು ಹುಲ್ಲಿನ ಮೇಲಿನ ಸೂರ್ಯ ರಶ್ಮಿಯ ವರ್ಣನೆ ಇಂತಹ ಸನ್ನಿವೇಶಗಳಿಂದ ಪ್ರೇರಿತವಾದದ್ದೆಂದರೆ ತಪ್ಪಾಗದೇನೊ?

“ನೋಡು, ಮೈಥಿಲಿ, ಅಲ್ಲಿ!
ಪನಿತಳ್ತ ಶಾದ್ವಲ ಶ್ಯಾಮ ವೇದಿಕೆಯಲ್ಲಿ
ತೃಣ ಸುಂದರಿಯ ಮೂಗುತಿಯ ಮುತ್ತು ಪನಿಯಂತೆ
ಮಿರುಮಿರುಗಿ ಮೆರೆವಾ ಹಿಮದ ಬಿಂದು! ಜ್ವಲಿಸುತ್ತಿದೆ
ನೋಡೆಂತು ಬಣ್ಣದೆಣ್ಣೆಯ ಹಣತೆ ಸೊಡರಂತೆ
ಸಪ್ತರಾಗೋಜ್ವಲಂ! ಸರ್ವ ಸೃಷ್ಟಿಯ ದೃಷ್ಟಿ ತಾಂ
ಸೆರೆಯಾಗಲೊಪ್ಪಿರುವುದಾ ಹನಿಯ ಹೃದಯದಾ
ಪುಟ್ಟ ಜೋತಿಯಲಿ! ದೇವರ ಮುಖದ ದರ್ಶನಕೆ
ಸಾಲದೇನಾ ಹನಿಯ ಕಿರುದರ್ಪಣಂ? . . . .”[೧]

ಮನಸ್ಸಿಗೆ ಮುದ ನೀಡುತ್ತಿದ್ದ ಹಸಿರು ಹುಲ್ಲನ್ನು ಬೆಳೆಸುವುದರಲ್ಲಿ ಕುವೆಂಪು ಮತ್ತು ಅವರ ಮಡದಿ ತುಂಬು ಶ್ರಮ ಪಟ್ಟಿದ್ದಾರೆ. ತಾರಿಣಿಯವರು ಹೇಳುವಂತೆ “ಉದ್ಯಾನದ ಎರಡೂ ಕಡೆ ವಿಶಾಲ ಹುಲ್ಲು ಹಾಸನ್ನು ಮಾಡಿದ್ದರು. ಬೇಸಿಗೆಯಲ್ಲಿ ಹುಲ್ಲು ಹಸಿರಾಗುವಂತೆ ಅಪ್ಪ ಅಮ್ಮ ತುಂಬ ಶ್ರಮವಹಿಸಿದ್ದರು. ಕಾವೇರಿ ನದಿಯೇ ಮೈಸೂರಿಗೆ ಹತ್ತಿರದಲ್ಲಿ ಹರಿದರೂ ಬೇಸಿಗೆಯಲ್ಲಿ ಮನೆಯಲ್ಲಿ ನೀರಿಗೆ ಕಷ್ಟವಿತ್ತು. ಅದಕ್ಕಾಗಿ ರಾತ್ರಿ ಹೊತ್ತು ನೀರು ಬಂದರೆ ಹುಲ್ಲಿಗೆ ಪೈಪು ಹಾಕಿ ನೀರು ಹರಿಸಲು ಅನುಕೂಲ ಮಾಡಿದ್ದರು. ರಾತ್ರಿ ನೀರು ಬರುವ ಸದ್ದು ಕೇಳಿದರೆ ತಂದೆಯವರೇ ನಾಲ್ಕೈದು ಬಾರಿ ಎದ್ದು ಹೋಗಿ ಕತ್ತಲೆಯಲ್ಲಿಯೇ ಹುಲ್ಲಿಗೆ ಪೈಪಿನ ಮೂಲಕ ನೀರು ಹಾಯಿಸಿ ಬರುತ್ತಿದ್ದರು. ಹುಲ್ಲು ಹಾಸಿಗೆ ಎಲ್ಲಾ ಕಡೆ ನೀರು ಸಿಗುವಂತೆ ಮಾಡಿದ್ದರು.”[೨]

ಸೌಂದರ್ಯವನ್ನು ಸವಿಯುತ್ತಿದ್ದುದು ಮಾತ್ರವಲ್ಲದೆ, ಆ ಸೌಂದರ್ಯದ ಸೃಷ್ಟಿಯ, ರಕ್ಷಣೆಯ ಹಿನ್ನೆಲೆಯಲ್ಲಿ ಕುವೆಂಪು ಅವರ ಶ್ರಮವಿದೆ ಎಂದು ನಮಗೆ ಮಗಳು ತಾರಿಣಿಯವರ ನೆನಪಿನ ಗರಿಗಳಿಂದ ತಿಳಿಯುತ್ತದೆ. ಆ ರೀತಿಯ ಸನ್ನಿವೇಶಗಳನ್ನು ಗ್ರಹಿಸಿರುವ ತಾರಿಣಿಯವರದು ನಿಶಿತ ಮತಿ.

---

[೧] ‘ಶ್ರೀ ರಾಮಾಯಣ ದರ್ಶನಂ’, ಪುಟ ೨೧೩.
[೨] ‘ಮಗಳು ಕಂಡ ಕುವೆಂಪು’, ಪುಟ ೩೬೫.

ಕುವೆಂಪು ಅವರ ಉದಯರವಿಯ ಪಕ್ಷಿಕಾಶಿಯಲ್ಲಿ ಮತ್ತೊಂದು ಸೊಬಗೆಂದರೆ ಹೂ ಗಿಡಗಳು. ಅವು ಹೂನಿಂದ ಸಿಂಗಾರಗೊಂಡಾಗ ಅದನ್ನು ನೋಡಲು ಎರಡು ಕಣ್ಣು ಸಾಲದು; ಆ ಹೂ ತೋಟದಿಂದಲೇ ಸ್ಫೂರ್ತಿಗೊಂಡು ಅಪ್ಪ ಅನೇಕ ಕವನಗಳನ್ನು ಬರೆದಿದ್ದಾರೆ ಎಂದು ತಾರಿಣಿಯವರು ಹೇಳುತ್ತಾರೆ. ಹೂ ಗಿಡಗಳ ಸಕಲ ಜವಾಬ್ದಾರಿಯನ್ನು ಕುವೆಂಪು ಅವರ ಮಡದಿ ಹೇಮಾವತಿಯವರೇ ವಹಿಸುತ್ತಿದ್ದರು. ಗಂಡನ ಮನದೊಲುಮೆಗೆ ತಕ್ಕಂತೆ ಬಣ್ಣ ಬಣ್ಣದ ಹೂ ಗಿಡಗಳನ್ನು ನೆಡುತ್ತಿದ್ದರು. ಹೆಂಡತಿ ನೆಟ್ಟ ಹೂ ಗಿಡಕ್ಕೆ ಪ್ರೀತಿಯಿಂದ ಹೆಸರಿಟ್ಟು ಕುವೆಂಪು ಅದರ ಸೌಂದರ್ಯವನ್ನು ಸವಿಯುತ್ತಿದ್ದರು. ಪ್ರತಿ ಹೂವಿನಲ್ಲೂ ಭಗವಂತನಿದ್ದಾನೆಂದು ತಿಳಿದು, ಉದ್ಯಾನವನದಲ್ಲಿ ಋಷಿಯಂತೆ ವಿಹರಿಸುತ್ತಿದ್ದರು. ಇದು ಪುಷ್ಪ ಕಾಶಿ ಎಂದು ಕೈಮುಗಿಯುತ್ತಿದ್ದರು.

"ಬಾ, ನಮಸ್ಕರಿಸು
ಸೌಂದರ್ಯ ರೂಪಿ ಭಗವಂತನಿಲ್ಲ ಪುಷ್ಪವೇಷಿ;
ಬಣ್ಣ ಬಣ್ಣವಾಶೀರ್ವದಿಸಿ
ಬರಿಯ ಉದ್ಯಾನವಲ್ತೊ ಇದು ಪುಷ್ಪಕಾಶಿ!"[೧]

ಪ್ರತಿ ಗಿಡ ಮರ, ಹೂನಲ್ಲಿಯೂ ಭಗವಂತ ವಾಸಿಸುತ್ತಾನೆ ಎಂಬ ಸುಂದರ ಕಲ್ಪನೆಯನ್ನು (ಕಲ್ಪನೆಯೇ? ಅಲ್ಲ ವಾಸ್ತವ ಅಲ್ಲವೆ?) ಹೊಂದಿರುವ ಕುವೆಂಪು ಅವರಿಗೆ ಮರಗಿಡಗಳನ್ನು ಕತ್ತರಿಸುವುದೆಂದರೆ ಅತೀವ ಸಂಕಟ. ಆ ಕೆಲಸಕ್ಕೆ ತುಂಬ ಅಡ್ಡಿ ಮಾಡುತ್ತಿದ್ದರು. ಮರ ಗಿಡಗಳಿಗೆ ಆಪ್ತರೆಂಬಂತೆ ಪ್ರೀತಿಯಿಂದ ತಮ್ಮ ಹೃದಯದಲ್ಲಿ ಸ್ಥಾನ ಕೊಡುತ್ತಿದ್ದರು. ಪಕ್ಷಿಕಾಶಿ, ಪುಷ್ಪಕಾಶಿಗಳ ಪ್ರೀತಿಯ ಮಾಲಿಯಾದ ಹೇಮಾವತಿಯವರು ಮರಗಿಡಗಳನ್ನು ಶಿಸ್ತಿನಿಂದ ಬೆಳೆಸಲು, ಒಪ್ಪ ಓರಣಕ್ಕಾಗಿ ಮರಗಿಡಗಳನ್ನು ಕಡಿಸಲು ನಿಂತರೆ ಕುವೆಂಪು ಅವರಿಗೆ ಎಲ್ಲಿಲ್ಲದ ಬೇಸರ. ಅದಕ್ಕಾಗಿ ಹೇಮಾವತಿಯವರು ಮಾಡುತ್ತಿದ್ದ ಸಾಹಸ ಅಷ್ಟಿಷ್ಟಲ್ಲ ಅದನ್ನು ತಾರಿಣಿಯವರು ಹೀಗೆ ಹೇಳುತ್ತಾರೆ. "ಅಮ್ಮ ಮರ ಗಿಡಗಳನ್ನು ಯದ್ವಾ ತದ್ವ ಬೆಳೆಯಲು ಬಿಡುತ್ತಿರಲಿಲ್ಲ. ತುಂಬ ಬೆಳೆದಾಗ ಕತ್ತರಿಸಿ ಹದ ಮಾಡುತ್ತಿದ್ದರು. ಆದರೆ ತಂದೆಯವರಿಗೆ ಗಿಡ ಕತ್ತರಿಸುವುದೆಂದರೆ ಮನಸ್ಸಿಗೆ ಕಿರಿಕಿರಿ ಗಿಡ ಏನಾಗಿದೆ? ಏಕೆ ಕತ್ತರಿಸಬೇಕು? ದೊಡ್ಡವಾದರೆ ಆಗಲಿ -ಎನ್ನುವರು. ಅವರನ್ನು ಒಪ್ಪಿಸುವುದು ಅಮ್ಮನಿಗೆ ಸಾಹಸವೇ. ಅಮ್ಮ ಉಪಾಯವಾಗಿ ಗಿಡ ಕತ್ತರಿಸುವುದು ಕಂಡುಕೊಂಡಿದ್ದರು. ತಂದೆಯವರು ಮನೆಯಲ್ಲಿ ಇಲ್ಲದ ಸಮಯದಲ್ಲಿ ಮರ ಕತ್ತರಿಸುತ್ತಿದ್ದರು. ತಂದೆಯವರು ಮನೆಗೆ ಬಂದು

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೨, ಪುಟ ೧೭೯.

ಗೇಟು ದಾಟುತ್ತಿದ್ದಂತೆ ಅವರ ಗಮನ ಕತ್ತರಿಸಿದ ಗಿಡಕ್ಕೆ ಹೋಗುತ್ತಿತ್ತು. ಇದೇನು ಸಂಪಿಗೆ ಮರ ಬೆಳಿಗ್ಗೆ ಇದ್ದಂತೆ ಈಗ ಕಾಣುತ್ತಿಲ್ಲ ಎನ್ನುತ್ತ ಒಳ ಬರುತ್ತಿದ್ದರು. ಸಣ್ಣ ರೆಂಬೆ ತೆಗೆಸಿದೆ ಅಷ್ಟೇ ಎಂದು ಅಮ್ಮ ಹೇಳಿ ಬೇರೆ ವಿಷಯಕ್ಕೆ ಮಾತು ಬದಲಾಯಿಸುತ್ತಿದ್ದರು. ಮರುದಿನ ಮನೆಯ ಮುಂದಿನ ವರಾಂಡದಲ್ಲಿ ಕುಳಿತ ತಂದೆಯವರು ಗಿಡ ನೋಡುತ್ತಾ "ನೋಡು ನಾನು ಬೆಂಗಳೂರಿಗೆ ಹೋಗಿ ಬರುವಷ್ಟರಲ್ಲಿ ಮರಕ್ಕೆ ಕತ್ತರಿ ಪ್ರಯೋಗವಾಗಿದೆ. ಬೇಕಾದಷ್ಟು ಬೋಳಾಗಿದೆ. ಕತ್ತರಿಸಿದ್ದು ಹೆಚ್ಚಾಯಿತಲ್ಲವೆ!" ಎನ್ನುವರು. ಅಮ್ಮ ಹೇಳುತ್ತಿದ್ದರು, "ಮನೆಯಲ್ಲಿದ್ದ ಹಳೇ ಕಂಚಿಗಿಡ ಗೆದ್ದಲಿನಿಂದ ಹೋದಾಗ ಅದನ್ನು ತೆಗೆಸಬೇಕಾಯಿತು. ನಿಮ್ಮ ಅಣ್ಣನಿಗೆ ಒಂದು ದಿನವೆಲ್ಲಾ ಬೇಜಾರು. ಮೂವತ್ತು ವರ್ಷಗಳಿಂದ ಹೇರಳವಾಗಿ ಹಣ್ಣು ಕೊಡುತ್ತಿದ್ದ ಮುದಿಯಾದ ಕಂಚಿಗಿಡ ತೆಗೆದು ಹಾಕಿ ಹಳೆಯ ಸಂಗಾತಿ ಹೋದನೆಂಬಂತೆ ಮನಸ್ಸಿಗೆ ಏನೋ ಖಿನ್ನತೆ ಎನ್ನುತ್ತಿದ್ದರು. ಕಂಚಿಗಿಡ ತೆಗೆದದ್ದು ಆ ಉದ್ಯಾನವೆಲ್ಲಾ ಬೆಳಕಾಗಿ ಬಿಟ್ಟಿದೆ ಎಂದು ಪದೇ ಪದೇ ಹೇಳುತ್ತಿದ್ದರು." ಎಂದು ಅಮ್ಮ ತಂದೆಯವರಿಗೆ ಗಿಡದ ಬಗ್ಗೆ ಇದ್ದ ಮಮತೆಯನ್ನು ಪ್ರಕಟಗೊಳಿಸಿದರು."[೧]

ಗಿಡ ಮರಗಳ ಬಗ್ಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದ ಕುವೆಂಪು ಅವರ ಮನಃಸ್ಥಿತಿಯನ್ನು ಅರಿಯದ ಕಿಡಿಗೇಡಿ ವಿದ್ಯಾರ್ಥಿಗಳು; ಕುವೆಂಪು ಅವರು ವೈಸ್ ಛಾನ್ಸಲರ್ ಹುದ್ದೆಯಲ್ಲಿದ್ದಾಗ ಹಾಜರಾತಿ ವಿನಾಯ್ತಿ ಪಡೆಯುವ ವಿಚಾರವಾಗಿ ಅವರ ಉದಯರವಿ ಉದ್ಯಾನಕ್ಕೆ ನುಗ್ಗಿ ದಾಂಧಲೆ ನಡೆಸಿ ಮರಗಿಡಗಳನ್ನು ಹಾಳು ಮಾಡಿದ್ದರು ಅದು ವಿಷಾದಕರ.

ಪ್ರಕೃತಿ ಸೌಂದರ್ಯವನ್ನು ಆರಾಧಿಸುವ ಕುವೆಂಪು ಪ್ರಕೃತಿಯಲ್ಲಿ ಭಗವಂತನನ್ನು ಕಾಣುತ್ತಾರೆ. ಕಂಡು ಪೂಜಿಸುತ್ತಾರೆ. ಕುವೆಂಪು ತಮ್ಮ ಉದಯರವಿ ಪಕ್ಷಿಕಾಶಿಗೊ, ಮಲೆನಾಡಿನ ಪಕ್ಷಿಕಾಶಿಗೊ, ಜಗತ್ತಿನ ಇನ್ನಾವುದೇ ಮೂಲೆಯಲ್ಲಿರುವ ಪಕ್ಷಿಕಾಶಿಗೊ, ಎಂತಹವರು ಹೋಗಬಾರದು, ಹಾಗೊಂದು ವೇಳೆ ಹೋಗುವುದಾದರೆ ಹೇಗೆ ಹೋಗಬೇಕು, ಏಕೆ ಹೋಗಬೇಕೆಂದು ಎದೆ ತುಂಬಿ ಹೇಳುವುದು ಹೀಗೆ –

---

[೧] 'ಮಗಳು ಕಂಡ ಕುವೆಂಪು', ಪುಟ ೩೭೧.

ಪಕ್ಷಿಕಾಶಿ

“ಇಲ್ಲಿ ಹುಗಲಿಲ್ಲ ನಿನಗೆ, ಓ ಬಿಯದಃ
ಇದು ಪಕ್ಷಿಕಾಶಿ!
ದೇವನದಿಯಲ್ಲಿ ದ್ವೀಪ ಕೃಪೆಯಲ್ಲಿ
ಭಾವ ತರುವಾಸಿ
ಪ್ರಾಣ ಪಕ್ಷಿ ಕುಲುಮಿಹುದು ರಕ್ಷೆಯಲಿ
ನಿತ್ಯಮವಿನಾಶಿಃ
ಶಕ್ತಿ ಸುತ್ತಲೂ ಕಾವಲಿಹುದು ಕಾಣ್
ಅಗ್ನಿ ಜಲರಾಶಿ
ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು
ಅಲ್ಲೆ ಇಟ್ಟು ಬಾ;
ಬಿಂಕದುಕುತಿಯನ್ನು ಕೊಂಕು ಯುಕುತಿಯನು
ಎಲ್ಲ ಬಿಟ್ಟು ಬಾ;
ಮೆಯ್ಯ ತೊಳೆದು ಬಾ, ಕಯ್ಯ ಮುಗಿದು ಬಾ
ಹಮ್ಮನುಳಿದು ಬಾ
ಇಕ್ಷು ಮಧುರಮೆನೆ ಮೋಕ್ಷ ಪಕ್ಷಿಯುಲಿ
ನಾಡಿ ನಾಡಿಯಲಿ ಹಾಡಿ ಹರಿದು ನಲಿ
ದಾಡಬಹುದು ಬಾ!”[೧]

---

[೧] ಕುವೆಂಪು ಸಮಗ್ರ ಕಾವ್ಯ, ಸಂ. ೧, ಪುಟ ೬೨೭.

೧೨-ಶಿಸ್ತು ಮತ್ತು ಕುವೆಂಪು

ಮನುಷ್ಯನ ಜೀವನಶೈಲಿ ಗೊಂದಲಕ್ಕೀಡಾಗದೆ ಸರಾಗವಾಗಿ, ಸರಳವಾಗಿ, ಸಕ್ರಿಯವಾಗಿ ನಡೆಯಬೇಕಾದರೆ ಅವನು ಕೆಲವೊಂದು ಕಟ್ಟುಪಾಡುಗಳಿಗೆ ತನ್ನನ್ನು ಗುರಿಪಡಿಸಿಕೊಳ್ಳಬೇಕಾಗುತ್ತದೆ. ಅಂತಹ ಕಟ್ಟುಪಾಡುಗಳೆಂದರೆ - ಪ್ರಾಮಾಣಿಕ ಕಾಯಕ, ಶುಚಿಯಾದ ಮಾತು, ಸದೃಢ ಆರೋಗ್ಯ, ಸಮಯ ಪಾಲನೆ, ನ್ಯಾಯೋಚಿತ ಆಲೋಚನೆ ಇವೆ ಮುಂತಾದವು. ಈ ಎಲ್ಲಾ ಅಂಶಗಳ ಸಮುಚ್ಚಯವನ್ನು ಎರಡಕ್ಷರದಿಂದ ಗುರುತಿಸುವುದಾದರೆ ಅದೇ 'ಶಿಸ್ತು'. ಪ್ರಕೃತಿ ಮೊದಲ್ಗೊಂಡು ವಿವೇಚನಾ ಲಹರಿಯುಳ್ಳ ಮನುಷ್ಯ ಮತ್ತು ಆಲೋಚನಾರಹಿತ ಜೀವಿಗಳವರೆವಿಗೂ ಈ ಶಿಸ್ತನ್ನು ನಾವು ನೋಡಬಹುದು. ಶಿಸ್ತೆಂಬುದು ಗಣಿತ ಶಾಸ್ತ್ರವಿದ್ದಂತೆ; ಯಾವುದೇ ಒಂದು ಅಂಕಿ ತಪ್ಪಿದ್ದರೂ ಲೆಕ್ಕ ಪೂರ್ಣ ಕೆಡುವಂತೆ, ಅದರ ದಿಕ್ಕೇ ಬದಲಾಗುವಂತೆ ಶಿಸ್ತುರಹಿತ ಮನುಷ್ಯನ ಬಾಳು. ಶಿಸ್ತುಪೂರ್ಣ ಜೀವನ ಉಲ್ಲಸಿತ ಮನಸ್ಸಿಗೆ ನಿತ್ಯವೂ ಆಹ್ವಾನ ಅದಕ್ಕಾಗಿಯೇ ಮನೆಯಲ್ಲಿ, ಶಾಲೆಯಲ್ಲಿ, ಕಛೇರಿಯಲ್ಲಿ, ಸೇನೆಯಲ್ಲಿ ನ್ಯಾಯಾಲಯದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಈ ಶಿಸ್ತಿನ ಜೀವನವನ್ನು ಕಾಣುತ್ತೇವೆ. ಶಿಸ್ತಿಗನುಗುಣವಾಗಿ ಎಚ್ಚರ ತಪ್ಪದೆ ನಡೆಯುವುದು ಕೆಲವು ಸಾರಿ ಅಸಾಧ್ಯವಾಗುತ್ತದೆ. ಅಂತಹ ಸಂದರ್ಭಗಳನ್ನು ವಿವೇಚನೆಯಿಂದ ಸರಿದೂಗಿಸಿಕೊಳ್ಳಬೇಕು. ಮುಂದೆಂದೂ ಆ ಸನ್ನಿವೇಶ ಸಂದರ್ಭಗಳು ಒದಗದಂತೆ ಮುನ್ನೆಚ್ಚರ ವಹಿಸಬೇಕು. ಆಗಲೇ ಜೀವನ ದುಃಖರಹಿತ, ವ್ಯಾಧಿರಹಿತ, ಚಿಂತಾರಹಿತ, ವೈಷಮ್ಯರಹಿತವಾಗಲೂ ಸಾಧ್ಯ.

ಶಿಸ್ತು ಕುವೆಂಪು ಜೀವನದ ಬದ್ಧ ತತ್ತ್ವ. ಅದರಿಂದಾಗಿಯೇ ಅವರು ನುಡಿದಂತೆ ನಡೆಯಲು ಅನುಕೂಲವಾಯಿತು. ಶಿಸ್ತಿಗೆ ಭಂಗ ತರುವ ಯಾವೊಂದು ಸನ್ನಿವೇಶವನ್ನು ಅವರು ಸಹಿಸುತ್ತಿರಲಿಲ್ಲ. ಅವರ ಬದುಕು, ಬರಹಗಳು ಶಿಸ್ತಿನಲ್ಲಿ ಹಳಿತಪ್ಪದೆ ಸಾಗಿ ಪರಮ ಸಾಫಲ್ಯವನ್ನು ಕಂಡವು. ಅದಕ್ಕಾಗಿ ಅವರ ತಪಸ್ಸು, ಪ್ರಾರ್ಥನೆ, ಛಲ ನಿರಂತರ ಸಾಧನೆ ಬಹಳಷ್ಟಿದೆ. ಅವರ ಶಿಸ್ತು ಅಖಂಡತೆಯನ್ನು ಕಾಣಲು ಅವರ ಮಡದಿ ಹೇಮಾವತಿಯವರು ಬಹಳ ಮುತುವರ್ಜಿ ವಹಿಸಿದ್ದಾರೆ. ಅದು ಕುವೆಂಪುರವರ ಪೂರ್ವ ಕರ್ಮದ ಸತ್ಫಲವೇ ಇರಬೇಕು. ಅವರ ಮಾನಸಿಕ ಶಿಸ್ತು ಹಲವು ವೇಳೆ ಬಂಧು-ಮಿತ್ರರನ್ನು ಅಭ್ಯಾಗತರನ್ನು ಕೋಪಗೊಳ್ಳುವಂತೆ, ಅನ್ಯಥಾ ಭಾವಿಸುವಂತೆ ಎಡೆ ಮಾಡಿಕೊಟ್ಟಿದೆ. ಆದರೂ ಕುವೆಂಪು ತಮ್ಮ ಶಿಸ್ತಿಗೆ ಸಡಿಲಿಕೆ ನೀಡಿಲ್ಲ.

ತಂದೆಯವರ ಶಿಸ್ತಿನ ಜೀವನದ ಹಲವು ಅಂಶಗಳನ್ನು ಗ್ರಹಿಸಿರುವ ಮಗಳು ತಾರಿಣಿಯವರು ಹಂಚಿಕೊಳ್ಳುವ ಈ ಅಂಶವು ಬಹಳ ಸ್ವಾರಸ್ಯಕರವಾಗಿದೆ. "ಒಮ್ಮೆ ರಂಗಾಯಣ ಸಂಸ್ಥೆಯವರು ತಂದೆಯವರನ್ನು ಭೇಟಿಯಾಗಲು ಬಂದಿದ್ದು, ಮನೆಯಲ್ಲಿ ಒಂದು ರಾದ್ಧಾಂತವೇ ಏರ್ಪಟ್ಟಿತ್ತು. ರಂಗಾಯಣ ಸಂಸ್ಥೆ ನಿರ್ದೇಶಕರಾದ ಬಿ.ವಿ. ಕಾರಂತರು ತಂದೆಯವರ ಕಿಂದರಿ ಜೋಗಿ ಕವನವನ್ನು ನಾಟಕಕ್ಕೆ ರೂಪಾಂತರಿಸಿ ಒಂದು ತಿಂಗಳು ರಂಗಾಯಣದಲ್ಲಿ ಪ್ರದರ್ಶಿಸಿದ್ದರು. ಅದು ತುಂಬ ಯಶಸ್ವಿ ಪ್ರಯೋಗವಾಗಿತ್ತು. ಕಾರಂತರಿಗೆ, ಅದನ್ನು ಕುವೆಂಪು ಅವರಿಗೆ ತೋರಿಸಬೇಕೆಂಬ ಆಸೆ. ತಂದೆಯವರಿಗೆ ವಯಸ್ಸಾಗಿ ಎಲ್ಲಿಗೂ ಬರುವುದಿಲ್ಲ ಎಂಬ ವಿಚಾರದಿಂದ ಸುಮ್ಮನಾದರು. ತಂದೆಯವರು ಪತ್ರಿಕೆಯಲ್ಲಿ ಸುದ್ದಿ ಓದಿ ಸಂತೋಷ ಪಟ್ಟಿದ್ದರು. ನಾಟಕ ತೋರಿಸಲು ಆಗುವುದಿಲ್ಲ. ಕಿಂದರಿ ಜೋಗಿ ಪದ್ಯ ಹಾಡಿರುವ ರೀತಿಯನ್ನಾದರೂ ಕುವೆಂಪು ಅವರಿಗೆ ಕೇಳಿಸೋಣ ಎಂಬ ಆಸೆಯಿಂದ ತಂದೆಯವರನ್ನು ನೋಡಲು ಬಂದರು ಕಾರಂತರು. ಕಿಂದರಿಜೋಗಿ ನಾಟಕ ಯಶಸ್ವಿಯಾಗಿ, ಜನ ಮೆಚ್ಚಿದ ಎಲ್ಲ ಅಂಶಗಳನ್ನು ವಿವರಿಸಿ, ನಾಟಕ ತಂಡದವರೊಡನೆ ಇಲ್ಲಿಗೆ ಬಂದು, ನಿಮ್ಮ ಮುಂದೆ ಹಾಡಿ ತೋರಿಸುತ್ತೇವೆ ಎಂದು ಕೇಳಿಕೊಂಡರು. ತಂದೆಯವರು ಒಪ್ಪಿದರು. ಸಮಯ, ದಿನಾಂಕ ತಿಳಿದು, ಆ ದಿನ ಬರುವುದಾಗಿ ಕಾರಂತರು ಹೇಳಿ ಹೋದರು.

ಕಾರಂತರು ಬರುವ ದಿನ ಬೇಗ ಸ್ನಾನ ಮಾಡಿ ತಮ್ಮ ಕೆಲಸಗಳನ್ನು ಮುಗಿಸಿ ಕಿಂದರಿಜೋಗಿ ಕೇಳಲು ಸರಿಯಾದ ವೇಳೆಗೆ ತಂದೆಯವರು ಸಿದ್ಧರಾದರು. ಹತ್ತು ಗಂಟೆಗೆ ಕಾರಂತರ ಆಗಮನವಾಗಬೇಕಿತ್ತು. ಅವರು ಬರಲಿಲ್ಲ. ಅರ್ಧಗಂಟೆ ಕಳೆಯಿತು. ತಂದೆಯವರಿಗೆ ಕೋಪ, ಮತ್ತೆ ಅರ್ಧಗಂಟೆ ಕಳೆಯಿತು. ತಂದೆಯವರಿಗೆ ಕೋಪ ಮತ್ತೆ ಅರ್ಧಗಂಟೆ ಕಳೆಯಿತು. ತಂದೆಯವರಿಗೆ ಬೇಸರ, ಕೋಪ ಉಂಟಾಯಿತು. ಸ್ವಲ್ಪ ಹೊತ್ತು ವರಾಂಡದಲ್ಲಿ ಕಾದು ಕುಳಿತು ಆ ಮೇಲೆ 'ಸಮಯ ಪ್ರಜ್ಞೆ' ಇಲ್ಲವೆ ಇವರಿಗೆ? ಬರಲಾಗದಿದ್ದರೆ ಫೋನ್ ಮಾಡಿ ತಿಳಿಸಬಹುದಿತ್ತು. ಸಮಯ ಪಾಲನೆ ವ್ರತದಂತೆ ಆಚರಿಸುವವನು ನಾನು. ಅವರು ಬಂದರೆ ನೋಡಲು ಆಗುವುದಿಲ್ಲವೆನ್ನು ಎಂದು ಹೇಳಿ ದೇವರ ಮನೆಗೆ ಹೋದರು."[೧]

ಹೀಗೆ ಶಿಸ್ತು ಬದ್ಧವಾಗಿ ಆಡಿದ ಮಾತಿನಂತೆ ಎಷ್ಟೇ ಕಷ್ಟವಾದರೂ ನಡೆಯುತ್ತಿದ್ದರು. ಸಮಯಕ್ಕೆ ಸರಿಯಾಗಿ ಹೊಂದಿಕೊಂಡು ಹೋಗುವುದು ಅವರಿಗೆ ಒಂದು ವ್ರತ. ಅದನ್ನು ತಪ್ಪಿದರೆ ಅವರು ಬಹಳ ಬೇಸರಕ್ಕೆ ಒಳಗಾಗುತ್ತಿದ್ದರು. ಸಮಯ ತಪ್ಪಿದಾಗ ಅವರ ಮನಸ್ಸು ಸಕ್ರಿಯವಾಗಿರುತ್ತಿರಲಿಲ್ಲ. ಅವರನ್ನು ನೋಡಲು ಅವೇಳೆಯಲ್ಲಿ ಬರುತ್ತಿದ್ದ ಪ್ರತಿಯೊಬ್ಬರಿಗೂ

---

[೧] 'ಮಗಳು ಕಂಡ ಕುವೆಂಪು', ಪುಟ ೧೩೨.

ಅವರು ಸಮಯಪ್ರಜ್ಞೆ ಇಲ್ಲವೆ? ಎಂದು ಕೇಳುತ್ತಿದ್ದರು. ಕುವೆಂಪು ಅವರು ತಮ್ಮ ಕೌಟುಂಬಿಕ ಜೀವನದ ವ್ಯಾಪ್ತಿಯಲ್ಲಿಯೂ ತುಂಬು ಶಿಸ್ತುಬದ್ಧವಾಗಿದ್ದವರು. ಅವರಂತೆಯೇ ಸಾಧ್ಯವಾದಷ್ಟು ಅವರ ಮಕ್ಕಳನ್ನು ಶಿಸ್ತಿನಿಂದ ಬೆಳೆಸಿದ್ದರು. ಆದರೆ ಆ ಎಲ್ಲಾ ಶಿಸ್ತುಗಳು ಬಲಾತ್ಕಾರವಾಗಿರಲಿಲ್ಲ. ಅಚ್ಚರಿ ಎಂದರೆ ಕುವೆಂಪು ಅವರನ್ನು ನೋಡಿಯೇ ಅವರ ಬಂಧುವರ್ಗ ತನಗೆ ತಾನೇ ಶಿಸ್ತಿನಿಂದ ನಡೆದುಕೊಳ್ಳುತ್ತಿತ್ತು. ಅದು ಕುವೆಂಪು ಅವರ ಶಿಸ್ತಿನ ಕಠಿಣತೆಯನ್ನು ತೋರಿಸುತ್ತದೆಯಲ್ಲವೆ?

ಕುವೆಂಪು ಅವರು ಅಧಿಕಾರದಲ್ಲಿದ್ದಾಗ ಶಿಸ್ತಿಗೆ ಕಳಶ ಪ್ರಾಯವಾಗಿದ್ದರು. ಅವರ ಸಮಯಪಾಲನೆ, ಕರ್ತವ್ಯ ಪಾಲನೆ, ನೀತಿ ಪಾಲನೆ, ಕಾನೂನು ಪಾಲನೆ ಇವು ಎಂದೂ ಹಾದಿ ತಪ್ಪಿರಲಿಲ್ಲ. ಅವರು ಹಿರಿಯ ಪದವಿಯಲ್ಲಿದ್ದೇನೆಂದು ಕರ್ತವ್ಯದ ಮೇಲಾಗಲಿ, ಸಮಯದ ಮೇಲಾಗಲಿ, ನಿರ್ಲಕ್ಷ್ಯ ತೋರಿದವರಲ್ಲ. ಕುವೆಂಪು ಅವರ ಈ ಶಿಸ್ತು ಪ್ರಜ್ಞೆಯನ್ನು ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿಯೂ ಅಳವಡಿಸಿಕೊಂಡರೆ; ಸಾಮಾಜಿಕ ಬದುಕಿನ ಜೊತೆಗೆ ಖಾಸಗಿ ಬದುಕು ಶುಚಿಯಾಗಿರುತ್ತದೆ. ಆ ರೀತಿಯ ಬದುಕನ್ನು ಬದುಕಲು ನಾವು ದೃಢ ಸಂಕಲ್ಪವನ್ನು ಮಾಡಬೇಕಿದೆ.

ಉಪಸಂಹಾರ

ಕುವೆಂಪು ಅವರ ವಿಶ್ವ ವಿಭೂತಿ ವ್ಯಕ್ತಿತ್ವವನ್ನು ನನಗೆ ತಿಳಿದಂತೆ ಮಕ್ಕಳಿಬ್ಬರ ನೆನಪಿನ ಪುಟಗಳಿಂದ ಭಟ್ಟಿಯಿಳಿಸಲು ಪ್ರಯತ್ನಪಟ್ಟಿದ್ದೇನೆ. ಆ ದಿಕ್ಕಿನಲ್ಲಿ ನಾನು ಮಾಡಿರುವ ಕೆಲಸವು ಪರಿಪೂರ್ಣವೆಂಬ ನಂಬಿಕೆ ನನಗಿಲ್ಲ. ಏಕೆಂದರೆ ನಾವು ಮಾಡುವ ಯಾವುದೇ ಕೆಲಸವು ಒಂದಲ್ಲ ಒಂದು ರೀತಿಯಲ್ಲಿ ತನ್ನ ಅಪರಿಪೂರ್ಣತೆಯನ್ನು ಸಾಧಿಸುತ್ತಿರುತ್ತವೆ. ಆದರೂ ನನ್ನೆಲ್ಲಾ ಗುರುಗಳ ಮಾರ್ಗದರ್ಶನ ಬಲದಿಂದ ನನ್ನ ಬುದ್ಧಿಮತ್ತೆಗೆ ಅನುಗುಣವಾಗಿ 'ಕವಿ ವಿಭೂತಿ'ಯ ವ್ಯಕ್ತಿತ್ವವನ್ನು ಕಟ್ಟಿಕೊಡುವ ಸಾಹಸ ಮಾಡಿದ್ದೇನೆ. ಸಮುದ್ರದಲ್ಲಿ ಮುಳುಗಿ ಉಸಿರು ಕಟ್ಟಿ ಎಷ್ಟು ಮುತ್ತು, ಹವಳ, ವಜ್ರ – ವೈಢೂರ್ಯಗಳನ್ನು ತರಲು ಸಾಧ್ಯವೋ ಅಷ್ಟು ಮಾತ್ರ ನಾನು ಹೊರ ತಂದಿದ್ದೇನೆ. ಸಮುದ್ರ ಸಂಪತ್ತನ್ನು ಸೂರೆ ಮಾಡಿ ಬರಿದು ಮಾಡಲು ಸಾಧ್ಯವೇ? ಅಸಾಧ್ಯ; ಏಕೆಂದರೆ-ಅದು ಅಕ್ಷಯ ಭಂಡಾರ. ಯಾವ ರೀತಿಯ ವಿಷಯ ಮಂಥನಕ್ಕಾದರೂ ಸಾಂಪ್ರದಾಯಿಕ ತೆರೆ ಇದ್ದೇ ಇರುತ್ತದೆ. ಅದು ಮತ್ತೊಂದು ದೃಷ್ಟಿಯಲ್ಲಿ ತೆರೆಯನ್ನು ತೆರವುಗೊಳಿಸುವ ತಾಣವಾಗಿಯೇ ತೆರೆಯಾಗಿರುತ್ತದೆಯಷ್ಟೇ. ಈ ಹಿನ್ನೆಲೆಯನ್ನು ಸ್ಮರಿಸುತ್ತ ಕೈಮುಗಿಯುತ್ತೇನೆ.

ಪರಾಮರ್ಶನ ಗ್ರಂಥಗಳು

- ಅಣ್ಣನ ನೆನಪು – ಪೂರ್ಣ ಚಂದ್ರ ತೇಜಸ್ವಿ
  ಪುಸ್ತಕ ಪ್ರಕಾಶನ
  ೯೧, ೯ನೇ ಮೇನ್ ರಸ್ತೆ, ಸರಸ್ವತಿಪುರಂ,
  ಮೈಸೂರು – ೯.

- ಮಗಳು ಕಂಡ ಕುವೆಂಪು – ತಾರಿಣಿ ಚಿದಾನಂದ
  ಪುಸ್ತಕ ಪ್ರಕಾಶನ
  ೯೧, ೯ನೇ ಮೇನ್ ರಸ್ತೆ, ಸರಸ್ವತಿಪುರಂ,
  ಮೈಸೂರು – ೯.

- ಕುವೆಂಪು ಸಮಗ್ರ ಕಾವ್ಯ ಸಂಪುಟ ೧, ೨
  ಪ್ರಕಾಶಕರು
  ಪ್ರೊ. ಎ.ವಿ. ನಾವಡ
  ನಿರ್ದೇಶಕರು, ಪ್ರಸಾರಾಂಗ
  ಕನ್ನಡ ವಿಶ್ವವಿದ್ಯಾಲಯ, ಹಂಪಿ
  ವಿದ್ಯಾರಣ್ಯ – ೭೬.

- ನೆನಪಿನ ದೋಣಿಯಲ್ಲಿ – ಕುವೆಂಪು
  ಪ್ರಕಾಶಕರು
  ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
  ಮೈಸೂರು – ೧೨

- ತೇಜಸ್ವಿ ಕಥನ – ಟಿ.ಪಿ. ಅಶೋಕ
  ಅಕ್ಷರ ಪ್ರಕಾಶನ, ಹೆಗ್ಗೋಡು
  ಸಾಗರ, ಕರ್ನಾಟಕ – ೧೭.

- ಶ್ರೀ ರಾಮಾಯಣ ದರ್ಶನಂ – ಕುವೆಂಪು
  ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
  ಮೈಸೂರು ವಿಶ್ವವಿದ್ಯಾನಿಲಯ
  ಮಾನಸ ಗಂಗೋತ್ರಿ,
  ಮೈಸೂರು – ೦೬.

- ರಾಷ್ಟ್ರಕವಿ ಭಾಷಣಗಳು – ದೇ.ಜ.ಗೌ
  ಸಹ್ಯಾದ್ರಿ ಪ್ರಕಾಶನ
  ಶ್ರೀ ಕುವೆಂಪು ವಿದ್ಯಾಪರಿಷತ್ತು
  ಕವಿ ಶೈಲ, ಜಯಲಕ್ಷ್ಮೀಪುರಂ, ಮೈಸೂರು – ೧೨.

- ಸಹ್ಯಾದ್ರಿಯ ಸೂರ್ಯ – ಸಂ. ಡಾ. ಚಕ್ಕರೆ ಶಿವಶಂಕರ್
  ಕನ್ನಡ ಸಾಹಿತ್ಯ ಪರಿಷತ್ತು
  ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
  ಬೆಂಗಳೂರು – ೧೮.

- ವಿಚಾರ ಕ್ರಾಂತಿಗೆ ಆಹ್ವಾನ – ಕುವೆಂಪು
  ಉದಯರವಿ ಪ್ರಕಾಶನ
  ವಾಣಿವಿಲಾಸ ಪುರಂ,
  ಮೈಸೂರು – ೦೨.

- ಕುವೆಂಪು ಸಂದರ್ಶನ – ಸಿ.ಪಿ.ಕೆ.
  ಪ್ರಕಾಶಕರು, ನಿರ್ದೇಶಕರು
  ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು – ೦೬.

- ಕುವೆಂಪು ಅವರ ವೈಚಾರಿಕತೆ – ಡಾ.ಎಚ್. ತಿಪ್ಪೇರುದ್ರಸ್ವಾಮಿ
  ಕನ್ನಡ ಅಧ್ಯಯನ ಸಂಸ್ಥೆ
  ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ
  ಮೈಸೂರು – ೦೬.

- ಕಾನೂರು ಹೆಗ್ಗಡತಿ – ಕುವೆಂಪು


- ಮಲೆಗಳಲ್ಲಿ ಮದುಮಗಳು – ಕುವೆಂಪು
  ಉದಯರವಿ ಪ್ರಕಾಶನ
  ವಾಣಿವಲಾಸಪುರಂ, ಮೈಸೂರು – ೨

- ಕುವೆಂಪು ಮನದ ಕಾವ್ಯಕನ್ನಿಕೆ ಹೇಮಾವತಿ
  (ಬಿಡಿ ಲೇಖನ)
  ಓ ಮನಸೇ /೫೬
  ಫೆಬ್ರವರಿ – ೨೦೦೬.

- ಬದುಕಿನ ಒಳನೋಟಗಳ ನಿರೂಪಣೆ
  (ಬಿಡಿ ಲೇಖನ)
  ಓ. ಎಲ್. ನಾಗಭೂಷಣಸ್ವಾಮಿ
  'ಮಯೂರ' ಸೆಪ್ಟೆಂಬರ್ ೦೨ ಪುಟ, ೪೦.


ಅನುಬಂಧ





ಖ್ಯಾತ ಕಲಾವಿದ 'ಆರ್‌ಎಸ್ಸೆನ್'ರವರು ರಚಿಸಿದ ಕುವೆಂಪುರವರ ರೇಖಾಚಿತ್ರ





ರಾಷ್ಟ್ರಕವಿ ಕುವೆಂಪು



ಕುಪ್ಪಳ್ಳಿಯ ಮನೆ



ಸ್ನೇಹಿತರೊಂದಿಗೆ ಕುವೆಂಪು









ಉದಯ ರವಿ ಮನೆಯ ಮುಂಭಾಗ




ಕುವೆಂಪು ಅವರು ಮಡದಿ ಮಕ್ಕಳೊಂದಿಗೆ




ಕುವೆಂಪು, ಚೈತ್ರ, ತೇಜಸ್ವಿ, ಕಲಾ, ತಾರಿಣಿ



ಛಾಯಾಗ್ರಾಹಕ ಪೂರ್ಣಚಂದ್ರ ತೇಜಸ್ವಿ



Design: RK

























ಪೂರ್ಣಚಂದ್ರ ತೇಜಸ್ವಿಯವರಿಗೆ ಅಂತಿಮ ನಮನ